ಜನಶಕ್ತಿ

ದುಡಿವ ಜನರ ಪ್ರಾಣಮಿತ್ರ

ಸಂಪುಟ 2 ಸಂಚಿಕೆ 32

ಆಗಸ್ಟ್ 10. 2008

ಕನ್ನಡ ವಾರಪತ್ರಿಕೆ

ರೂ. 5/-

www.janashakthi.org

ಸಾಮ್ರಾಜ್ಯಶಾಹಿ ವಿರೋಧಿ ಯೋಧ ಸಮರ್ಪಿತ ಕ್ರಾಂತಿಕಾರಿ

ಕಾಂ. ಸುರ್ಜಿತ್ ಅಮರ





'ಬೆಲೆ' ತೆರುತ್ತಿರುವ ಭಾರತೀಯರು



ಆದಿ ಉಡುಪಿ ಬೆತ್ತಲೆ ಪ್ರಕರಣ: ಎಲ್ಲಿ ನ್ಯಾಯ ?

ವಿಶ್ವ ಕ್ರೀಡಾ ಸಂಭ್ರಮ - ಒಲಂಪಿಕ್ಸ್: ಚೀನಾ ಸರ್ವಸಜ್ಜು

ಇತಿಹಾಸದ ವಿಕೃತ ಪರಿಕಲ್ಪನೆ

ಉನ್ನತ ಶಿಕ್ಷಣದ ಪಠ್ಯಪುಸ್ತಕಗಳಲ್ಲಿ 'ಭಾರತೀಯ' ಸಂಸ್ಕೃತಿಯನ್ನು ಸೇರಿಸಲು ಅಗತ್ಯವಿರುವ ಎಲ್ಲಾ ಪ್ರಯತ್ನಗಳನ್ನು ರಾಜ್ಯ ಸರಕಾರವು ಕೈಗೊಳ್ಳಲಿದೆಯೆಂದು ಉನ್ನತ (ಅವನತ!) ಶಿಕ್ಷಣ ಸಚಿವ ಅರ್‍ವಿಂದ ಲಿಂಬಾವಳಿ ಹೇಳಿರುವುದನ್ನು ಗಮನಿಸಿದಾಗ ಇವರು ಹೇಳುವ ಸಂಸ್ಕೃತಿ ಯಾವುದೆಂದು ತಿಳಿಯಲು ಇವರ ಕುಟುಂಬದ ಎನ್‌ಡಿಎ ಕೇಂದ್ರದಲ್ಲಿ ಅಧಿಕಾರದಲ್ಲಿದ್ದಾಗ ಶಿಕ್ಷಣ ಕ್ಷೇತ್ರದಲ್ಲಿ ಅವರು ಮಾಡಿದ ಸರಣಿ ಅತ್ಯಾಚಾರ ಪ್ರಸಂಗಗಳಲ್ಲಿ ನೆನಪಿಸಿಕೊಳ್ಳುವ ಸಲುವಾಗಿ ಆಗ ಸಿದ್ದವಾಗಿದ್ದ ಲೇಖನ ಈಗ. ಹಾಗೆ.

ನೋಟ



ಡಾ. ಜಿ. ಭಾಸ್ಕರ ಮಯ್ಯ

ಭಾರತದಲ್ಲಿ ಪ್ರಜಾಪ್ರಭುತ್ವವನ್ನು ಫ್ಯಾಸಿಸ್ಟಿಕ್ ಶಕ್ತಿಗಳು ತಮ್ಮ ನಿಯಂತ್ರಣಕ್ಕೆ ತೆಗೆದುಕೊಂಡ ನಂತರ ಅವು ಭಾರತದ ಇತಿಹಾಸ ಸಂಶೋಧನಾ ಪರಿಷತ್ತಿನ ಮಹಾನ್ ಇತಿಹಾಸಕಾರರನ್ನೆಲ್ಲಾ ತೆಗೆದುಹಾಕಿ ತಮ್ಮ ಅಜೆಂಡಾಕ್ಕೆ ಅನುಕೂಲವಾದ, ಹೆಸರಿಗೆ ಮಾತ್ರ ಇತಿಹಾಸಕಾರರಾಗಿರುವ ಕೋಮುವಾದಿ ಗಳನ್ನು ಆ ಸ್ಥಾನಗಳಿಗೆ ತುಂಬಿಕೊಂಡವು. ಅಂತರರಾಷ್ಟ್ರೀಯ ಖ್ಯಾತಿಯ ರೋಮಿಲಾ ಥಾಪರ್, ಆರ್.ಎಸ್.ಶರ್ಮ ಮೊದಲಾದವರ ಪುಸ್ತಕಗಳನ್ನು ಅಮಾನ್ಯಗೊಳಿಸಲಾಯಿತು.

ನಾವೇ ಪ್ರಾಚೀನ, ನಾವೇ ಶ್ರೇಷ್ಠ

ಇಂದು ಚರಿತ್ರೆಯ ರಚನೆ ಯಾವ ಮಟ್ಟಕ್ಕೆ ಮುಟ್ಟಿದೆಯೆಂದರೆ ಅದರ ಪ್ರಕಾರ ಭಾರತದಲ್ಲಿ ಯಾವೆಲ್ಲ-ಏನೆಲ್ಲಾ ಸಂಸ್ಕೃತಿಗಳಿವೆಯೋ ಅವುಗಳೆಲ್ಲವೂ ವೈದಿಕ ಸಾಹಿತ್ಯದಿಂದ ಹುಟ್ಟಿಕೊಂಡವು. ಆರ್ಯರು ಹೊರಗಿನಿಂದ ಬಂದವರಲ್ಲ, ಭಾರತದಿಂದಲೇ ಕೆಲವು ಪಂಗಡಗಳು ಹೊರಗೆ ಹೋಗಿ ಅಲ್ಲೆಲ್ಲಾ ಸಂಸ್ಕೃತಿಯ ಹಾಗೂ ನಾಗರೀಕತೆಯ ದೀಪ ಹಚ್ಚಿದರು. ಅವರ ಚರಿತ್ರೆಯ ಪ್ರಕಾರ ಚೀನಾದ ಪ್ರಾಚೀನ ಸಂಸ್ಕೃತಿಯೂ ಭಾರತದ್ದೇ ಕೊಡುಗೆ. ಆರ್ಯನ್ ರೇಸ್ ಎಂಬುದೇನಿದೆಯೋ ಅದೇ ಪ್ರಪಂಚದಲ್ಲಿ ಮೊತ್ತಮೊದಲು ಅವಿರ್ಭವಿಸಿದುದು. ಪ್ರಥಮ ಮನುಷ್ಯನ ಅವಿರ್ಭಾವವಾದುದೆ ಈ ಹಿಂದೂಸ್ಥಾನದಲ್ಲೇ! ವೇದಗಳ ನಾಗರೀಕತೆಯ ಕಾಲ ಎಂಟುಸಾವಿರ ವರ್ಷಗಳಿಗೂ ಹಿಂದಿನದು. ಯಾವುದೇ(ಭಾರತೀಯ) ಹಳೇ ತಲೆಮಾರಿನ ಗಂಭೀರ ಇತಿಹಾಸಕಾರರು ಉದಾ- ಜಿ.ಆರ್.ಭಂಡಾಕರ್ ಇರಲಿ, ಆರ್.ಸಿ.ಮುಜುಂದಾರ ಇರಲಿ-ಈ ತನಕ ಇಂತಹ ಅಪ್ಪಟ ಸುಳ್ಳುಗಳನ್ನು ಹೇಳಿಲ್ಲ. ಈ ಫ್ಯಾಸಿಸ್ಟ್ ಚರಿತ್ರೆಯ ಪ್ರಕಾರ ಮೊದ್ಲ ಮನುಷ್ಯ ಸರಸ್ವತಿ ನದಿ ತೀರದಲ್ಲಿ ಹುಟ್ಟಿದ ಈ ನದಿಯು ಅವರ ಪ್ರಕಾರ ಕರನಾಲ್-ಅಂಬಾಲಾ ಜಿಲ್ಲೆ(ಹರ್ಯಾಣ) ಯಲ್ಲಿ ಹರಿಯುತ್ತಿತ್ತು. ತಮಾಷೆಯ ಸಂಗತಿಯೆಂದರೆ ಭಾಜಪಾ ಇತಿಹಾಸಕಾರರು ಮೂಲ ಮಾನವ ಜಾತಿಯನ್ನು 'ರಾಮಾಪಿತಿಕಸ್' ನಲ್ಲಿ ಗುರುತಿಸುತ್ತಾರೆ. ಇದು ಮನುಷ್ಯಜಾತಿಯ ಪೂರ್ವಜ ಅಲ್ಲವೇ ಅಲ್ಲ, ಬದಲಿಗೆ ಕಾಡುಮನುಷ್ಯ (ಮಂಗ)ನ ಪೂರ್ವಜ!

ತಾಜ್‌ಮಹಲ್ ಅಲ್ಲ ತೇಜೋ ಮಹಲ್!!

ಈ ವಿಕೃತ ಇತಿಹಾಸಕಾರರ ಪ್ರಕಾರ ಇಲ್ಲಿಯ ಸಂಸ್ಕೃತಿಗಳೆಲ್ಲಾ ವೇದದಿಂದಲೇ ಹುಟ್ಟಿದವುಗಳಾದ್ದರಿಂದ ದ್ರಾವಿಡ ಮೂಲವೆಂಬುದು ಅವರ ಪ್ರಕಾರ ಒಂದು ಅಸಂಬದ್ಧ ಕಲ್ಪನೆ. ಇದರಿಂದಾಗಿ ದ್ರಾವಿಡರಿಗೆ ಸ್ವತಂತ್ರ ಅಸ್ತಿತ್ವ ಇಲ್ಲವಾದಂತಾಯಿತು! ಎಲ್ಲಾ ದ್ರಾವಿಡ ಭಾಷೆಗಳಿಗೂ ಸಂಸ್ಕೃತವೇ ಮೂಲ! ವಿಜ್ಞಾನದಲ್ಲಿ ಏನೆಲ್ಲಾ ಪ್ರಗತಿಗಳು ಸಾಧಿಸಲ್ಪಟ್ಟಿದೆಯೊ ಅವೆಲ್ಲವೂ ಕ್ರಿ.ಪೂ.6000 ವರ್ಷಗಳ ಹಿಂದೆಯೇ ಆಗಿವೆ. ಈ ದೇಶದಲ್ಲಿ ಏನೆಲ್ಲಾ ಪ್ರಾಚೀನ ಸ್ಮಾರಕಗಳಿವೆಯೋ ಅವೆಲ್ಲವೂ ಹಿಂದೂಗಳ ರಚನೆ. ಉದಾ: ತಾಜಮಹಲ್ ಶಾಹಜಹಾನ್ ಕಟ್ಟಿಸಿದ್ದಲ್ಲ ಅದು ಮಾನಸಿಂಗ್ ದೊರೆಯ ತೇಜೋಮಹಲ್. ದಿಲ್ಲಿಯ ಕೋಟೆ, ಆಗ್ರಾಕೋಟೆ ಯಾವುದೂ ಮುಗಲರ ರಚನೆಗಳೇ ಅಲ್ಲ. ಈ ಸರ್ಕಾರಿ ಚರಿತ್ರೆಕಾರರ ಪ್ರಕಾರ ನಾವು ವೈಮಾನಿಕ ಶಾಸ್ತ್ರ , ಅಣುಬಾಂಬ್‌ಗಳನ್ನು ಕೂಡಾ ಬಲ್ಲವರಾಗಿದ್ದೆವು. ಇಂದು ವಿದೇಶಿಯರು ತಮ್ಮದೆಂದು ಹೇಳಿಕೊಳ್ಳುವ ಅವಿಷ್ಕಾರಗಳೆಲ್ಲವೂ ಎಂದೋ ವೇದಗಳಲ್ಲಿ ನಿರೂಪಿತವಾಗಿವೆ.

ಈ ಫ್ಯಾಸಿಸ್ಟ್‌ರು "ಹಿಂದೂಧರ್ಮ" ವನ್ನು ಕೂಡಾ Missread ಮಾಡಿದ್ದಾರೆ. ಇಲ್ಲಿನ ಧರ್ಮಗಳಲ್ಲಿರುವ ಪ್ಯಾಂಥೇಯಿ ಸಮ್, ಮೋನೋಥೇಯಿಸಮ್, ಹೆಚ್ಚೇಕೆ ಶಂಕರಾಚಾರ್ಯರ ತತ್ವಶಾಸ್ತ್ರಕ್ಕೂ ಇಲ್ಲಿ ಜಾಗ ಇಲ್ಲ. ಗೌತಮಬುದ್ಧ ಏನು ಹೇಳಿದ? ಮಹಾವೀರ ಏನು ಹೇಳಿದ?- ಏನೂ ಹೇಳಿಲ್ಲ! ಏಕೆಂದರೆ ಎಲ್ಲಾ ತತ್ವಶಾಸ್ತ್ರಗಳನ್ನು 8000 ವರ್ಷಗಳ ಹಿಂದೆಯೇ ಹೇಳಿಯಾಗಿದೆ. ಅಶೋಕನಿಂದಾಗಿ ಬೌದ್ಧಧರ್ಮವು ವಿಶ್ವವ್ಯಾಪಿ ಧರ್ಮವಾಯಿತು. ಆದರೆ ಈ ಅಶೋಕನಿಗೇ ಅವರ ಇತಿಹಾಸದಲ್ಲಿ ಸ್ಥಾನವಿಲ್ಲ. ಏಕೆಂದರೆ ಆತ ವೈದಿಕ, ಜೈನ, ಬೌದ್ಧ ಎಲ್ಲರನ್ನೂ ಸಮಾನವಾಗಿ ಕಾಣುತ್ತಿದ್ದ. ಅಹಿಂಸಾವಾದಿಯಾಗಿದ್ದ. ಇವು ಹಿಂದೂವಾದಿಗಳ ದೃಷ್ಟಿಯಲ್ಲಿ ಮಹಾಪರಾಧ.

ಇಂಡಿಯನ್ ಎಕ್ಸ್‌ಪ್ರೆಸ್‌ನಲ್ಲಿ ಆರ್‌ಎಸ್‌ಎಸ್ ನ ಓರ್ವ ಫ್ರೆಂಚ್ ಪ್ರಿಯಮಿತ್ರ ಹೀಗೆ ಬರೆದಿದ್ದ- 'ಅಶೋಕನ ಅಹಿಂಸೆಯಿಂದಾಗಿ ಭಾರತದಲ್ಲಿ ಎಂತಹ ಕೆಟ್ಟ ಪರಿಸ್ಥಿತಿ ಉಂಟಾಯಿತೆಂದರೆ ಅಲೆಕ್ಸಾಂಡರ್ ಭಾರತದ ಮೇಲೆ ವಿಜಯ ಸಾಧಿಸಿದ' ಎಂತಹ ದಯನೀಯ ಸ್ಥಿತಿಯೆಂದರೆ ಈ ಲೇಖಕನಿಗೆ ಇತಿಹಾಸದ ಕ್ರೋನಾಲಜಿ ಕೂಡ ಗೊತ್ತಿಲ್ಲ! ಅಲೆಕ್ಸಾಂಡರ್ ಅಶೋಕನಿಗಿಂತ ಬಹಳ ಹಿಂದೆಯೇ ಭಾರತಕ್ಕೆ ಬಂದಿದ್ದ. ಇತಿಹಾಸ ಮೂಲ ಪಾಠಗಳನ್ನೇ ತಿರಿಚುವ ಈ ವಿಕೃತಿಗೆ ಯಾವ ರೀತಿ ಓರ್ವ ಇತಿಹಾಸದ ಗಂಭೀರ ವಿದ್ಯಾರ್ಥಿ ಸ್ಪಂದಿಸಬಲ್ಲ? ಪ್ರಖ್ಯಾತ ಇತಿಹಾಸಕಾರ ಇರ್ಫಾನ್ ಹಬೀಬ್ ಈ ಕುರಿತು ಹೀಗೆ ಬರೆಯುತ್ತಾರೆ- "ಇಂಡಿಯನ್ ಎಕ್ಸ್‌ಪ್ರೆಸ್‌ನ ಈ ಬರಹವನ್ನು ನಾನು ಕುತೂಹಲದಿಂದ. ಅದಕ್ಕೆ ಬರಬಹುದಾದ ಪ್ರತಿಕ್ರಿಯೆಗಳ ಬಗೆಗೆ ಗಮನಿಸುತ್ತಾ ಇದ್ದೆ. ಆದರೆ, ದುರದೃಷ್ಟವೆಂದರೆ ಯಾರೊಬ್ಬರೂ ಇಂಥ ಸುಳ್ಳಿನ ಬಗ್ಗೆ ಪ್ರತಿಕ್ರಿಯೆಯನ್ನೇ ವ್ಯಕ್ತಪಡಿಸಲಿಲ್ಲ.".

ಈ ಭಾಜಪಾ ಕೃಪಾಪೋಷಿತ ಇತಿಹಾಸದಲ್ಲಿ ಗೌತಮಬುದ್ದನಿಗೆ ಸ್ಥಾನವಿಲ್ಲವೆಂದ ಮೇಲೆ ಇನ್ನು ಅಶೋಕನಿಗೆ ಹೇಗೆ ಸ್ಥಾನ ದೊರಕಬೇಕು? ಇದೇ ರೀತಿ ಅವರು ಮಧ್ಯಯುಗದ ಇತಿಹಾಸದಲ್ಲಿ ಅಕ್ಬರರನ್ನೂ ತಿರಸ್ಕರಿಸಿದ್ದಾರೆ. ಅವರ ಪ್ರಕಾರ ಆತ ಪ್ರಚ್ಛನ್ನ ಹಿಂದೂ ವೈರಿ!

ಗಾಂಧಿಗೂ ಜಾಗವಿಲ್ಲ

ಭಾರತೀಯ ವಿದ್ಯಾಭವನದವರಿಂದ ಭಾರತೀಯ ಸಂಸ್ಕೃತಿಯನ್ನು ಪ್ರತಿಬಿಂಬಿಸುವಂತಹ ಒಂದು ದೊಡ್ಡ ಪ್ರದರ್ಶನವನ್ನು ದಿಲ್ಲಿಯಲ್ಲಿ ಆಯೋಜಿಸಲಾಗಿತ್ತು. 30 ಲಕ್ಷ. ರೂ.ವೆಚ್ಚದ ಈ ಬೃಹತ್ ಪ್ರದರ್ಶನದಲ್ಲಿ 'ಸಿಂಧೂ-ಸರಸ್ವತಿ'. ನಾಗರೀಕತೆಯನ್ನು ಹಿರಿದಾಗಿ ಚಿತ್ರಿಸಲಾಗಿತ್ತು. ಆದರೆ, ಈ ಪ್ರದರ್ಶನದಲ್ಲಿ ಗಾಂಧಿ, ಠಾಗೋರ್ ಕೂಡಾ ಕಾಣೆಯಾಗಿದ್ದರು!

ರಾಷ್ಟ್ರಪಿತ ಮಹಾತ್ಮ ಗಾಂಧಿಯವರನ್ನು ಇಂದು ಎಲ್ಲಾ ಕಡೆಯೂ ಈ ಸಂಘ ಪರಿವಾರದ ಪ್ರಚಾರದಿಂದಾಗಿ ತೀವ್ರವಾಗಿ ದ್ವೇಷಿಸಲಾಗುತ್ತಿದೆ. ಈ ನವ ಇತಿಹಾಸಕಾರರು ಸ್ವಾತಂತ್ರ್ಯ ಹೋರಾಟದಲ್ಲಿ ಕಾಂಗ್ರೆಸ್, ಗಾಂಧೀಜಿಯವರ ಪಾತ್ರವನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿದ್ದಾರೆ.

ಅತ್ಯಂತ ವಿಲಕ್ಷಣ ಸಂಗತಿಯೆಂದರೆ, ಅಂದು ಯಾರು ಬ್ರಿಟಿಷರಿಗೆ ಮಾಹಿತಿ ಒದಗಿಸುತ್ತಿದ್ದರೋ ಬ್ರಿಟಿಷರನ್ನು ಓಲೈಸುತ್ತಿದ್ದರೋ ಅವರು ಅಥವಾ ಅವರಂಥವರು ಇಂದು ಅಪ್ರತಿಮ ಸ್ವಾತಂತ್ರ್ಯ ಹೋರಾಟಗಾರರು! ಓರ್ವ ಮಹಾಮಹಿಮ 1942ರ ಚಳುವಳಿಯಲ್ಲಿ ಕ್ರಾಂತಿಕಾರಿ ಹೋರಾಟಗಾರರನ್ನು ಬ್ರಿಟೀಷರಿಗೆ ಹಿಡಿದುಕೊಡಲು ಸಹಕರಿಸಿದ ವ್ಯಕ್ತಿ. ತನ್ನ ವಿನಂತಿ ಪತ್ರವನ್ನು ಬ್ರಿಟಿಷ್ ಸನ್ನಿಧಾನಕ್ಕೆ ಸುಂದರವಾದ ಉರ್ದುವಿನಲ್ಲಿ ಬರೆದು ಅದಕ್ಕೆ ಇಂಗ್ಲೀಷ್ ಸಹಿ ಮಾಡಿದ್ದ! ಇಂದು ಹಿಂದೀ ಉದ್ಧಾರಕ್ಕೆ ಟೊಂಕ ಕಟ್ಟಿ ನಿಂತ ಆ ಸ್ವಾತಂತ್ರ್ಯ ಹೋರಾಟಗಾರನೇ ನಮ್ಮ ದೇಶದ ಪ್ರಭುತ್ವದ ಉನ್ನತ ಪೀಠವನ್ನು ಅಲಂಕರಿಸಿದವ!

ಇಂಥ ಚರಿತ್ರೆ ನಮ್ಮ ವಿದ್ಯಾರ್ಥಿಗಳಿಗೆ ಇಂದು ಪಠ್ಯ ಪುಸ್ತಕಗಳು, ಫ್ಯಾಸಿಸಂ ತನ್ನ ಮಾರಕ ಆಕ್ರಮಣವನ್ನು ಮೊದಲು ಮಾಡುವುದೇ ಇತಿಹಾಸದ ಮೇಲೆ. 'ಕಾಲಾಯ ತಸ್ಮೈನಮಃ'.

ಪುರಾತತ್ವ ಇಲಾಖೆಯ ಸಮಾಧಿ

ಮಾನವ ನಿರ್ಮಿತ ಪುರಾತನ ಅವಶೇಷಗಳನ್ನು ಅನ್ವೇಷಿಸಿ ಅಧ್ಯಯನ ನಡೆಸಿ ಮಾನವ ಇತಿಹಾಸವನ್ನು ವೈಜ್ಞಾನಿಕವಾಗಿ ಸಂಶೋಧಿಸುವ ವಿಜ್ಞಾನದ ಒಂದು ಶಾಖೆಯ ಪುರಾತತ್ವಶಾಸ್ತ್ರ (Archaeology). ಭಾರತದಲ್ಲಿ ಈ ವಿಭಾಗಕ್ಕೆ ವಿಶ್ವದಲ್ಲಿಯೇ ಮಹತ್ವದ ಸ್ಥಾನವಿತ್ತು. 1784ರಲ್ಲಿ ಬಂಗಾಳದಲ್ಲಿ ಏಶಿಯಾಟಿಕ್ ಸೊಸಾಯಿಟಿ ಸ್ಥಾಪನೆಯಾಯಿತು. ಅಂದಿನಿಂದ ಈ ಶಾಸ್ತ್ರ ಇಲ್ಲಿ ಬೆಳೆಯತೊಡಗಿತು. 1861 ರಲ್ಲಿ ಅಲೆಕ್ಸಾಂಡರ್ ಕನ್ನಿಂಗ್‌ಹ್ಯಾಮ್ ಅವರು ತಮ್ಮ ಪುರಾತತ್ವ ಸಂಶೋಧನೆಗಳನ್ನು ನಡೆಸಿ ಅವುಗಳ ವರದಿಗಳನ್ನು "Archaeological Surveys' ಎಂಬ ಹೆಸರಿನಲ್ಲಿ ಪ್ರಕಟಿಸುತ್ತಿದ್ದರು. ಅವರ ಪ್ರಯತ್ನದಿಂದಾಗಿ ಈ ವಿಭಾಗಕ್ಕೆ ಬ್ರಿಟಿಷರಿಂದ ಭದ್ರಬುನಾದಿ ಪ್ರಾಪ್ತವಾಗಿತ್ತು. 1904ರಲ್ಲಿ ಪ್ರಾಚೀನ ಸ್ಮಾರಕಗಳ ರಕ್ಷಣಾ ಅಧಿನಿಯಮ ಜಾರಿಗೆ ಬಂತು. ಜಾನ್ ಮಾರ್ಶೆಲ್ ಮತ್ತು ಮಾರ್ಟಿಮರ್ ವ್ಹೀಲರ್ -ತಮ್ಮ ಉತ್ಖನನದ ವೈಜ್ಞಾನಿಕ ಸಾಧನಗಳನ್ನು ಅಭಿವೃದ್ಧಿಪಡಿಸುತ್ತಾ ಬಂದರು. ಪ್ರಾಚೀನ ಸ್ಮಾರಕಗಳು, ಸ್ಥಳಗಳು, ಶಾಸನಗಳು-ಪುರಾತತ್ವ ಸಂಶೋಧನಾ ಮಹತ್ವವುಳ್ಳ ಸ್ಥಾನಗಳು-ಇವುಗಳನ್ನೆಲ್ಲಾ ಅತ್ಯಂತ ಜಾಗರೂಕತೆಯಿಂದ ರಕ್ಷಿಸುವ ಕಠಿಣ ಕಾನೂನುಗಳು ಹಾಗೂ ತತ್‌ಸಂಬಂಧಿ ವ್ಯವಸ್ಥೆ ಜಾರಿಗೆ ಬಂತು. ಇದರಿಂದಾಗಿ ಅಂತಹ ಸ್ಮಾರಕ, ಸ್ಥಳ, ಅವಶೇಷಗಳ ವಿಸ್ತೃತವಾದ ಪಟ್ಟಿಯನ್ನು ಮಾಡಲಾಯಿತು.

ಸ್ವಾತಂತ್ರ್ಯಾನಂತರ. ಈ ವಿಭಾಗವು ಸ್ವಾಭಾವಿಕವಾಗಿಯೇ ಭಾರತ ಸರ್ಕಾರದ ಅಧೀನಕ್ಕೆ ಒಳಪಟ್ಟು ವಿಸ್ತೃತವಾಗಿ ಬೆಳೆಯಿತು. ಎ.ಘೋಷ್‌ರವರ ನೇತೃತ್ವದಲ್ಲಿ ಇದು ತನ್ನ ಕಾರ್ಯಚಟುವಟಿಕೆಗಳಿಂದಾಗಿ ಪ್ರಪಂಚದ ಗಮನವನ್ನು ಸೆಳೆದು ಗೌರವಕ್ಕೆ ಪಾತ್ರವಾಯಿತು.

ಉತ್ಖನನವೆಂಬುದು ಒಂದು ಅತೀ ಸೂಕ್ಷ್ಮ ಪ್ರಕ್ರಿಯೆ. ಉಪಲಬ್ಧವಾದ ಅವಶೇಷಗಳ ರಕ್ಷಣೆ, ಅವುಗಳ ಕ್ರಮಾಗತ ವರದಿ ಹಾಗೂ ಅವುಗಳ ವಿಶ್ಲೇಷಣೆ- ಇವುಗಳನ್ನು ನಿಯಮಿತವಾಗಿ ಪ್ರಕಟಿಸುವುದು ಸದ್ರಿ ವಿಭಾಗದ ಕರ್ತವ್ಯವಾಗಿತ್ತು. ಏಕೆಂದರೆ, ಯಾವುದೆ ಸ್ಮಾರಕ ಅಥವಾ ಪುರಾತತ್ವದ ಅವಶೇಷ ಕೇವಲ ಒಂದು ದೇಶದ ಸೊತ್ತಲ್ಲ. ಅದು ಜಗತ್ತಿನ ಸೊತ್ತು. ಆದ್ದರಿಂದ ಅವು ಅಂತರಾಷ್ಟ್ರೀಯ ಮಾನದಂಡ ಹಾಗೂ ನೀತಿ ಸಂಹಿತೆಯ ಪ್ರಕಾರ ನಡೆಸಬೇಕಾಗುತ್ತದೆ. ಸ್ಮಾರಕದ ಅವಶೇಷಗಳು ವಿಶ್ವದ ಎಲ್ಲರ ಗಮನಕ್ಕೂ ಅಧ್ಯಯನಕ್ಕೂ ಉಪಲಬ್ಧವಿರಬೇಕು. ಭಾರತದಲ್ಲಿ, ಈ ದಿಸೆಯಲ್ಲಿ ಮಹತ್ವಪೂರ್ಣವಾದ ಕೆಲಸವನ್ನು ಮಾಡಿದವರೆಂದರೆ ಎ.ಘೋಷ್ ಹಾಗೂ ಅನಂತರ ಬಂದ ಡೆಕ್ಕನ್ ಕಾಲೇಜಿನ ಎಚ್.ಡಿ.ಸಾಂಕಾಲಿಯಾ. ಈ ದಿಕ್ಕಿನಲ್ಲಿ ಅವರು Torchbearer ಕೆಲಸವನ್ನೇ ಮಾಡಿದರು. ಕಾಲಕಾಲಕ್ಕೆ Archaeological Survey of India(ASI) ವರದಿಗಳು ನಿಯಮಿತವಾಗಿ ಪ್ರಕಟವಾಗುತ್ತಿದ್ದವು. ಇದೇ ರೀತಿ Epigraphia India ಹಾಗೂ ಅದರ Arabic ಮತ್ತು Persian suppliment ಗಳೂ ಪ್ರಕಟವಾಗುತ್ತಿದ್ದವು.

ಆದರೆ, ದುಃಖದ ಸಂಗತಿಯೆಂದರೆ ಇತ್ತೀಚಿಗಿನ ದಶಕಗಳಲ್ಲಿ ಈ ವಿಭಾಗ ತನ್ನ ಅಂತಃಸತ್ವವನ್ನೇ ಕಳೆದುಕೊಂಡಿತು. ಉತ್ಖನನದ ವರದಿಗಳು ಕಾಲಕಾಲಕ್ಕೆ ವರದಿಯಾಗುವುದು ನಿಂತಿತು. ಪ್ರಕಟವಾದರೂ ಅದರ ಗುಣಮಟ್ಟ ಅತ್ಯಂತ ಕೆಳದರ್ಜೆಯದಾಗಿತ್ತು. ಎಎಸ್‌ಐ ಯ ವರದಿಗಳ

ಪುಟ 14 ಕ್ಕೆ

ಜನಶಕ್ತಿ ಕನ್ನಡ ವಾರಪತ್ರಿಕೆ

ಸಂಪಾದಕೀಯ

ವಿದ್ಯುತ್ ಮೀಟರೀಕರಣ ಸಲ್ಲದು

ರೈತರನ್ನು ಒಲಿಸಿಕೊಳ್ಳಲು ಬಿಜೆಪಿ ಸರ್ಕಾರ ತನ್ನ ಕಸರತ್ತುಗಳನ್ನು ಮುಂದುವರೆಸಿರುವುದು ಬಜೆಟ್ಟಿನ ಅಧಿವೇಶನದಲ್ಲಿ ಕಾಣುತ್ತದೆ.


ವಿದ್ಯುತ್ ಕೊರತೆಯ ಸ್ಥಿತಿಯಿಂದ ರಾಜ್ಯವನ್ನು ಪಾರು ಮಾಡಲು ಹಲವಾರು ಕ್ರಮ ಕೈಗೊಳ್ಳುವುದಾಗಿ ಸರ್ಕಾರ ಪ್ರಕಟಿಸಿರುವುದು ಜಾರಿಯಾದಗಲೇ ಅದರ ನಿಜ ಸ್ವರೂಪ ತಿಳಿಯಬಲ್ಲದು ಎನ್ನಿಸುತ್ತದೆ. ಈ ಅವಧಿಯಲ್ಲಿ ಅಂತೂ ಲೋಡ್ ಶೆಡ್ಡಿಂಗ್ ಹೆಸರಿನಲ್ಲಿ ವಿದ್ಯುತ್‌ನ ಕಡಿತ ಸಧ್ಯಕ್ಕೆ ಹಿಂತೆಗೆದುಕೊಂಡಿರುವುದು ಸ್ವಾಗತಾರ್ಹ. ಆದರೆ ರಾಜ್ಯದಲ್ಲಿನ ವಿದ್ಯುತ್ ಉತ್ಪಾದನೆಯ ನೀತಿ, ಬಳಕೆ-ಬೇಡಿಕೆಗಳಿಗೆ ಹೋಲಿಸಿದರೆ ಸಮಸ್ಯೆಯ ಗಂಭೀರತೆ ಅರ್ಥ ಮಾಡಿಕೊಂಡರೆ ಈಗಿನ ಪರಿಹಾರದ ಕ್ರಮಗಳು ಇನ್ನೂ ದೂರ ಸಾಗಬೇಕಾದುದು ತಿಳಿಯುತ್ತದೆ. ವಿಶೇಷವಾಗಿ ಯಡಿಯೂರಪ್ಪನವರ ಸರ್ಕಾರವು 10 ಅಶ್ವ ಶಕ್ತಿಯವರೆಗೆ ಪಂಪಸೆಟ್ ಹೊಂದಿರುವ ರೈತರಿಗೆ ಉಚಿತ ವಿದ್ಯತ್ ನೀಡುವುದಾಗಿ ವಿಧಾನಸಭೆಯಲ್ಲಿ ಪ್ರಕಟಿಸಿದೆ. ಚುನಾವಣೆ ಪ್ರಣಾಳಿಕೆಯಲ್ಲಿ ಉಚಿತ ವಿದ್ಯುತ್ ನೀಡಿಕೆಯ ಭರವಸೆ ನೀಡಿದ್ದು ಅದರ ಜಾರಿ ಎಂದು ಹೇಳಿಕೊಂಡರೂ ಹೀಗೆ 10 ಅಶ್ವಶಕ್ತಿ ವಿದ್ಯುತ್ ನೀಡುವಾಗ ಹಲವು ಶರತ್ತುಗಳು ಹೇರಿರುವುದು ಅವರ ಉದ್ದೇಶ ಏನೆಂದು ಪ್ರಶ್ನಿಸುವಂತಿದೆ. ಸರ್ಕಾರ ನೌಕರರಿರುವ ಕುಟುಂಬಗಳನ್ನು ಇದರಿಂದ ಹೊರತುಪಡಿಸುವುದೆಂಬುದಾಗಲೀ, ಈ ಸೌಲಭ್ಯ ಪಡೆಯುವ ರೈತರು ಮೀಟರ್ ಅಳವಡಿಕೆ ಕಡ್ಡಾಯ ಎಂಬುದು ಘೋಷಿತ ಉದ್ದೇಶಕ್ಕಿಂತ ಬೇರೆ ಉದ್ದೇಶಗಳ ಅನುಮಾನ ಬರದಿರದು. ಮೀಟರೀಕರಣವು ವಿದ್ಯುತ್ ಬಳಕೆಯನ್ನು ಅಳೆಯಲು ಮಾತ್ರ ಎಂದು ಇಂಧನ ಸಚಿವರ ಸಮಜಾಯಿಷಿ ದುರ್ಬಲವಾಗಿದೆ. ಯಾಕೆಂದರೆ ಆಯಾ ಪ್ರದೇಶಗಳ ಟ್ರಾನ್ಸ್‌ಫಾರ್ಮರ್‌ಗಳಿಂದಲೇ ಮೀಟರ್ ಅಳವಡಿಸಿದಲ್ಲಿ ಅದರ ಒಟ್ಟು ಮಾಹಿತಿ ಲಭ್ಯವಾಗುವುದು.

ಈ ಹಿಂದೆಯೇ ವಿಶ್ವಬ್ಯಾಂಕಿನಿಂದ ರಾಜ್ಯವು ಸಾಲ ಪಡೆಯುವಾಗ ಹಾಕಿರುವ ಶರತ್ತುಗಳಲ್ಲಿ ಮೀಟರಿಕರಣವೂ ಒಂದು. ಅಂದರೆ ಹಂತಹಂತವಾಗಿ ವಿದ್ಯುತ್ ಕ್ಷೇತ್ರವನ್ನು ಖಾಸಗೀಕರಣಗೊಳಿಸಲು ಇದು ಪೂರ್ವ ಸಿದ್ಧತೆ ಎಂಬುದು ಸರ್ವವಿಧಿತ. ಕೃಷಿ ತೀವ್ರ ಬಿಕ್ಕಟ್ಟಿನಲ್ಲಿದ್ದು, ಕೃಷಿಕರು ಆತ್ಮಹತ್ಯೆಗೀಡಾಗುತ್ತಿರುವ ಧಾರುಣ ಸ್ಥಿತಿ ಇರುವಾಗ ಮೀಟರೀಕರಣ ಹಾಗೂ ದುಬಾರಿ ವಿದ್ಯುತ್ ದರಗಳು ಕೃಷಿಯ ನೇಣಿನ ಕುಣಿಕೆಯನ್ನು ಇನ್ನಷ್ಟು ಬಿಗಿಗೊಳಿಸುವ ಕ್ರಮಗಳಾಗಿರುವುದು, ಇದಕ್ಕೆ ರಾಜ್ಯದಲ್ಲಿ ವ್ಯಾಪಕ ಪ್ರತಿಭಟನೆ-ಹೋರಾಟಗಳು ಬಂದ ಹಿನ್ನೆಲೆಯಲ್ಲಿ ಅದನ್ನು ನಿಲ್ಲಿಸಬೇಕಾಗಿ ಬಂದಿತ್ತು. ಇದೇ ಯತ್ನವನ್ನು ರೈತರ ಪರ ಸರ್ಕಾರ ಎಂದುಕೊಳ್ಳುವ ಬಿಜೆಪಿ ಸರ್ಕಾರ ಸದಾ ಉಚಿತ ವಿದ್ಯುತ್ ನೀಡಿಕೆಯ ತುಪ್ಪ ಮೂಗಿಗೆ ಸವರುವ ಆಮಿಷ ತೋರಿ ತನ್ನ ಬುಟ್ಟಿಯೊಳಗೆ ಕೆಡವಿಕೊಳ್ಳುವ ತಂತ್ರ ಅನುಸರಿಸುತ್ತಿದೆ. ಪ್ರಣಾಳಿಕೆಯಲ್ಲಿ ಇಲ್ಲದ ಈ ಶರತ್ತನ್ನು ಈಗ ಹೇಳುತ್ತಿರುವುದು ರೈತರಿಗೆ ಬಗೆದ ವಂಚನೆಯಾಗಿದೆ. ಆದ್ದರಿಂದ ಉಚಿತ ವಿದ್ಯುತ್ ಎಂಬುದು ತಾತ್ಕಾಲಿಕವಾಗಿ ಬಿಟ್ಟು, ಮೀಟರಿಕರಣ- ಖಾಸಗೀಕರಣ ಅಂತಿಮಗೊಳಿಸುವ ಎಲ್ಲ ಸಾಧ್ಯತೆಗಳು ಇವೆ. ಇನ್ನೊಂದೆಡೆ ಒಣ ಬೇಸಾಯದ ಪ್ರದೇಶಗಳ ಬೋರವೆಲ್‌ಗಳ ಆಳವು 800 ರಿಂದ 1200 ಅಡಿಯವರೆಗೂ ಇದ್ದು ಅನೇಕ ಕಡೆ 10 ಅಶ್ವಶಕ್ತಿ ಸಾಕಾಗುವದಿಲ್ಲ, ಅದನ್ನು ಮೀರಬೇಕಾಗಿತ್ತದೆ. ಆದ್ದರಿಂದ 10ರ ಮಿತಿ ಒಡೆದು ಅದನ್ನು ಸರಿಯಾಗಿ ಅಂದಾಜಿಸಿ ಹೆಚ್ಚಿಸಬೇಕು. ಹೀಗಾಗದಿದ್ದಲ್ಲಿ ವಿದ್ಯುತ್ ಕಾಯ್ದೆ ಪ್ರಕಾರ ಬಳಕೆದಾರ ರೈತರನ್ನು ಅಪರಾಧಿಗಳೆಂದು ಘೋಷಿಸಿ ಜೈಲಿಗೂ ತಳ್ಳಬಹುದು. ಇದಕ್ಕೆ ಗುಜರಾತ್ ಸರ್ಕಾರವೇ ನಿದರ್ಶನವಾಗಿದೆ. ಲಕ್ಷಾಂತರ ರೈತರು ಕ್ರಿಮಿನಲ್ ಮೊಕದ್ದಮೆ ಎದುರಿಸುತ್ತಿದ್ದು, ಸಾವಿರಾರು ಜನ ಜೈಲಿನಲ್ಲಿ ಇದ್ದಾರೆ. ಆದ್ದರಿಂದ ಈ ಉಚಿತ ವಿದ್ಯುತ್ ಪ್ರಕ್ರಿಯೆಗೆ ಯಾವುದೇ ಶರತ್ತು ಇರಕೂಡದು. ಅಲ್ಲದೇ ಮೀಟರೀಕರಣಕ್ಕೆ 815 ಕೋಟಿ ರೂಪಾಯಿಗಳ ವೆಚ್ಚ ತಗುಲುವುದಾಗಿ ಹೇಳಿದ್ದಾರೆ. ಇದರ ಬದಲು ಸಾಗಾಣಿಕೆ-ವಿತರಣೆಯಲ್ಲಿ ಆಗುವ ಹಾನಿ ತುಂಬುವ ಹಾಗೂ ಉತ್ತಮ ಗುಣಮಟ್ಟದ ವಿದ್ಯುತ್ ನೀಡಲು ಆ ಮೊತ್ತವನ್ನು ಬಳಸಬಹುದು.

ವಿದ್ಯುತ್ ಕೊರತೆ ನೀಗಿಸಲು ಸರ್ಕಾರ ಛತ್ತೀಸಗಢದಲ್ಲಿ ವಿದ್ಯುತ್ ಸ್ಥಾವರ ಸ್ಥಾಪಿಸುವುದಾಗಿ ಹೇಳಿದೆ. ಅದರ ಜೊತೆಗೆ ರಾಜ್ಯದಲ್ಲಿರುವ ಜಲವಿದ್ಯುತ್ ಬಳಸಿಕೊಂಡು ಇತರೆ ಮೂಲಗಳನ್ನು ಪೂರ್ಣವಾಗಿ ಬಳಸಬೇಕು. ಪರಿಸರ ಪ್ರಶ್ನೆಗಳಂತಹ ವಿಷಯಗಳಿಂದ ನೆನೆಗುದಿಗೆ ಬಿದ್ದಿರುವ ತದಡಿ, ನಾಗಾರ್ಜುನ ವಿದ್ಯುತ್ ಸ್ಥಾವರಗಳನ್ನು ಆರಂಭಿಸಲು ಅಲ್ಲಿರುವ ಸಮಸ್ಯೆ ಇತ್ಯರ್ಥಗೊಳಿಸಲು ಮುಂದುವರೆಯಬೇಕು.


ಆದ್ದರಿಂದ ಈ ಸಂದರ್ಭವನ್ನು ಗಮನದಲ್ಲಿರಿಸಿ ಸರ್ಕಾರ ಮೀಟರೀಕರಣ ಕೈಬಿಡಬೇಕು. ಖಾಸಗೀಕರಣ ದುಬಾರೀಕರಣ ಈ ಎಲ್ಲ ಯತ್ನಗಳ ವಿರುದ್ಧ ವ್ಯಾಪಕ ಆಂದೋಲನವೂ ನಡೆಯಬೇಕು.

ಕೋಮುವಾದ ಮತ್ತು ಭಯೋತ್ಪಾದನೆ



ಕೋಮುವಾದಿ ಫ್ಯಾಸಿಸ್ಟ್ ಕ್ರಮಗಳನ್ನು ಅನುಸರಿಸುತ್ತಾ ಭಯೋತ್ಪಾದನೆ ವಿರುದ್ಧ ಹೋರಾಡುವುದು ಎನ್ನುವುದ ನಿಜಕ್ಕೂ ಭಯೋತ್ಪಾದನೆ ನಿರ್ಮೂಲನ ಗೊಳಿಸುವುದೇ!

ಈ ವಾರದಲ್ಲಿನ ಎರಡು ಸಂಗತಿಗಳು ನಮ್ಮ ಮನಸ್ಸನ್ನು ಕಲಕಬೇಕು ಮತ್ತು ನಾವು ಎಚ್ಚರವಾಗಿಯೂ ಇರಬೇಕು. ಕಳೆದ ತಿಂಗಳು ಬೆಂಗಳೂರಿನ ಜೆ.ಸಿ.ನಗರ ಕೋಮುದ್ವೇಷ ಧಾಳಿ ಘರ್ಷಣೆಗಳಿಂದ ತಲ್ಲಣಿಸಿದ್ದು, ಇನ್ನೂ ನೆನಪಿನಿಂದ ಮರೆಯಾಗಿಲ್ಲ. ಇಲ್ಲಿನ ಮುಸ್ಲೀಮರ ಪ್ರಾರ್ಥನಾ ಕೇಂದ್ರಗಳಾದ ಮಸೀದಿಗಳಲ್ಲಿ 'ಯಾರೋ' ದುಷ್ಕರ್ಮಿಗಳು ಮಾಂಸವನ್ನೆಸೆದು ಅಪವಿತ್ರಗೊಳಿಸಲೆತ್ನಿಸಿದ್ದರು. ಇದರಿಂದ ಅಲ್ಲಿಯ ಜನ, ಮುಖ್ಯವಾಗಿ ಅಲ್ಪಸಂಖ್ಯಾತರು ನೊಂದಿದ್ದರು. ಇದು ಕೋಮುಗಲಭೆಗೆ ತಿರುಗಿಸಬೇಕೆಂದು 'ದುಷ್ಕರ್ಮಿ'ಗಳು ಬಯಸಿದ್ದರಾದರೂ, ಅಲ್ಲಿನ ಹಿಂದೂ-ಮುಸ್ಲಿಂ-ಕ್ರೈಸ್ತ ಎಲ್ಲಾ ಜನ ಒಗ್ಗಟ್ಟಾಗಿ ನಿಂತು 'ಆ' 'ಆಟ'ವನ್ನು ಸೋಲಿಸಿಬಿಟ್ಟರು. ಆದಾಗ್ಯೂ ಆಕ್ರೋಶಭರಿತ ಒಂದು ಗುಂಪಿನ ಪ್ರತಿಕ್ರಿಯೆ ಯಿಂದಾಗಿ ದ್ವೇಷ- ಲಾಠಿಚಾರ್ಜ್, ಅಶ್ರುವಾಯು, ಇತ್ಯಾದಿ ಸಂಭವಿಸಿದವು. ಇಷ್ಟೆಲ್ಲಾ ಆದರೂ ಅಲ್ಲಿನ ಜನಕ್ಕೆ ಒಂದು ಗಟ್ಟಿಯಾದ ನಂಬಿಕೆಯಿತ್ತು. ಪ್ರಾರ್ಥನಾ ಸ್ಥಳ ಅಪವಿತ್ರಗೊಳಿಸಿದವರು ಇಲ್ಲಿನವರಲ್ಲ. ಹೊರಗಿನಿಂದ ಬಂದವರು ಗಲಭೆಗೆ ಪ್ರಚೋದನೆ ನೀಡಿದವರು ಪರಾರಿಯಾಗಿದ್ದರು. ಅವರೇ


ಅಹಮದಾಬಾದ್ ಸ್ಫೋಟಕ್ಕೆ ಬಲಿಯಾದ ಹಣ್ಣು ಮಾರುವ ಅಮಾಯಕರು

ಇಂತಹ ಪ್ರಸಂಗ ಸೃಷ್ಟಿಸಿಕೊಂಡಿರುತ್ತಾರೆ ಬಿಡಿ' ಎಂದು ಪೂರ್ವಾಗ್ರಹದಿಂದ ಮಾತನಾಡುವವರಿಗೇ ನಮ್ಮ ನಡುವೆ ಉಸಿರಾಡಿಕೊಂಡಿದ್ದರು. ಯಥಾರೀತಿ 'ತನಿಖೆ' ಮುಂದುವರಿದಿತ್ತು.

'ಧರ್ಮದ್ರೋಹಿ'ಗಳು

ಆದರೀಗ..... ಪೊಲೀಸ್ ತನಿಖೆ ಒಂದು ಹೆಜ್ಜೆ ಮುಂದುಹೋಗಿದೆ. ಮಸೀದಿಯೊಳಗೆ ಮಾಂಸವಿಟ್ಟು ಗಲಭೆ ಎಬ್ಬಿಸಲು ಮುಂದಾದವರಲ್ಲಿ ಮೂರು ಜನ ಸಿಕ್ಕಿಬಿದ್ದಿದ್ದಾರೆ. ಇನ್ನೂ ಹಲವರು ಸಿಕ್ಕಿಬೀಳುವುದಾಗಿ ಹೇಳಲಾಗುತ್ತಿದೆ.

ಈಗ ಸಿಕ್ಕವರು ಯಾರು ಅಂತೀರಾ? ಅಪ್ಪಟ 'ಹಿಂದುತ್ವ'ದ ರಾಷ್ಟ್ರವನ್ನು ಕಟ್ಟುತ್ತೇವೆಂದು ಹೇಳಿಕೊಳ್ಳುವ ಶ್ರೀರಾಮಸೇನೆಯವರು.

ಇದು ಸಂಘಪರಿವಾರದ ಕರುಳಬಳ್ಳಿ. ಇವರಿಗೆ ಶಾಂತಿ-ಸೌಹಾರ್ದತೆ ಬೇಕಿಲ್ಲ. ಬೇಕಿರುವುದು ಕೋಮುಗಲಭೆ. ಜನರ ವಿಭಜನೆ, ಹಿಂಸೆ-ಪ್ರಜಾಪ್ರಭುತ್ವೀಯ ಮೌಲ್ಯಗಳ ನಾಶ. ಅದಕ್ಕೆಂದೇ ಇಂತಹ ವಿಧ್ವಂಸಕ ಕೃತ್ಯಗಳನ್ನು ಅವರಾಗಿಯೇ ಮಾಡಿ ಜನರನ್ನು ಪ್ರಚೋದಿಸುತ್ತಾರೆ. ಗಲಭೆ ನಡೆದರೆ, ಶಾಂತಿದೂತರಾಗಿ, ಧರ್ಮರಕ್ಷಕರಾಗಿ ಅವತರಿಸುತ್ತಾರೆ. ಹೇಗೂ ಮತ್ತೆ ಬರಲಿವೆಯಲ್ಲ ಚುನಾವಣೆಗಳು. ಅವರಿಗೊಂದು ರಾಜಕೀಯ ಅಜೆಂಡಾವು ಇದೆ. ಹಿಂದೆಲ್ಲಾ ಚಿಕ್ಕಮಗಳೂರಿನ ಶ್ರೀರಾಮ ದೇವಸ್ಥಾನದ ಗೋಪುರದ ಮೇಲಿನ ಹನುಮನ ವಿಗ್ರಹಕ್ಕೆ ಚಪ್ಪಲಿ ಹಾರ ಹಾಕಿದ್ದಾರೆಂದು ಹುಯಿಲೆಬ್ಬಿಸುವಲ್ಲಿ (ಹಾರ ಹಾಕಿದ್ದು, ಇದ್ದದ್ದು ಕಂಡವರೇ ಇಲ್ಲ. ಆದರೆ ಗಲಭೆ ನಡೆದೇ ಹೋಯ್ತು. ಬೀದರಿನ ಹನುಮನ ಮೂರ್ತಿ ರೈಲ್ವೆ ಮೈದಾನದಲ್ಲಿ ಮಲಗಿಸಿರುವಲ್ಲಿ, ವಿಜಾಪುರದಲ್ಲಿಯೂ, ಇಂತಹುದೇ ಸಂಚುಗಳ ಆಗಿಂದಾಗ್ಗೆ ಹೊರಬರುತ್ತಲೇ ಇವೆ. ಬಿಜೆಪಿ ಅಧಿಕಾರದಲ್ಲಿರುವಾಗ ಸಾಮಾನ್ಯ ಮತದಾರರನ್ನು ಹಿಂದುತ್ವದ ಕೋಮುವಾದಿಗಳನ್ನಾಗಿ ಮತಾಂತರಿಸಲು ಎಲ್ಲಾ ಅವಕಾಶ ಬಳಸಿಕೊಳ್ಳಬಾರದೇಕೆ ಎಂಬ ಪರಿವಾರದ ಹುನ್ನಾರವೇ ಇಲ್ಲಿದೆ.

ಆದಿ ಉಡುಪಿ ಪ್ರಕರಣ- ಮಹಾ ಅನ್ಯಾಯ

ಇನ್ನೊಂದು ಅತ್ಯಂತ ಪ್ರಮುಖ ಸಂಗತಿ : ಉಡುಪಿ ಜಿಲ್ಲೆಯ ಆದಿ ಉಡುಪಿಯಲ್ಲಿ ದನದ ವ್ಯಾಪಾರಿಗಳಾದ ಹಾಜಬ್ಬ, ಹಸನಬ್ಬ (ತಂದೆ-ಮಗ)ನವರನ್ನು ಭಜರಂಗದಳ- ವಿಹಿಂಪದ ಕಾರ್ಯಕರ್ತರು, 'ಅಕ್ರಮವಾಗಿ ದನ ಸಾಗಾಟ' ಮಾಡುತ್ತಿದ್ದಾರೆಂದು ಆರೋಪಿಸಿ ಬೆತ್ತಲೆ ಮಾಡಿ, ದೈಹಿಕವಾಗಿ ಮಾನಸಿಕವಾಗಿ ಕ್ರೂರವಾಗಿ ಹಿಂಸಿದಿದ್ದ 'ಗುಜರಾತ್ ಮಾದರಿ' ಪ್ರಯೋಗ ನಡೆಸಿದ್ದ 12 ಜನ ಆರೋಪಗಳನ್ನು ಉಡುಪಿ ನ್ಯಾಯಾಲಯ ಖುಲಾಸೆ ಮಾಡಿಬಿಟ್ಟಿದೆ. ಇವರೆಲ್ಲ ಇಂದಿನ ಗೃಹಸಚಿವ ವಿ.ಎಸ್.ಆಚಾರ್ಯರ ಕುಖ್ಯಾತ ಶಾಸಕ ರಘುಪತಿ ಭಟ್‌ರವರ ಪರಮಾತ್ಮರು. ಆರೋಪಿಗಳನ್ನು ಸಾಬೀತು ಮಾಡಲಾಗದ ಕಾರಣವನ್ನು ನ್ಯಾಯಾಲಯು ನೀಡಿಲ್ಲ. ದೋಷಮುಕ್ತರನ್ನಾಗಿಸಿದೆ. ಆದರೆ ಇಂತಹ ಗಂಭೀರ, ರಾಜ್ಯವನ್ನು ತಲ್ಲಣಗೊಳಿಸಿದ ಅಮಾನವೀಯ ಪ್ರಕರಣವೊಂದರಲ್ಲಿ 'ವಿಚಾರಣೆ' ಹೇಗೆಲ್ಲಾ ನಡೆದಿದೆ, ನ್ಯಾಯಕ್ಕಾಗಿ ವಾದಿಸಿದ ಸರ್ಕಾರ- ಅದರ ವಕೀಲರು ಎಂತಹ ಸಾಕ್ಷಿ ನೀಡಿದ್ದಾರೆ, ವಾದ ಹೂಡಿದ್ದಾರೆ ಅವರ ಹಿನ್ನೆಲೆ ಏನು ಎಂಬುದು ಪರಿಶೀಲಿಸಬೇಕಾದದ್ದೆ. ಆ ಸಂದರ್ಭದಲ್ಲಿ ಇದೇ ಭಜರಂಗದಳ, ವಿಶ್ವಹಿಂದೂ ಪರಿಷತ್ ಇತ್ಯಾದಿ ನಾಮಗಳ ಸಂಘಪರಿವಾರದ ಪಡೆ ಘಟನೆಯನ್ನು ಬಹಿರಂಗವಾಗಿ ರಾಜಾರೋಷದಿಂದ ಹೇಗೆಲ್ಲಾ ಸಮರ್ಥಿಸಿಕೊಂಡಿತ್ತು. ಇಂತಹ ಹತ್ತಾರು ಪ್ರಯೋಗ ನಡೆಸುವುದಾಗಿ ಸಾರಿತ್ತು ಎಂಬುದನ್ನು, ಮತ್ತು ನ್ಯಾಯಾಲಯುದ ತೀರ್ಪು ಹೊರಬಂದ ಕೂಡಲೇ ಮಳೆಯನ್ನು ಲೆಕ್ಕಿಸದೇ ಭಾರಿ ಮೆರವಣಿಗೆ ತೆಗೆದು ಪಟಾಕಿ ಹಾರಿಸಿ, ಚಿಂತಕ ಜಿ.ರಾಜಶೇಖರ್ ಮುಂತಾದ ಪ್ರಗತಿಪರರನ್ನು ಬಾಯಿಗೆ ಬಂದಂತೆ ಮನಸೋ ಇಚ್ಛೆ

ಪುಟ 4 ಕ್ಕೆ

ಕೋಮುವಾದ ಮತ್ತು ಭಯೋತ್ಪಾದನೆ

ಪುಟ 3 ರಿಂದ -

ಬೈಯ್ದು ವಿಜಯೋತ್ಸವ ಆಚರಿಸಿದ್ದು ಏನನ್ನು ಸೂಚಿಸುತ್ತವೆ? ಅದೂ ಹೀನಕೃತ್ಯ ಎಸಗಿದವರು ಕಾನೂನಿನ ಸರಳುಗಳಿಂದ ಜಾರಿಕೊಂಡು ಖುಲಾಸೆಗೊಂಡು ಹೊರಬರುವಾಗ ಥೀ-ಥೂ, ಸ್ವಾಗತ ನೀಡಬೇಕಿರುವಾಗ.... ವಿಜಯೋತ್ಸವ? ಎಂತಹ ನ್ಯಾಯ?

ಇಲ್ಲಿ ಏಳುವ ಪ್ರಶ್ನೆ. ಎಷ್ಟೆಲ್ಲಾ ಅವಮಾನ, ಸತತ ಹಿಂಸೆ, ದಬ್ಬಾಳಿಕೆ, ಬದುಕುವ, ನಾಗರೀಕ ಹಕ್ಕೇ ನಿರಾಕರಿಸಲ್ಪಟ್ಟು ಸಂದರ್ಭವನ್ನು ಅನುಭವಿಸುತ್ತಲೇ ಇರುವ ಅಲ್ಲಿನ ಅಲ್ಪಸಂಖ್ಯಾತರಿಗೆ ಇಂತಹ 'ನ್ಯಾಯದಾನ' ಎಂತಹ ಮನಸ್ಥಿತಿಯನ್ನು ಹುಟ್ಟುಹಾಕಬಲ್ಲುದು? ಇಂದು ಭಯೋತ್ಪಾದ್ಧನೆಯನ್ನು ಮಟ್ಟಹಾಕುವ ಹಲವಾರು 'ಪರಿಹಾರ'ಗಳನ್ನು ಮುಂದೂಡಿದವರು ಇದನ್ನು ಯೋಚಿಸುತ್ತಾರೆಯೇ?

ಕಾನೂನುಗಳೇ ಸಾಕೇ

ಹೌದು ಭಯೋತ್ಪಾದನೆ 'ಹುಟ್ಟುವ ಸ್ಥಿತಿ ಬೆಳವ ರೀತಿ ನಿಜವಾದ ಪರಿಹಾರ ರೂಪಿಸುವುದು ಅಂತಹವರಿಗೆ ಬೇಕಾಗಿಲ್ಲ. ಕರ್ನಾಟಕದಲ್ಲಿ, ಗುಜರಾತ್‌ನಲ್ಲಿ ಸರಣಿ ಬಾಂಬ್‌ಗಳ ಸ್ಫೋಟ ಸಂಭವಿಸಿತು. ಅಪಾರ ಹಾನಿಯೂ ತಗಲಿತು. ಮುಖ್ಯಮಂತ್ರಿ, ಯಡಿಯೂರಪ್ಪನವರಿಗೆ ಇದು ತಮ್ಮ ಸರ್ಕಾರದ ಜನಪ್ರಿಯತೆ ಅಡಗಿಸಲು ಹೂಡಿದಂತೆ ಕಾಣುತ್ತಿದೆ. ಈಗಲೂ ಅವರು ಒಬ್ಬ ಜವಾಬ್ದಾರಿಯುತ ವ್ಯಕ್ತಿಯಾಗಿ ಮಾತನಾಡುತ್ತಿಲ್ಲ ಬದಲಾಗಿ ಒಂದು ರಾಜಕೀಯ ಆಳತೆಗೋಲು ಸಾಧಿಸಬಯಸುವವರಂತೆ ಭಯೋತ್ಪಾದನೆ ಇದ್ದರೇನಂತೆ.ಎಂಬಂತೆ ಕಾಣುತ್ತಾರೆ. ಸರ್ಕಾರದ ತನಿಖೆ, ಭಯೋತ್ಪಾದನೆ ನಿಗ್ರಹದಲ್ಲಿ ಆಡಳಿತದ ವ್ಯವಸ್ಥೆಗಳು ಭಯೋತ್ಪಾದಕರ ವೇಗಕ್ಕೆ ಹೋಲಿಸಿದರೆ ಆಮೆ ನಡಿಗೆ ಎಂದೂ ಹೇಳಿದರೆ ತಪ್ಪಾಗಲಾರದು.

ಕರ್ನಾಟಕ ಆಗಬಾರದು ಗುಜರಾತ್

ಈ ಎರಡು ಪ್ರಕರಣಗಳಲ್ಲಿ ಗುಜರಾತ್‌ನಲ್ಲಿ ಸಂಭವಿಸಿದ ಸರಣಿ ಬಾಂಬ್ ಸ್ಫೋಟದಲ್ಲಿ 53 ಜನ ಸಾವನ್ನಪ್ಪಿದ್ದಾರೆ. ಸ್ಫೋಟಿಸಿದ ಬಾಂಬ್‌ಗಳನ್ನು ಈಗಲೂ ಪತ್ತೆ ಮಾಡಲಾಗುತ್ತಿದೆ. ಕರ್ನಾಟಕದಲ್ಲಿನವು ತೀರಾ ಕೆಳ ಹಂತದ, ಸ್ಥಳೀಯ ತಯಾರಿಗಳಾಗಿದ್ದರೆ, ಗುಜರಾತ್‌ನದ್ದು ಅತ್ಯಂತ ಶಕ್ತಿಯುತ ಹಾಗೂ ಉನ್ನತ ತಂತ್ರಜ್ಞಾನ ಬಳಕೆ ಮಾಡಲಾಗಿದೆ. ಇದರ 'ಹೊಣೆ ಹೊತ್ತುಕೊಂಡವರ' ಹೇಳಿಕೆಯಲ್ಲಿ ಸತತವಾಗಿ ನಡೆಯುತ್ತಿರುವ ಅಲ್ಪಸಂಖ್ಯಾತರ ಮೇಲಿನ ದೌರ್ಜನ್ಯಗಳು, ಮುಖ್ಯವಾಗಿ 2002ರಲ್ಲಿನ ಗೋದ್ರಾ ಹತ್ಯಾಕಾಂಡದ ಸಂದರ್ಭ ಬಳಸಿ ನಡೆಸಲಾದ ಹತ್ಯಾಕಾಂಡಗಳಿಗೆ ಒಂದು ಉತ್ತರ ಎಂದು ಹೇಳಲಾಗಿದೆ. ಹಲವಾರು ಗುಜರಾತ್ ಸೃಷ್ಟಿಸುವುದಕ್ಕೂ ತಮ್ಮ ಉತ್ತರ ಎನ್ನಲಾಗಿದೆ. ಗುಜರಾತ್‌ನ ಕೋಮುಗಲಭೆಗಳಿಗೆ ಒಂದು ದೀರ್ಘವಾದ ಇತಿಹಾಸವಿದೆ. ಕೇವಲ 2002 ಮಾತ್ರವೇ ಅಲ್ಲ. 1970 ರಿಂದ ಇಲ್ಲಿಯವರೆಗೆ ಸುಮಾರು 440 ಕೋಮು ಗಲಭೆಗಳು ಘಟಿಸಿವೆ. ಬಹುತೇಕ ಸಂಘಟಿತ ರೂಪದಲ್ಲಿಯೇ. ಇಂತಹವುಗಳಿಗೆ ಆರ್.ಎಸ್.ಎಸ್.ನ ಕಟ್ಟಾಳುಗಳಾದ ಲಕ್ಷ್ಮಣರಾವ್ ಇನಾಂದಾರ್ (ವಕೀಲ್‌ಸಾಬ್) ಎಂಬಾತ 1971ರಿಂದ 85ರವರೆಗೆ ನಾಯಕತ್ವ ನೀಡಿದ. ನಂತರದ ಪಟ್ಟ ಕುಖ್ಯಾತ ನರೇಂದ್ರ ಮೋದಿಗೆ! ಹೀಗೆ ದೇಶದುದ್ದಕ್ಕೂ ದ್ವೇಷ-ಹಿಂಸೆಗಳನ್ನೇ ಬಿತ್ತಿ ಬೆಳೆದು ರಾಜಕೀಯ ಅಧಿಕಾರ ಅನುಭವಿಸುವವರಿಗೆ ಬೆಳೆಯುತ್ತಿರುವ ಭಯೋತ್ಪಾದನೆಯಲ್ಲಿ ಪಾಲಿಲ್ಲವೇ?

ಬಿಜೆಪಿ ನಾಯಕರ ಕಾಳಜಿ

ಈಗಲೂ ಬಿಜೆಪಿ ನಾಯಕ ಅಡ್ವಾನಿಯಿಂದ ಹಿಡಿದು ಸಂಜೆ ಲಾಠಿ ಹಿಡಿಯುವ ಸ್ವ.ಸೇ.ನವರೆಗೂ 'ಪೋಟಾ' ಕಾಯ್ದೆ ಹಿಂತೆಗೆದುಕೊಂಡಿದ್ದರಿಂದಲೇ ಇವೆಲ್ಲಾ ಸಂಭವಿಸಿವೆ ಎಂದು ಗಿಳಿಪಾಠ ಒಪ್ಪಿಸುತ್ತಿವೆ. ಅಡ್ವಾನಿ ಆಡಳಿತದಲ್ಲೇ 'ಪೋಟಾ' ಇರುವಾಗಲೇ ಪಾರ್ಲಿಮೆಂಟ್ ಮೇಲೆ ಧಾಳಿ ನಡೆದದ್ದು. ಅಕ್ಷರಧಾಮದ ಮೇಲೆ ಆಕ್ರಮಣ ನಡೆದಿದ್ದು, ವಾಜಪೇಯಿ ಪ್ರಧಾನಿಯಾಗಿದ್ದದ್ದು! ಅಂತಹ 'ಪೋಟಾ' ಕಾಯ್ದೆಯನ್ನು ಯಾರ್‍ಯಾರ ಮೇಲೆ ಬಳಸಿದರು, ಬಳಸುತ್ತಿದ್ದರು ಎಂಬುದು ಸಹ ಪರಿಶೀಲನಾರ್ಹವೇ? ಹೋಗಲಿ, ಕಾರ್ಗಿಲ್ ಯುದ್ಧದ ನಂತರ ಭಯೋತ್ಪಾದನೆಯನ್ನು ಎದುರಿಸಲು ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಅಧ್ಯಯನಕ್ಕಾಗಿ 'ರಾ'ಮಾಜಿ ಮುಖ್ಯಸ್ಥ ಗಿರೀಶ್ ಸಕ್ಸೇನಿ ಅವರ ನೇತೃತ್ವದಲ್ಲಿ ಸಮಿತಿ ರಚನೆಯಾಗಿತ್ತು. ರಾಷ್ಟ್ರೀಯ ಭದ್ರತಾ ಸಲಹೆಗಾರ ಎಂ.ಕೆ.ನಾರಾಯಣನ್ ಅದರಲ್ಲಿದ್ದರು. ಇದು ಬಹು ಏಜೆನ್ಸಿಗಳ ಕೇಂದ್ರ (ಮಾಕ್) ರಚಿಸುವ, ಜಂಟಿ ಗುಪ್ತಚಾರ ಪಡೆ ಬಲಪಡಿಸುವಂತಹ ಹಲವು ಕ್ರಮಗಳನ್ನು ಸೂಚಿಸಿತ್ತು. 2003 ರಲ್ಲಿ ಕೆಲವು ತಿದ್ದುಪಡಿಯೊಂದಿಗೆ ಅಂಗೀಕರಿಸಿತ್ತು. ಆದರೆ ಆಂದಿನ ಉಪಪ್ರಧಾನಿ, ಗೃಹಸಚಿವ ಅಡ್ವಾನಿ ಈ ದಿಶೆಯಲ್ಲಿ ಅಷ್ಟಾಗಿ ಆಸಕ್ತಿವಹಿಸಲಿಲ್ಲ. ಕೆಲವು ಕ್ರಮಗಳೂ ಅರೆಮನಸ್ಸಿನಿಂದ ಇದ್ದಂತಿದ್ದವು ಯಾಕೆ?

ಈಗಲೂ ಯಡಿಯೂರಪ್ಪನವರಿ ಗಾಗಲಿ, ಬಾಂಬ್ ಸರಣಿ ಸ್ಫೋಟ ಯುಪಿಎ ಸರ್ಕಾರದ ಯೋಜನೆ ಎಂದು ಹೇಳುತ್ತಿರುವ ಸುಷ್ಮಾಗಾಗಲೀ ರಾಷ್ಟ್ರೀಯ ಭದ್ರತೆಯ ಚಿಂತೆಯಲ್ಲಿ ಮುಳುಗೇಳುತ್ತಿರುವ ಅಡ್ವಾನಿಗಾಗಲೀ ಭಯೋತ್ಪಾದನೆಗೆ ಇತಿಶ್ರೀ ಹಾಕುವ ಪ್ರಾಮಾಣಿಕ ಹೆಜ್ಜೆ ಇಡುವುದು ಬೇಕಿಲ್ಲ. ಬದಲಿಗೆ ತಮ್ಮ ಬಚ್ಚಿಟ್ಟ ಅಜೆಂಡಾ ಜಾರಿಗೆ ಹೇಗೆ ಬಳಸುವುದು ಎಂಬುದು. ಅಡ್ವಾನಿಯವರಿಗೆ ಮುಂದಿನ ಸಂಸದೀಯ ಚುನಾವಣೆಗಳು ಯಡಿಯೂರಪ್ಪನವರಿಗೆ ಬೆಂಗಳೂರು ಕಾರ್ಪೊರೇಷನ್ ಚುನಾವಣೆಗಳ ಚಿಂತೆ. ಅಂದರೆ ಇದನ್ನು ರಾಜಕೀಯ ಕ್ರೋಢೀಕರಣಕ್ಕೆ ಬಳಸುವುದೇ ಅವರ ಆದ್ಯತೆ.

ಇಂದಿನ ಭಯೋತ್ಪಾದನೆಗೆ ಆರ್ಥಿಕ, ಸಾಮಾಜಿಕ, ರಾಜಕೀಯವಾದ ಕಾರಣಗಳಿರುವಂತೆ ಜಾಗತಿಕ ರಾಜಕಾರಣದ ಆಯಾಮವೂ ಇದ್ದು ಗಂಭೀರ ಸ್ವರೂಪದ್ದಾಗಿದೆ ಎಂಬುದರಲ್ಲಿ ಅನುಮಾನವೇ ಇಲ್ಲ. ಅಂತಹ ಶಕ್ತಿಗಳ ವಿರುದ್ಧ ಯಾವುದೇ ರಾಜಿಯಿಲ್ಲದೆ ದೃಢ ಹೋರಾಟ ನಡೆಸಬೇಕು. ದೇಶದ ಸಮಗ್ರತೆ-ಭದ್ರತೆ ವಿಷಯದಲ್ಲಿ ಎರಡನೇ ಮಾತೇ ಇಲ್ಲ. ಈ ಹಿನ್ನೆಲೆಯಲ್ಲಿ ಅಂತಹ ಶಕ್ತಿಗಳು ಬೆಳೆಯಲು ಸನ್ನಿವೇಶಗಳನ್ನು ಬಳಸಲು ವಿಫುಲ ಅವಕಾಶ ಕಲ್ಪಿಸುವುದು ಎಂದರೆ ನಿಜ ಉದ್ದೇಶ ಏನು ಎಂಬುದಾಗಿದೆ?

ಕರ್ನಾಟಕ ಉಳಿಸಿಕೊಳ್ಳಬೇಕು

ಕರ್ನಾಟಕ-ಗುಜರಾತ್‌ಗಳಲ್ಲಿನ ಸರಣಿ ಸ್ಫೋಟದಿಂದ ಪಾಠ ಕಲಿಯುವುದು ಅಗತ್ಯವಿದೆ. ಬಿಜೆಪಿ ಆರಂಭದಿಂದಲೂ ಅಧಿಕಾರಕ್ಕೆ ಬಂದರೆ ತಾವು ಗುಜರಾತ್ ಮಾದರಿಯನ್ನು ಸೃಷ್ಟಿಸುವುದಾಗಿಯೇ ಹೇಳುತ್ತಾ ಬಂದಿದೆ. ಕುಖ್ಯಾತ ಮೋದಿಯನ್ನು ಕರೆಸಿ ಡಂಗುರ ಹಾಕಿಸಿದೆ. ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದಿರುವ ಹಿನ್ನೆಲೆಯಲ್ಲಿ ಬಿಜೆಪಿ-ಆರ್‌ಎಸ್‌ಎಸ್ ಪರಿವಾರಗಳು ಕೋಮುವಾದಿ ಫ್ಯಾಸಿಸ್ಟ್ ಅಜೆಂಡಾ ಜಾರಿಗೆ ಇಳಿದು ಗುಜರಾತ್ ಸೃಷ್ಟಿಸುವುದಾದರೆ, ಅದರ ಇನ್ನೊಂದು ಪ್ರತಿಕ್ರಿಯೆ ಮಾದರಿ ಗುಜರಾತ್ ಸ್ಫೋಟಗಳಂತೆ ಇರುವುದು ಎಂಬ ಎಚ್ಚರಿಕೆ ಭಯೋತ್ಪಾದಕರಿದಿರಬಹುದು. ಕೋಮುವಾದಿಗಳು ಮೂಲಭೂತ ವಾದಿಗಳು, ಭಯೋತ್ಪಾದಕ ಶಕ್ತಿಗಳ ತಂತ್ರಗಳಿಗೆ ಜನ ಬಲಿಯಾಗಬಾರದು, ಅವುಗಳನ್ನು ಸೋಲಿಸಲೇಬೇಕು. ಬಿಜೆಪಿ ಕೋಮುವಾದ ಅನುಸರಿಸಿದಷ್ಟು ಭಯೋತ್ಪಾದನೆಯ ಅಪಾಯವೂ ಹೆಚ್ಚಿರುತ್ತದೆ. ಇದರರ್ಥ ಭಯೋತ್ಪಾದಕ ಶಕ್ತಿಗಳು ಮರೆಯಾಗಿಬಿಡುತ್ತವೆ ಎಂದರ್ಥ ಅಲ್ಲ. ಕೋಮುವಾದವನ್ನು ಬಿಜೆಪಿ ಅಥವಾ ಸಂಘಪರಿವಾರ ಅನುಸರಿಸುವಷ್ಟು ಕರ್ನಾಟಕದ ಸುರಕ್ಷತೆ-ಅಸುರಕ್ಷತೆಯೇ.

ಸರ್ಕಾರವೇ ರೀಮೇಕಾಗಿರುವಾಗ ಸಿನಿಮಾ ಏನು ಮಹಾ ಬಿಡ್ರೀ

ರಿಮೇಕ್ ಚಲನಚಿತ್ರಗಳಿಗೆ ರಾಜ್ಯ ಸರ್ಕಾರದ ತೆರಿಗೆ ರಿಯಾಯಿತಿ

'ಈ ಸರ್ಕಾರವೇ ಒಂಥರಾ ರೀಮೇಕ್ ಇದ್ದ ಹಾಗಿದೆ, ಹಾಗಾಗಿ ರೀಮೇಕ್ ಚಿತ್ರಗಳಿಗೆ ತೆರಿಗೆ ರಿಯಾಯಿತಿ ನೀಡುವುದು ಸರಿಯೇ ಬಿಡಿ. ಮೊದಲಿನಿಂದಲೂ ಅವರೇ ಹೇಳುತ್ತಿಲ್ಲವೇ, ತಮ್ಮದೇನೂ ಸ್ವಂತಿಕೆಯಿಲ್ಲ, ಗುಜರಾತ್ ಸರ್ಕಾರದ ರೀಮೇಕ್ ಅಂತ. ಜತೆಗೆ ಈ ಸರ್ಕಾರದ ನಿರ್ಮಾಪಕರೇ ರೆಡ್ಡಿಗಾರು! ಇನ್ನು ಶಾಸಕರು ಸ್ವಂತ ಪಕ್ಷಕ್ಕಿಂತ ಇತರ ಪಕ್ಷಗಳಿಂದ ರೀಮೇಕ್ ಮಾಡಲ್ಪಟ್ಟವರೇ ಹೆಚ್ಚು. ಅಂದ ಮೇಲೆ ರೀಮೇಕ್ ಬಗ್ಗೆ ಸರ್ಕಾರಕ್ಕೆ ಪ್ರೀತಿ ಸಹಜವೇ ತಾನೆ?. ಹೇಗಾದರೂ ಸರಿ ನಿರ್ಮಾಪಕರು ಹಣ ಮಾಡಬೇಕು, ಏಕೆಂದರೆ ಅವರೇ ಅನ್ನದಾತರು!.

'ಪತ್ರಿಕೆಗಳಲ್ಲಿ ಬರೋದಕ್ಕೆಲ್ಲ ಉತ್ತರ ಕೊಡಲ್ಲ' ಗೃಹ ಸಚಿವರ ಉವಾಚ.

-'ಸರಿಯೇ ಬಿಡಿ! ಪದ್ಮಪ್ರಿಯಾ ಪ್ರಕರಣದಲ್ಲಿ ತಾವು ಹೇಳಿದ್ದನ್ನೆಲ್ಲಾ ಹಿಂದು ಮುಂದು ನೋಡದೆ ಪ್ರಕಟಿಸಿದ ಪತ್ರಿಕೆಗಳ, ಮಾಧ್ಯಮಗಳ ಬಗ್ಗೆ ಅವರಿಗೆ ಹೇಗೆ ತಾನೆ ವಿಶ್ವಾಸ ಬರಲು ಸಾಧ್ಯ'.

ಬಾಂಬ್ ಸ್ಫೋಟ; ನಿರ್ಲಿಪ್ತ ಗೃಹ ಸಚಿವ – ಸುದ್ದಿ

-'ನ್ಯಾಯವಾಗಿ ನೋಡಿದರೆ ಸಂತೋಷ ವ್ಯಕ್ತ ಪಡಿಸಬೇಕಾಗಿತ್ತು. ಅಂಥದ್ರಲ್ಲಿ ಖುಷಿಯನ್ನು ಅದುಮಿಟ್ಟುಕೊಂಡು ನಿರ್ಲಿಪ್ತತೆ ಪ್ರಕಟಿಸಿದ್ದಾರೆ. ಯಾಕೇಂದ್ರೆ, ಬಾಂಬ್ ಸ್ಫೋಟ ಆದಷ್ಟೂ ಅವರ ಪಕ್ಷಕ್ಕೆ ಅನುಕೂಲ! ಜನರು ದಿನನಿತ್ಯದ ಸಮಸ್ಯೆ ಬಿಟ್ಟು ಬಾಂಬ್ ಬಗ್ಗೆ ಗಮನ ಹರಿಸುತ್ತಾರೆ. ಆಗ ಇನ್ನಷ್ಟು ಬೆಂಕಿಕಾರಿ ಮತ್ತಷ್ಟು ಓಟುಗಳನ್ನು ಗುಡಿಸಿಕೊಳ್ಳಬಹುದು. ರಾಜಾಸ್ಥಾನದ ಜಯಪುರದಲ್ಲಿ ಸಿಡಿದ ಒಂದು ಬಾಂಬಿನ ವಿಷಯವನ್ನೇ ಚುನಾವಣೆಯಲ್ಲಿ ಬಳಸಿಕೊಂಡು ಕರ್ನಾಟಕದಲ್ಲಿ ಓಟು ಒಗ್ಗೂಡಿಸಿಕೊಳ್ಳಲಿಲ್ವೇ'

ಕ್ಯಾತೆ

ಶ್ರೀ

ಒತ್ತಾಯಕ್ಕೆ ಮಣಿದು 1500 ಮದ್ಯದಂಗಡಿ/ಬಾರ್ ತೆರೆಯದಿರಲು ಮುಖ್ಯಮಂತ್ರಿ ಒಪ್ಪಿಗೆ.

-' ಪರ್ಯಾಯ ವ್ಯವಸ್ಥೆ ಏನು' ಹಾಗೆಯೇ, ಅಂದರೆ ಬಜೆಟ್ ಘೋಷಣೆ ಇಲ್ಲದೇ 1499 ಅಂಗಡಿ/ಬಾರ್ ಸದ್ದಿಲ್ಲದೇ ತೆರೆಯಬಹುದೇ? ಒಂದೇ ತೊಂದರೆ ಎಂದರೆ ಇದು ಸರ್ಕಾರದ ಸಾಧನೆ ಎಂದು ಹೇಳಿಕೊಳ್ಳುವ ಹಾಗಿಲ್ಲ ಅಷ್ಟೇ.

ಬಾಲಂಗೋಚಿ

ಕೆಲವು ಜಗದ್ಗುರುಗಳು, ಸ್ವಾಮೀಜಿಗಳೂ ಸರ್ಕಾರದ ಭೂಮಿ, ಅನುದಾನ, ಪ್ರತ್ಯಕ್ಷ, ಪರೋಕ್ಷ ಕೃಪೆಗಾಗಿ ಬಾಯಿ ಬಾಯಿ ಬಿಟ್ಟುಕೊಂಡು ಕುಳಿತಿರುವಾಗ ಸಾಯಿಬಾಬ ಅವರ ಬೊಂಬೆ ಒಂದು ಕಣ್ಣು ಬಿಟ್ಟಿದೆ! ಅದನ್ನು ನೋಡಲು ಜನ ನೂಕು ನುಗ್ಗಲು. ಪೊಳ್ಳು ಮಾಧ್ಯಮದವರಿಗೆ/ಪತ್ರಿಕೆಗಳಿಗೆ ಇದೇ 'ಸುದ್ದಿ'. 'ಮುಂಖಾನು ಮುಂಖವಾಗಿ ಚರ್ಚೆ. ಬಾಬಾ ಕಣ್ಣು ಬಿಟ್ಟಿದ್ದರಿಂದ ಶಿವ ಮೂರನೇ ಕಣ್ಣು ಬಿಟ್ಟಂತಾಗಿ ಬಾಂಬ್ ಬ್ಲಾಸ್ಟ್ ಆಯಿತೇ ಅಥವಾ ಬಾಬಾ ಕಣ್ಣು ಬಿಟ್ಟಿದ್ದರಿಂದ ಬಾಂಬ್ ಬ್ಲಾಸ್ಟ್‌ನ ದುಷ್ಪರಿಣಾಮ ಕಡಿಮೆ ಆಯಿತೆ? ಬಾಬಾ ಕಣ್ಣು ಬಿಟ್ಟಿದ್ದರಿಂದ ಹಣದುಬ್ಬರ ಜಾಸ್ತಿಯಾಗುತ್ತಿದೆಯೇ? ಅಥವಾ ಹಣದುಬ್ಬರ ಜಾಸ್ತಿಯಾಗಿ ಜನ ಕಣ್ಣು ಕಣ್ಣು ಬಿಡುವಂತಾಗುತ್ತಿರುವುದರಿಂದ ಬೊಂಬೆಯೂ ಕಣ್ಣು ಬಿಡುವಂತಾಯಿತೇ? ಬಾಬಾರ ಕಣ್ಣು ಬಿಡಿಸಿದ ರಹಸ್ಯವಾದರೂ ಏನು? ಸ್ವಲ್ಪ ತಿಳಿದಿದ್ದರೆ ಕುರುಡು ಕುದುರೆಯಂತೆ ಕಣ್ಣು ಮುಚ್ಚಿ ಅಣು ಒಪ್ಪಂದದತ್ತ ಓಡುತ್ತಿರುವ ನಮ್ಮ ಪ್ರಧಾನಿ ಸಿಂಗರ ಕಣ್ಣನ್ನು ಸ್ವಲ್ಪವಾದರೂ ತೆರೆಸಲಾದೀತೆ? ಮುಂತಾದ ವಿಷಯಗಳ ಬಗ್ಗೆ ಚರ್ಚೆಯಾಯಿತೋ ಇಲ್ಲವೋ ತಿಳಿದು ಬಂದಿಲ್ಲ. ○

'ಬೆಲೆ' ತೆರುತ್ತಿರುವ ಬಡ ಭಾರತೀಯರು

ಅಗತ್ಯ ವಸ್ತುಗಳ ಬೆಲೆಏರಿಕೆ ಜನರ ಜೀವ ಹಿಂಡುತ್ತಿದೆ. ಆಳುವವರಿಗೆ ಅದರ ಚಿಂತೆಯೇ ಇಲ್ಲವಾಗಿದೆ.

ನಿತ್ಯಾನಂದಸ್ವಾಮಿ


ಬೆಲೆ ತೆರುತ್ತಿದ್ದಾರೆ ಬಡ ಭಾರತೀಯರು, ಸ್ವಾತಂತ್ರ್ಯಾ ನಂತರ ದೇಶದಲ್ಲಿ ಬಂಡವಾಳಶಾಹಿ ಅಭಿವೃದ್ಧಿಯ ದಾರಿಯನ್ನು ಆಯ್ಕೆ ಮಾಡಿಕೊಂಡ ತಪ್ಪಿಗಾಗಿ; ಬೆಲೆ ತೆರುತ್ತಿದ್ದಾರೆ ಅವರು ಈಗ, ಜಾಗತೀಕರಣದ ಅಪ್ಪುಗೆಯಲ್ಲಿ ಸುಖ ಕಾಣುವ ಭ್ರಮೆಗಾಗಿ ಬೆಲೆ ತೆರುತ್ತಿದ್ದೇವೆ ನಾವೆಲ್ಲರೂ, ಲೂಟಿಕೋರ ನವ ವಸಾಹತುಶಾಹಿ ಶಕ್ತಿಗಳ ಕಿರಿಯ ಪಾಲುದಾರರಾಗಲು ಹಾತೊರೆಯುತ್ತಿರುವ ನಮ್ಮ ಆಳುವ ವರ್ಗಗಳು ಎಸಗುತ್ತಿರುವ ದೇಶದ್ರೋಹಕ್ಕಾಗಿ.

ಎಂತಹ ಬೆಲೆ ಏರಿಕೆ! ಎರಡಂಕಿ ದಾಟಿ ಮುನ್ನುಗ್ಗುತ್ತಿರುವ ಹಣದುಬ್ಬರ!! ಇನ್ನೂ ಆತಂಕದ ವಿಷಯ ಏನೆಂದರೆ, ಸದ್ಯದಲ್ಲಿ ಪರಿಸ್ಥಿತಿ ಸುಧಾರಿಸುವ ಯಾವ ಲಕ್ಷಣಗಳೂ ಕಾಣುತ್ತಿಲ್ಲ. ಏಕೆಂದರೆ ಬೆಲೆ ಏರಿಕೆಯನ್ನು ತಡೆಯಲು ಕೇಂದ್ರ ಸರ್ಕಾರ ಯಾವ ಪರಿಣಾಮಕಾರಿ ಕ್ರಮವನ್ನು ಕೈಗೊಳ್ಳಲು ಮುಂದೆ ಬರುತ್ತಿಲ್ಲ. ಪರಿಸ್ಥಿತಿಯನ್ನು ನಿಭಾಯಿಸಲು ಡಾ:ಮನಮೋಹನ್‌ಸಿಂಗ್ ಸರ್ಕಾರ ಸಂಪೂರ್ಣವಾಗಿ ವಿಫಲವಾಗಿದೆ. ಅವರಿಗೆ ಅವರ ದೇಶಬಾಂಧವರು ನಿತ್ಯ ಅಗತ್ಯದ ದಿನಸಿ ಸಾಮಾನುಗಳೂ ಸೇರಿದಂತೆ ಎಲ್ಲ ದಿನಬಳಕೆಯ ಸಾಮಗ್ರಿಗಳ ಬೆಲೆ ಏರಿಕೆಯಿಂದಾಗಿ ಅನುಭವಿಸುತ್ತಿರುವ ಸಂಕಷ್ಟಗಳನ್ನು ನಿವಾರಣೆ ಮಾಡುವುದಕ್ಕಿಂತ ಅಮೇರಿಕಾದ ಅಧ್ಯಕ್ಷ ಜಾರ್ಜ್‌ಬುಶ್ ಅವರೊಂದಿಗೆ ಪರಮಾಣು ಒಪ್ಪಂದ ಮಾಡಿಕೊಳ್ಳುವುದೇ ಮುಖ್ಯವಾಗಿದೆ. ಅಮೇರಿಕಾದೊಂದಿಗೆ ಒಪ್ಪಂದ ಮಾಡಿಕೊಂಡರೆ ದೇಶದ ಎಲ್ಲ ಸಮಸ್ಯೆಗಳೂ ಪರಿಹಾರವಾಗುತ್ತವೆ ಎಂದು ಅವರು ಜನತೆಯನ್ನು ನಂಬಿಸಲು ಹೊರಟಿದ್ದಾರೆ!

ಚುನಾವಣಾ ಭೀತಿಯಾಕೆ? :

ಅಮೇರಿಕಾದೊಂದಿಗೆ ಮಾಡಿ ಕೊಳ್ಳಲಾದ ಪರಮಾಣು ಒಪ್ಪಂದವನ್ನು ಕಾರ್ಯಗತಗೊಳಿಸಲು ಸರ್ಕಾರ ಮುಂದಾದರೆ, ಎಡಪಕ್ಷಗಳು ತಾವು ಸರ್ಕಾರಕ್ಕೆ ನೀಡುತ್ತಿರುವ ಬಾಹ್ಯ ಬೆಂಬಲವನ್ನು ಹಿಂತೆಗೆದುಕೊಳ್ಳುವುದಾಗಿ ಸ್ಪಷ್ಟ ಎಚ್ಚರಿಕೆಯನ್ನು ಕೊಟ್ಟ ನಂತರವೂ ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರ ಎಡಪಕ್ಷಗಳ ಬೆಂಬಲವನ್ನು ಕಳೆದುಕೊಳ್ಳಲು ತಯಾರಿರಲಿಲ್ಲ. ಯಾಕೆ? ಕಾಂಗ್ರೆಸ್ ಪಕ್ಷದ ಅಧ್ಯಕ್ಷೆ ಸೋನಿಯಾ ಗಾಂಧಿಯೂ ಸೇರಿದಂತೆ ಕಾಂಗ್ರೆಸಿನ ಬಹುತೇಕ ಸಂಸತ್ ಸದಸ್ಯರಿಗೆ ಮಧ್ಯಂತರ ಚುನಾವಣೆ ಬೇಕಾಗಿರಲಿಲ್ಲ. ಕಾಂಗ್ರೆಸ್ಸಿನ ಮಿತ್ರ ಪಕ್ಷಗಳ ಮುಖಂಡರಾದ ಕರುಣಾನಿಧಿ, ಲಾಲೂಪ್ರಸಾದ್ ಯಾದವ್, ಶರದ್ ಯಾದವ್ ಮೊದಲಾದವರಿಗೂ ತಕ್ಷಣದಲ್ಲಿ ಚುನಾವಣೆ ಬೇಕಾಗಿರಲಿಲ್ಲ.

ಎಲ್ಲ ವರ್ಗದವರನ್ನು ಓಲೈಸುವ ಜನಪ್ರಿಯ ಮುಂಗಡಪತ್ರ, ರೈತರಿಗೆ ರೂ.60 ಸಾವಿರ ಕೋಟಿಗಳಷ್ಟು ಬೃಹತ್ ಪ್ರಮಾಣದ ಸಾಲ ಮನ್ನಾ ಪ್ಯಾಕೇಜ್, ಕೇಂದ್ರ ಸರ್ಕಾರಿ ನೌಕರರು ಮತ್ತು ಸೈನಿಕರಿಗೆ ರೂ.19 ಸಾವಿರ ಕೋಟಿ ಗಳಷ್ಟು ಮೊತ್ತದ ಸಂಬಳ ಹೆಚ್ಚಳದ 6ನೇ ವೇತನ ಆಯೋಗದ ಶಿಫಾರಸ್ಸು ಜಾರಿ ಮೂಲಕ ಕಾಂಗ್ರೆಸ್ ನೇತೃತ್ವದ ಯುಪಿಎ ಕೂಟದಲ್ಲಿ ಚುನಾವಣೆ ಎದುರಿಸುವ ಉತ್ಸಾಹ ಗರಿಗೆದರಿತ್ತು. ಆದರೆ, ಅಗತ್ಯ ವಸ್ತುಗಳ ಬೆಲೆಗಳು ನಾಗಾಲೋಟದಿಂದ ಓಡುತ್ತಿರುವುದು ಕಾಂಗ್ರೆಸ್ ಮತ್ತು ಅದರ ಮಿತ್ರ ಪಕ್ಷಗಳ ಉತ್ಸಾಹಕ್ಕೆ ತಣ್ಣೀರೆರಚಿತ್ತು. ಆದ್ದರಿಂದ ಯುಪಿಎ ಸರ್ಕಾರ ಎಡಪಕ್ಷಗಳ ಒತ್ತಡಕ್ಕೆ ಮಣಿಯಲು ಸಿದ್ಧವಾಗಿತ್ತು. "ನಿಮ್ಮ ಒಪ್ಪಿಗೆ ಇಲ್ಲದೆ ನಾವು ಸುರಕ್ಷಾ ಒಪ್ಪಂದಕ್ಕಾಗಿ ಅಂತರಾಷ್ಟ್ರೀಯ ಪರಮಾಣು ಶಕ್ತಿ ಏಜೆನ್ಸಿ(ಐಎಇಎ) ಎದುರು ಹೋಗುವುದಿಲ್ಲ. ಒಪ್ಪಂದವನ್ನು ಸಹಜ ಸಾವಿಗೆ ತಳ್ಳೋಣ" ಎಂಬ ಸ್ಪಷ್ಟ ಭರವಸೆಯನ್ನು ಅದು ಎಡಪಕ್ಷಗಳಿಗೆ ಕೊಟ್ಟಿತ್ತು. ಲೋಕಸಭೆಯಲ್ಲಿ 39 ಜನ ಸಂಸದರನ್ನು ಹೊಂದಿರುವ ಮುಲಾಯಂ ಸಿಂಗ್ ಅವರ ಸಮಾಜವಾದಿ ಪಕ್ಷ ಕಾಂಗ್ರೆಸ್ ನೇತೃತ್ವದ ಸರ್ಕಾರಕ್ಕೆ ಬೆಂಬಲ ನೀಡಲು ಮುಂದೆ ಬಂದ ತಕ್ಷಣ ಅದು ಎಡಪಕ್ಷಗಳ ಬೆಂಬಲವನ್ನು ಕಳಚಿಕೊಳ್ಳಲು ತಯಾರಾಯಿತು. ಬೆಲೆ ಏರಿಕೆಯಿಂದ ಬೆಚ್ಚಿ ಬಿದ್ದ ಸರ್ಕಾರ ಚುನಾವಣೆಯನ್ನು ಹೇಗಾದರೂ ಮಾಡಿ ತಪ್ಪಿಸಿಕೊಳ್ಳಲು ವಿರೋಧ ಪಕ್ಷಗಳ ಸಂಸದರಿಗೆ ಹಣ, ಅಧಿಕಾರದ ಆಮಿಷವೊಡ್ಡಿ ಬಹುಮತವನ್ನು ಗಿಟ್ಟಿಸಿಕೊಂಡಿತು. ಯುಪಿಎ ಸರ್ಕಾರದ ಈ ಚುನಾವಣಾ ಭೀತಿಯು ಬೆಲೆ ಏರಿಕೆ ಮತ್ತು ಹಣದುಬ್ಬರವನ್ನು ತಡೆಗಟ್ಟುವಲ್ಲಿ ಅದರ ವೈಫಲ್ಯತೆಗೆ ಸಾಕ್ಷಿಯಾಗಿದೆ.



ಕೇಂದ್ರ ಕಾಂಗ್ರೆಸ್ ನೇತೃತ್ವದ ಸರ್ಕಾರಕ್ಕೆ ಬಾಹ್ಯ ಬೆಂಬಲ ನೀಡುತ್ತಾ ಬಂದಿದ್ದ ಎಡಪಕ್ಷಗಳು, ಪೆಟ್ರೋಲ್ ಡೀಸೆಲ್ ಬೆಲೆಗಳನ್ನು ಏರಿಸುವ ಸರ್ಕಾರದ ಕ್ರಮವನ್ನು ತೀವ್ರವಾಗಿ ವಿರೋಧಿಸುತ್ತಾ ಬಂದಿದ್ದವು ಮಾತ್ರವಲ್ಲ ಬೆಲೆ ಏರಿಕೆಯನ್ನು ನಿಯಂತ್ರಿಸಲು ಸ್ಪಷ್ಟವಾದ ಕ್ರಮಗಳನ್ನು ಸೂಚಿಸುತ್ತಾ ಬಂದಿದ್ದವು. ಸರ್ಕಾರಕ್ಕೆ ಇದರಿಂದಾಗಿ ಸಾಕಷ್ಟು ಕಿರಿಕಿರಿ ಆಗಿದ್ದರೂ ಸರ್ಕಾರ ಅದನ್ನು ಸಹಿಸಿಕೊಂಡಿತ್ತು. ಏಕೆಂದರೆ ಅದಕ್ಕೆ ತಕ್ಷಣ ಚುನಾವಣೆಯನ್ನು ಎದುರಿಸುವ ಧೈರ್ಯವಿರಲಿಲ್ಲ. ಆದರೆ ಯಾವಾಗ ಸರ್ಕಾರಕ್ಕೆ ಮುಲಾಯಂ ಸಿಂಗ್ ಜೊತೆ ಬೆಂಬಲದ ವ್ಯಾಪಾರ ಕುದುರುವಂತಾಯಿತೋ ಆಗ ಪ್ರಧಾನಿ ಮನಮೋಹನ್‌ಸಿಂಗ್‌ರ ಧ್ವನಿ ಬದಲಾಯಿತು. "ಬೆಲೆ ಏರಿಕೆಯಂತಹ ವಿಷಯದಲ್ಲಿ ರಾಜಕೀಯ ಪಕ್ಷಗಳು ರಾಜಕೀಯ ಮಾಡಬಾರದು" ಎಂದು ಎಚ್ಚರಿಸುವಷ್ಟು ಅವರಿಗೆ ಧೈರ್ಯ ಬಂದಿತ್ತು.

ಹಣದುಬ್ಬರ ಜಾಗತಿಕ ವಿದ್ಯಮಾನವೇ?:

ಬೆಲೆ ಏರಿಕೆ ಮತ್ತು ಹಣದುಬ್ಬರ ಒಂದನ್ನೊಂದು ತಳಕು ಹಾಕಿಕೊಂಡಿರುತ್ತವೆ. ಬೆಲೆ ಏರಿಕೆಯಿಂದ ಹಣದುಬ್ಬರ ವಾಗುತ್ತದೆ, ಹಣದುಬ್ಬರದಿಂದ ಬೆಲೆಏರಿಕೆ ಆಗುತ್ತದೆ. ಹಣದುಬ್ಬರ ಮೂಲತಃ ಹಣದ ಮೌಲ್ಯ ಕುಸಿಯುವ ಕ್ರಿಯೆ. ಸರಳವಾಗಿ ಹೇಳುವುದಾದರೆ ಹಣದ ಲಭ್ಯತೆ ಅಗತ್ಯಕ್ಕಿಂತ ಹೆಚ್ಚಾದಾಗ ಹಣದುಬ್ಬರ ಉಂಟಾಗುತ್ತದೆ. ವಸ್ತುಗಳ ಬೆಲೆಗಳು ಏರುತ್ತಾ ಹೋದಂತೆ ಚಲಾವಣೆಯಲ್ಲಿರುವ ಕರೆನ್ಸಿ ನೋಟುಗಳು ಸಾಕಾಗುವುದಿಲ್ಲ. ಈ ಪರಿಸ್ಥಿತಿಯನ್ನು ನಿಭಾಯಿಸಲು ಸರ್ಕಾರ ಹೆಚ್ಚಿಗೆ ಕರೆನ್ಸಿ ನೋಟುಗಳನ್ನು ಮುದ್ರಿಸಿ ಬಿಡುಗಡೆ ಮಾಡುತ್ತದೆ. ಹೆಚ್ಚೆಚ್ಚು ಕರೆನ್ಸಿ ನೋಟುಗಳನ್ನು ಮುದ್ರಿಸಿ ಬಿಡುಗಡೆಗೊಳಿಸಿದರೆ ಅವುಗಳ ಬೆಲೆಯೂ ಇಳಿಯುತ್ತದೆ. ಬೇಡಿಕೆಗೆ ಅಗತ್ಯವಿರುವಷ್ಟು ಸರಕುಗಳು ಲಭ್ಯ ಇಲ್ಲದಾದಾಗ ಆದರೆ ಚಲಾವಣೆಯಲ್ಲಿರುವ ಹಣದ ಪ್ರಮಾಣ ಹೆಚ್ಚಾದಾಗ ಸರಕುಗಳಿಗೆ ಮತ್ತು ಸೇವೆಗಳಿಗೆ ಹೆಚ್ಚಿನ ದರ ವಿಧಿಸಲ್ಪಡುತ್ತದೆ. ಪರಿಣಾಮವಾಗಿ ಹಣ ಅಪಮೌಲ್ಯಗೊಂಡು ವಸ್ತುಗಳನ್ನು ಕೊಂಡುಕೊಳ್ಳಲು ಹೆಚ್ಚು ಹೆಚ್ಚು ನೋಟುಗಳನ್ನು ಕ್ರಯದ ರೂಪದಲ್ಲಿ ಕೊಡಬೇಕಾಗುತ್ತದೆ. ಹೀಗೆ ಹಣದುಬ್ಬರ ಮತ್ತು ಬೆಲೆ ಏರಿಕೆ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ ಪರಸ್ಪರ ಕೂಡಿಕೊಂಡಿರುತ್ತವೆ.

ಹಣದುಬ್ಬರ ಇಂದು ಹಿಂದು ಜಾಗತಿಕ ವಿದ್ಯಮಾನವಾಗಿದೆ ಎಂದು ಡಾ:ಮನಮೋಹನ್‌ಸಿಂಗ್ ಹೇಳಿದ್ದಾರೆ. ಹೌದು,

ಪುಟ 13ಕ್ಕೆ

ಯಡಿಯೂರಪ್ಪನವರ ದರ್ಬಾರಿನಲ್ಲಿ....!

ದೇವಾನುದೇವತೆ(?)ಗಳ ಆಶೀರ್ವಾದದಿಂದ ಅಧಿಕಾರಕ್ಕೆಬಂದಿರುವ ಯಡಿಯೂರಪ್ಪನವರ ದರ್ಬಾರಿನಲ್ಲಿ ಅಕ್ಕಿ ಬೆಲೆ ಏರಿಕೆಯಿಂದಾಗಿ ಜನಸಾಮಾನ್ಯರು ಕಂಗಾಲಾಗಿದ್ದಾರೆ. ಜೂನ್ ತಿಂಗಳಲ್ಲಿ ಕೆ.ಜಿ.ಗೆ. 15-17 ರೂ ಇದ್ದ ಅಕ್ಕಿ ಬೆಲೆ ಜುಲೈ ತಿಂಗಳಲ್ಲಿ 24-26 ರೂ. ಆಗಿದೆ. ಒಂದೇ ತಿಂಗಳಲ್ಲಿ ಪ್ರತಿ ಕ್ವಿಂಟಾಲ್ ಅಕ್ಕಿಯ ಬೆಲೆ ಸರಾಸರಿ 900 ರೂ. ಗಳಷ್ಟು ಏರಿದೆ! ತೊಗರಿ ಬೇಳೆ ಪ್ರತಿ ಕೆ.ಜಿ.ಗೆ 36 ರೂ. ಇದ್ದದ್ದು 44 ರೂ. ಆಗಿದೆ. ಉದ್ದಿನ ಬೇಳೆ ಪ್ರತಿ ಕೆ.ಜಿ.ಗೆ 33 ರೂ. ಇದ್ದದ್ದು ಈಗ 43 ರೂ. ಆಗಿದೆ. ಹೆಸರುಬೇಳೆ ಕೆಜಿಗೆ 30 ರೂ. ಇದ್ದದ್ದು 40 ರೂ. ಆಗಿದೆ. ಕಡಲೆಬೇಳೆ ಕೆ.ಜಿ.ಗೆ 30 ರೂ. ಇದ್ದದ್ದು 34 ರೂ. ಆಗಿದೆ. ಸೂರ್ಯಕಾಂತಿ ಎಣ್ಣೆ ಸಗಟು ಬೆಲೆ 68-71 ರೂ. ಇದ್ದದ್ದು ಈಗ 76-78 ರೂ. ಗೆ ಏರಿದೆ. 52-54 ರೂ. ಇದ್ದ ತಾಳೆ ಎಣ್ಣೆ ಧಾರಣೆ 57-58 ರೂ. ಆಗಿದೆ. ಶೇಂಗಾ ಎಣ್ಣೆ, ಸೋಯಾ ಎಣ್ಣೆ, ಎಳ್ಳೆಣ್ಣೆ ಬೆಲೆಯೂ ಕೆ.ಜಿ.ಗೆ. 4-5 ರೂ. ಏರಿಕೆ ಕಂಡಿದೆ.

ಸಕ್ಕರೆ ಪ್ರತಿ ಕಿಲೋಗೆ 2 ರೂ. ಹೆಚ್ಚಾಗಿದೆ. ಬೆಲ್ಲದ ದರ ಒಂದು ಕ್ವಿಂಟಾಲ್‌ಗೆ 150 ರಿಂದ 200 ರೂ. ಜಾಸ್ತಿ ಆಗಿದೆ. ಪಂಚಮಿ ಮುನ್ನವೇ ಬೆಲ್ಲದ ಬೆಲೆ ಏರಿದ್ದು ಜನರ ಪಾಲಿಗೆ ಬೆಲ್ಲ ಕಹಿಯಾಗಲಿದೆ. ದಿನಸಿ, ಸಾಂಬಾರು ಪದಾರ್ಥಗಳ ಬೆಲೆಗಳು ಸಹ ವಿಪರೀತವಾಗಿ ಏರುಮುಖವಾಗಿದೆ. ಜೀರಿಗೆ ಕಳೆದ ವಾರ ಕೆ.ಜಿ.ಗೆ 80 ರೂ. ಇದ್ದದ್ದು ಈಗ 100ರೂ. ಆಗಿದೆ. ಏಲಕ್ಕಿ ಕೆ.ಜಿ.ಗೆ 550 ರೂ. ಇದ್ದದ್ದು ಈಗ 640 ರೂ. ಆಗಿದೆ. ಚಕ್ಕೆ 78 ರೂ.ಯಿಂದ 85 ರೂ.ಗೆ ಏರಿದೆ. ಲವಂಗ 250 ರೂ. ನಿಂದ 310 ರೂ. ಗೆ ಏರಿದೆ. ಬಾದಾಮಿ 320 ರೂ.ಯಿಂದ 360 ಕ್ಕೆ ಏರಿದೆ.

ಬೆಲೆ ಏರಿಕೆ ಬಿಸಿ ದಿನ ಬಳಕೆ ವಸ್ತುಗಳಾದ ಸಾಬೂನು, ಶಾಂಪೂ, ಬಿಸ್ಕತ್ತು, ಡಿಟರ್ಜೆಂಟ್ ಮೊದಲಾದ ಗ್ರಾಹಕ ವಸ್ತುಗಳಿಗೂ ಪಸರಿಸಿದೆ. ಸಾಬೂನು ಬೆಲೆ ಶೇ. 13.5ರಷ್ಟು, ಡಿಟರ್ಜಂಟ್ ಬಿಲ್ಲೆ ಶೇ. 23.5 ರಷ್ಟು, ಡಿಟರ್ಜೆಂಟ್ ಪುಡಿ ಬೆಲೆ ಶೇ. 7.5 ರಷ್ಟು, ಬಿಸ್ಕತ್ತು ಶೇ. 9 ರಷ್ಟುಹೆಚ್ಚಾಗಿದೆ.

ಎಲ್ಲಕ್ಕಿಂತಲೂ ಹೆಚ್ಚಾಗಿ ಅಕ್ಕಿ ಬೆಲೆ ಏರಿಕೆ ರಾಜ್ಯದ ಜನತೆಗೆ ನುಂಗಲಾರದ ಬಿಸಿತುಪ್ಪವಾಗಿದೆ. ರಾಜ್ಯದ ಕಡುಬಡವರಿಗೆ ಆಗಸ್ಟ್ 1 ರಿಂದ ಕೆ.ಜಿ.ಗೆ 2 ರೂ. ದರದಲ್ಲಿ ತಲಾ 25 ಕೆ.ಜಿ. ಅಕ್ಕಿ ವಿತರಿಸುವ ಯಡಿಯೂರಪ್ಪನವರ ಚುನಾವಣಾ ಪ್ರಣಾಳಿಕೆಯ ಭರವಸೆಯನ್ನು ಬಜೆಟ್‌ನಲ್ಲಿ ಕೈಬಿಟ್ಟಿದ್ದು ಜನತೆಯಲ್ಲಿ ತೀವ್ರ ಅಘಾತವನ್ನು ಉಂಟುಮಾಡಿದೆ. ಬೆಲೆ ಏರಿಕೆಯನ್ನು ತಡೆಗಟ್ಟುವ ಯಾವುದೇ ಕ್ರಮವನ್ನು ಯಡಿಯೂರಪ್ಪನವರ ಬಜೆಟ್ ಪ್ರಸ್ತಾಪಿಸದಿರುವ ದರ ವಿರುದ್ಧ ಜನರ ಆಕ್ರೋಶ ಸಿಡಿದು ಬರಲಾರಂಭಿಸಿದೆ. ಸರ್ಕಾರ ಈ ದಿಸೆಯಲ್ಲಿ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳದೆ ಹೋದರೆ ರಸಗೊಬ್ಬರಗಳಿಗಾಗಿ ದಂಗೆಗಳಾಗದಂತೆ ಅಕ್ಕಿಗಾಗಿ ರಾಜ್ಯದಲ್ಲಿ ದಂಗೆಗಳಾದರೆ ಆಶ್ಚರ್ಯವಿಲ್ಲ. ○



ರಾಜ್ಯಕ್ಕೆ ರಾಜ್ಯವೇ ಕಂಡು ಬೆಚ್ಚಿಬಿದ್ದ ಹಾಜಬ್ಬ, ಹಸನಬ್ಬ ಬೆತ್ತಲೆ ಪ್ರಕರಣದಲ್ಲಿ ಅಪರಾಧಿಗಳಿಗೆ ಶಿಕ್ಷೆಯಾಗದೆ ಅವರು ಬಜಾವಾಗಿರುವುದರ ಅರ್ಥವೇನು?

ಆದಿ ಉಡುಪಿ ಬೆತ್ತಲೆ ಪ್ರಕರಣ

ಹಾಜಬ್ಬ, ಹಸನಬ್ಬರಿಗೆ ಕೊನೆಗೂ ಸಿಗದ ನ್ಯಾಯ

ಮೂರು ವರ್ಷಗಳ ಹಿಂದೆ ರಾಜ್ಯಾದ್ಯಂತ ಕೋಲಾಹಲ ಸೃಷ್ಟಿಸಿದ್ದ ಮತ್ತು ವಿಧಾನಸಭೆಯಲ್ಲೂ ಗಮನ ಸೆಳೆದ ಕುಖ್ಯಾತ ಆದಿ ಉಡುಪಿ ಬೆತ್ತಲೆ ಪ್ರಕರಣದ ಎಲ್ಲಾ 13 ಮಂದಿ ಆರೋಪಿಗಳನ್ನೂ ಉಡುಪಿಯ ತ್ವರಿತ ವಿಚಾರಣಾ ನ್ಯಾಯಾಲಯದ ನ್ಯಾಯಮೂರ್ತಿ ಶ್ರೀ ಶಿವಲಿಂಗೇಗೌಡರು ಖುಲಾಸೆಗೊಳಿಸಿ ತೀರ್ಪು ನೀಡಿದ್ದಾರೆ. ಈ ಪ್ರಕರಣ ಹೀಗೆ ಕೊನೆಗೊಳ್ಳಬಹುದೆಂಬ ಅನುಮಾನ ಮೊದಲಿನಿಂದಲೂ ಇದ್ದ ಕಾರಣ ಈ ತೀರ್ಪು ಅನಿರೀಕ್ಷಿತವಾಗಿರಲಿಲ್ಲ. ಯಾಕೆಂದರೆ ಆಪಾದಿತರೆಲ್ಲರೂ ಸಂಘ ಪರಿವಾರದ ಘಟನಾನುಘಟಿಗಳ ನೆಚ್ಚಿನ ಭಂಟರು. ಈ ಕಿಡಿಗೇಡಿಗಳಿಂದ ಹಲ್ಲೆಗೀಡಾಗಿ ಅವಮಾನಿತರಾದ ಹಾಜಬ್ಬ ಮತ್ತು ಅವರ ಮಗ ಹಸನಬ್ಬರಿಗೆ ಕೊನೆಗೂ ನ್ಯಾಯ ಸಿಗಲೇ ಇಲ್ಲ.

2005ನೆ ಇಸವಿ ಮಾರ್ಚ್ ತಿಂಗಳ 13 ರಂದು. ಕಾಪು ಸಮೀಪದ ಮೂಳೂರಿನ ನಿವಾಸಿಗಳಾದ ಹಾಜಬ್ಬ ಮತ್ತು ಹಸನಬ್ಬ ಉಡುಪಿ ಬಳಿಯ ಮೂಡುಬೆಟ್ಟಿನ ಕಾಂತು ಪೂಜಾರಿ ಎಂಬುವರಿಂದ ಹಸುವೊಂದನ್ನು ಖರೀದಿಸಿ ಅದನ್ನು ಮಾರುತಿ ಓಮ್ನಿಯಲ್ಲಿ ಸಾಗಿಸುತ್ತಿದ್ದಾಗ ರಾತ್ರಿ 8 ಗಂಟೆಗೆ ಹಸುವನ್ನು ಒಯ್ಯುತ್ತಿದ್ದಾರೆಂದು ಹಸು ಮಾರಿದ ಕಾಂತುಪೂಜಾರಿ ಸಂಘ ಪರಿವಾರದವರಿಗೆ ಹೇಳಿಕೊಟ್ಟು ಅದರಂತೆ ಯಶಪಾಲ ಸುವರ್ಣ, ಜಯಪ್ರಕಾಶ್, ಸುಕೇಶ್, ಮನೋಜ್‌ಶೆಟ್ಟಿ ಮತ್ತು ಸ್ವತಃ ಕಾಂತೂಪೂಜಾರಿ ಸೇರಿದಂತೆ 13 ಜನರ ತಂಡವು ಆದಿ ಉಡುಪಿ ಬಳಿ ಹಾಜಬ್ಬ, ಹಸನಬ್ಬರನ್ನು ತಡೆದು ದೊಣ್ಣೆ ಮತ್ತು ಉಕ್ಕಿನ ರಾಡ್‌ಗಳಿಂದ ಅಮಾನುಷವಾಗಿ ಥಳಿಸಿದ್ದೇ ಅಲ್ಲದೆ ಹಸನಬ್ಬ ಬಳಿ ಇದ್ದ ರೂ.15,000 ನಗದು, ಪರ್ಸ್, ಮೊಬೈಲ್ ಫೋನ್ ಮತ್ತು ಹಾಜಬ್ಬ ಬಳಿ ಇದ್ದ ಚಿನ್ನದ ಚೈನಿನ ಕೈಗಡಿಯಾರಗಳನ್ನು ಕಸಿದುಕೊಂಡು ಪರಾರಿಯಾಯಿತು. ಪರಾರಿಯಾಗುವ ಮೊದಲು ಅವರಿಬ್ಬರನ್ನು ನಗ್ನಗೊಳಿಸಲಾಯಿತೆಂದು ಪ್ರಾಸಿಕ್ಯೂಷನ್ ಆರೋಪಿಸಿತ್ತು. ಆ ಬಳಿಕ ಪೆಟ್ಟು ತಿಂದ ಹಾಜಪ್ಪ ಅವರನ್ನೇ ಪೋಲೀಸರು ಮಲ್ಪೆ ಠಾಣೆಗೆ ಕರೆದೊಯ್ದು ಅವರ ಮೇಲೆ ಗೋ ಹತ್ಯಾ ನಿಷೇಧ ಕಾನೂನಿನನ್ವಯ ಪ್ರಕರಣ ದಾಖಲಿಸಿದ್ದರು ಮಾರ್ಚ್ 14 ರಂದು. ಮಗ ಇನ್ನೂ ಮನೆಗೆ ಬರದಿದ್ದಾಗ ಅವನನ್ನು ಹುಡುಕಿಕೊಂಡು ಬಂದ ಹಾಜಬ್ಬರಿಗೆ ಆದಿ ಉಡುಪಿ ಸಮೀಪ ಗೋಣಿ ಚೀಲವನ್ನು ಮೈಗೆ ಸುತ್ತಿಕೊಂಡಿದ್ದ ಹಸನಬ್ಬ ಕಾಣಸಿಕೊಂಡರು. ಪೋಲಿಸರು ಮಾರ್ಚ್ 14 ರಂದು ಹೊಡೆತ, ದರೋಡೆ ಪ್ರಕರಣ ದಾಖಲಿಸಿದರು. ಮರುದಿನ ಪತ್ರಿಕೆಗಳಲ್ಲಿ ಬೆತ್ತಲೆಗೊಳಿಸಲ್ಪಟ್ಟ ಹಾಜಬ್ಬ, ಹಸನಬ್ಬ ಅವರ ಫೋಟೋ ಪ್ರಕಟವಾಗಿ ರಾಜ್ಯಾದ್ಯಂತ ಕೋಲಾಹಲವುಂಟಾದ ಮೇಲೆ ನಗ್ನಗೊಳಿಸಿದ ಪ್ರಕರಣವನ್ನು ದಾಖಲಿಸಲಾಯಿತು.

ಮೂರು ವರ್ಷಗಳ ಕಾಲ ನಡೆದ ವಿಚಾರಣೆಯಲ್ಲಿ 35 ಮಂದಿಯನ್ನು ಸಾಕ್ಷಿಗಳಾಗಿ ಹೆಸರಿಸಲಾಗಿದ್ದರೂ ನ್ಯಾಯಾಲಯದಲ್ಲಿ ಸಾಕ್ಷ್ಯ ನುಡಿದವರು 25 ಮಂದಿ ಮಾತ್ರ. ಪ್ರಾಸಿಕ್ಯೂಷನ್ ಪರ ಸಾಕ್ಷಿದಾರರು ಪ್ರತಿಕೂಲ ಸಾಕ್ಷ್ಯ ನೀಡಿದುದರಿಂದ ಆರೋಪಿಗಳನ್ನು ಬಿಡುಗಡೆಗೊಳಿಸಲಾಗಿದೆ ಎಂದು ಆರೋಪಿ ಪರ ವಕೀಲ ಶ್ರೀ ಶಾಂತರಾಮಶೆಟ್ಟಿ ಹೇಳಿದ್ದಾರೆ. ಆರೋಪಿಗಳಲ್ಲಿ ಯಶಪಾಲಸುವರ್ಣ ಸೇರಿದಂತೆ ಹೆಚ್ಚಿನವರು ಉಡುಪಿ ಶಾಸಕ ರಘುಪತಿ ಭಟ್‌ರ ನಿಕಟವರ್ತಿಗಳು ಹಾಗಾಗಿ ಸರ್ಕಾರಿ ಪರ ಸಾಕ್ಷಿಗಳನ್ನು ಬೆದರಿಸಿ, ಪ್ರಲೋಭನೆ ನೀಡಿ ಅವರಿಂದ ಪ್ರತಿಕೂಲ ಸಾಕ್ಷಿ ಹೇಳಿಸಿರುವುದು ಸ್ಪಷ್ಟವಿದೆ. ಕಂಬಾಲಪಲ್ಲಿಯ ದಲಿತರಿಗಾದಂತಹ ಅನ್ಯಾಯವೇ ಹಾಜಬ್ಬ, ಹಸನಬ್ಬರಿಗೂ ಆಗಿದೆ. ಬೆತ್ತಲಾಗಿದವರ ಫೋಟೋ ತೆಗೆದ ಉಮೇಶ್ ಮಾರ್ಪಳ್ಳಿ ಎಂಬುವರು ಈಗಿನ ಅತ್ಯಾಧುನಿಕ ತಂತ್ರಜ್ಞಾನದಲ್ಲಿ ಫೋಟೋಗಳನ್ನು ಕೃತಕವಾಗಿ ಸೃಷ್ಟಿಸಲು ಸಾಧ್ಯ ಎಂಬ ಸಂಗತಿಯನ್ನು ಪ್ರಾಸಿಕ್ಯೂಶನ್ ವೇಳೆ ಒಪ್ಪಿಕೊಂಡಿದ್ದರೂ ಮತ್ತು ಪ್ರಾಸಿಕ್ಯೂಶನ್ ಆರೋಪವನ್ನು ಸ್ಪಷ್ಟವಾಗಿ ರುಜುವಾತುಪಡಿಸುವಲ್ಲಿ ವಿಫಲವಾಗಿದೆ ಎಂಬ ಆಧಾರದಲ್ಲಿ ನ್ಯಾಯಾಲಯ ಎಲ್ಲ ಆಪಾದಿತರನ್ನು ಖುಲಾಸೆಗೊಳಿಸಿದೆ. ಆರೋಪಿಗಳಲ್ಲಿ ಹೆಚ್ಚಿನವರು ಸ್ಥಳೀಯ ನ್ಯಾಯಾಲಯ ಅಥವಾ ಹೈಕೋರ್ಟ್‌ನಿಂದ ಜಾಮೀನು ಪಡೆದಿದ್ದರೂ ಮನೋಜ್ ಶೆಟ್ಟಿ ಎಂಬ ಒಬ್ಬಾತ ಇತ್ತೀಚೆಗೆ ಅಪಘಾತದಲ್ಲಿ ಮೃತಪಟ್ಟಿದ್ದ.

ಹಾಜಬ್ಬ, ಹಸನಬ್ಬರ ಮೇಲೆ ಹಲ್ಲೆ ನಡೆಸಿ, ಬೆತ್ತಲೆಗೊಳಿಸಿದ 'ಸಾಹಸ'ಕ್ಕಾಗಿ ಪ್ರಮುಖ ಆರೋಪಿ ಯಶಪಾಲ ಸುವರ್ಣನನ್ನು ಬಿಜೆಪಿಯವರು ಉಡುಪಿ ನಗರ ಸಭೆಯ ನಾಮ ನಿರ್ದೇಶಿತ ಸದಸ್ಯನಾಗಿ ಮಾಡಿ ಪುರಸ್ಕರಿಸಿದ್ದರು. ಈತ ಈಗ ಕಾಡಬೆಟ್ಟು ವಾರ್ಡಿನಿಂದ ಕೌನ್ಸಿಲರ್ ಆಗಿ ಚುನಾಯಿತನಾಗಿದ್ದಾನೆ.

ವಿದ್ಯೆಯೂ ಇಲ್ಲದೆ ಬೇರೆ ಯಾವ ಉದ್ಯೋಗವೂ ಗೊತ್ತಿಲ್ಲದ ಹಾಜಬ್ಬ ಮತ್ತು ಹಸನಬ್ಬ ಹಸುಗಳನ್ನು ಖರೀದಿಸಿ ಮಾರಾಟ ಮಾಡುವ ಕಸುಬಿನಿಂದಲೇ ಬದುಕು ಸಾಗಿಸುತ್ತಿದ್ದವರು. ಈ ಪ್ರಕರಣ ನಡೆದ ಬಳಿದ ಮೂರು ವರ್ಷದಿಂದ ಅವರು ಮನೆ ಬಿಟ್ಟು ಹೊರಗೆ ಹೋಗಲೂ ಭಯಪಡುವಂತಹ ವಾತಾವರಣವಿದೆ. ನ್ಯಾಯಾಲಯದ ತೀರ್ಪಿನಿಂದ ಕಂಗೆಟ್ಟಿರುವ ಹಾಜಬ್ಬ "ನನಗೆ ನ್ಯಾಯಾಲಯದ ಮೇಲೆ ಭರವಸೆ ಇದೆ. ಆದರೆ ಪಬ್ಲಿಕ್ ಪ್ರಾಸಿಕ್ಯೂಟರ್ ನಮಗೆ ನ್ಯಾಯಾಲಯದ ಕಲಾಪಗಳ ಬಗ್ಗೆಯಾಗಲೀ ವಿಚಾರಣೆಯ ದಿನಾಂಕಗಳ ಬಗ್ಗೆಯಾಗಲೀ ಸರಿಯಾಗಿ ಮಾಹಿತಿ ನೀಡುತ್ತಿರಲಿಲ್ಲ. ನಮ್ಮ ಪ್ರಕರಣದ ತನಿಖೆ ಯಾವ ಹಂತದಲ್ಲಿ ಇದೆ ಎಂಬ ಮಾಹಿತಿಯನ್ನು ನೀಡುತ್ತಿರಲಿಲ್ಲ" ಎಂದು ಪತ್ರಿಕೆಗಳಿಗೆ ಹೇಳಿಕೊಂಡಿದ್ದಾರೆ. "ಈ ಪ್ರಕರಣದ ಬಳಿಕ ಅನೇಕ ರಾಜಕಾರಣಿಗಳು ನಮ್ಮ ಮನೆಗೆ ಬಂದು ಸಾಂತ್ವನ ಹೇಳಿದ್ದರು. ಸರ್ಕಾರಿ ಉದ್ಯೋಗ ನೀಡುತ್ತೇವೆ ಎಂಬ ಭರವಸೆಯೂ ಸಿಕ್ಕಿತ್ತು. ಆದರೆ ಅವರೆಲ್ಲ ಈ ಎಲ್ಲಿದ್ದಾರೆ" ಎಂದು ಹಾಜಬ್ಬರ ಹಿರಿಯ ಮಗ ಅಬ್ದುಲ್ ರಹಮಾನ್ ಪ್ರಶ್ನಿಸಿದ್ದಾರೆ.

ಘಟಾನುಘಟಿಗಳ ಪ್ರಕರಣದಲ್ಲಿ, ಭಾರಿ ರಾಜಕೀಯ ಒತ್ತಡವಿರುವಾಗ ಪಬ್ಲಿಕ್ ಪ್ರಾಸಿಕ್ಯೂಟರ್‌ಗಳು ಮೊಕದ್ದಮೆಗಳನ್ನು ಬೇಕೆಂದೇ ಕೈ ಚೆಲ್ಲಿ ಬಿಡಬಹುದೇ? ಈ ಪ್ರಕರಣದಲ್ಲೂ ಹಾಗಾಗಿದೆಯೇ? ಅದೇ ಪದ್ಮಪ್ರಿಯಾ ಪ್ರಕರಣದಲ್ಲಿ ಆಕೆ ಸಾಯುವ ಎರಡು ದಿನ ಮುಂಚಿತವಾಗಿಯೇ ಪೋಲಿಸರ ವಶದಲಿದ್ದ ಬಡಪಾಯಿ ಅತುಲ್‌ರಾವ್‌ನನ್ನು ಈಗಲೂ ನ್ಯಾಯಾಂಗ ಬಂಧನದಲ್ಲೇ ಕೊಳೆಯುವಂತೆ ಮಾಡುವಲ್ಲಿ ಮಾನ್ಯ ಪಬ್ಲಿಕ್ ಪ್ರಾಸಿಕ್ಯೂಟರ್ ಅವರ 'ದಕ್ಷತೆ 'ಯನ್ನು ಮೆಚ್ಚಿಕೊಳ್ಳಬೇಕು!

ಪ್ರಕರಣದ ತೀರ್ಪು ಹೊರ ಬಂದ ಕೂಡಲೇ ಸಂಘ ಪರಿವಾರದವರು ಉಡುಪಿಯ ಬೀದಿಯಲ್ಲಿ ಮೆರವಣಿಗೆ ತೆಗೆದು ಪಟಾಕಿ ಸಿಡಿಸಿ ಅಸಹ್ಯ ರೀತಿಯಲ್ಲಿ ವಿಜಯೋತ್ಸವ ಆಚರಿಸಿದ್ದಾರೆ. ನ್ಯಾಯಾಲಯದ ತೀರ್ಪು ತಿಳಿಯಲು ಹೋಗಿದ್ದ ಉಡುಪಿಯ ಖ್ಯಾತ ವಿಮರ್ಶಕ, ಚಿಂತಕ ಶ್ರೀ ಜಿ.ರಾಜಶೇಖರ್ ಅವರನ್ನು ನ್ಯಾಯಾಲಯದ ಆವರಣದಲ್ಲೇ ಅವಾಚ್ಯ ಶಬ್ದಗಳಿಂದ ನಿಂದಿಸಿ ಹೀಯಾಳಿಸಿದ್ದಾರೆ. ಬಿಜೆಪಿ ಆಡಳಿತೆಯಲ್ಲಿ ನ್ಯಾಯಾಂಗಕ್ಕೂ ಎಂತಹ ಅವಸ್ಥೆ ಬರಬಹುದು ಎಂದು ಇದೀಗ ಯೋಚಿಸಬೇಕಾಗಿದೆ. ಈ ಪ್ರಕರಣ ಇಲ್ಲಿಗೆ ಹೀಗೆ ಮುಕ್ತಾಯವಾಗಬಾರದು. ಈ ಪ್ರಕರಣದ ಮರು ವಿಚಾರಣೆ ನಡೆಯಬೇಕು, ಅದು ಈಗ ತೀರ್ಪು ನೀಡಿರುವ ಕೋರ್ಟಿನಿಂದ ಹೊರಗೆ ನಡೆಯಬೇಕು ಎಂದು ಸಿಪಿಐ(ಎಂ) ಪಕ್ಷವು ಸರ್ಕಾರವನ್ನು ಒತ್ತಾಯಿಸಿದೆ. ಗುಜರಾತ್‌ನ ಕೆಲವು ಪ್ರಕರಣಗಳಲ್ಲಿ ಹೀಗಾಗಿದ್ದರಿಂದಲ್ಲವೇ ನ್ಯಾಯ ಸಿಕ್ಕಿದ್ದು.

■ ಎ.ಎಸ್.ಆಚಾರ್ಯ

'ಕ್ರಿಮಿನಲ್ ಸಚಿವರನ್ನು ಸಂಪುಟದಿಂದ ಕೈ ಬಿಡಿರಿ'

ಮೌಲ್ಯಾಧಾರಿತ ರಾಜಕೀಯ ಮಾಡುತ್ತೇವೆ ಎಂದು ಹೇಳುತ್ತಾ ಬಂದ ಬಿಜೆಪಿ, ರಾಜ್ಯ ಸರ್ಕಾರದ ಸಂಪುಟದಲ್ಲಿ ಕ್ರಿಮಿನಲ್ ಹಿನ್ನಲೆ ಇರುವ 10 ಮಂದಿಯನ್ನು ಸಚಿವರನ್ನಾಗಿಸಿದೆ. ಕಳಂಕಿತರನ್ನು ಕೂಡಲೇ ಸಂಪುಟದಿಂದ ಕೈಬಿಡಬೇಕೆಂದು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿಯ ಸದಸ್ಯ ಕೆ.ಆರ್. ಶ್ರೀಯಾನ್‌ರವರು ಹೇಳಿದರು. ಅವರು ಆಗಸ್ಟ್ 1ರಂದು ಜಿಲ್ಲಾಧಿಕಾರಿಗಳ ಕಛೇರಿ ಎದುರು ಪ್ರದರ್ಶನವನ್ನು ಉದ್ದೇಶಿಸಿ ಮಾತನಾಡುತ್ತಿದ್ದರು. ಚುನಾವಣಾ ಪ್ರಣಾಳಿಕೆಯಲ್ಲಿ ನೀಡಿರುವ ಭರವಸೆಗಳನ್ನು ಗಾಳಿಗೆ ತೂರಿದೆ. ಬಜೆಟ್ ಬಡವರಿಗೆ ರೂಪಾಯಿಯಲ್ಲಿ 25 ಕೆ.ಜಿ. ಅಕ್ಕಿ ಕೊಡುವ ಬಗ್ಗೆ ಚಕಾರ ಶಬ್ದವಿಲ್ಲ. ನಿರುದ್ಯೋಗ ಭತ್ಯೆ ಬಗ್ಗೆ ಗಮನವೇ ಇಲ್ಲ. ಬದಲಿಗೆ ಸರ್ಕಾರಿ ನೌಕರರ ನಿವೃತ್ತಿ ವಯೋಮಿತಿಯನ್ನು 2 ವರ್ಷ ಏರಿಸಿ ಯುವಜನರಿಗೆ ಉದ್ಯೋಗ ಸಿಗಬೇಕಾದ ಅವಕಾಶಕ್ಕೆ ತಣ್ಣೀರೆರಚಿದೆ. ವಿದ್ಯುತ್ ಉತ್ಪಾದನೆಗೆ ಯಾವುದೇ ದೂರದೃಷ್ಟಿ ಇಲ್ಲದ ಸರ್ಕಾರ ರೈತರಿಗೆ 10 ಹೆಚ್.ಪಿ. ವಿದ್ಯುತ್ ಉಚಿತ ಘೋಷಣೆ ಮಾಡಿದೆ. ಆದರೆ ಈ ಯೋಜನೆ ಶಾಶ್ವತ ಮುಂದುವರಿಸುವ ಖಾತರಿ ಇಲ್ಲ. ರೈತರ ಬೀಜ, ರಸಗೊಬ್ಬರ, ಆಧುನಿಕ ಕೃಷಿ ಪದ್ಧತಿ ಬಗ್ಗೆ ಯಾವುದೇ ದೂರದೃಷ್ಟಿ ಇಲ್ಲದ ಸರ್ಕಾರ ರೈತರು ರಸಗೊಬ್ಬರಕ್ಕಾಗಿ ಅಂಗಲಾಚಿದಾಗ ಗುಂಡುದಾಳಿ ಮಾಡಿಕೊಲೆ ಮಾಡುತ್ತಿದೆ. ಗ್ರಾಮೀಣ ಕರ್ನಾಟಕದ ಜನತೆಯ ಬರವನ್ನು ಎದುರಿಸಲಾರದೆ ನಗರಕ್ಕೆ ವಲಸೆ ಬರುತ್ತಿರುವಾಗ ಸರ್ಕಾರ ಗ್ರಾಮೀಣ ರೈತರು, ಕೃಷಿ ಕೂಲಿಕಾರರು ಕಲ್ಲಿಯೇ ನೆಲೆ ನಿಂತು ದುಡಿಮೆ ಮಾಡಲು ಯಾವುದೇ ಕೈಗಾರಿಕೆಯಾಗಲೀ, ಹಿಂದುಳಿದ ವರ್ಗ, ದಲಿತರ ಅಭಿವೃದ್ಧಿಗಾಗಿ ಬಜೆಟ್‌ನಲ್ಲಿ ಪ್ರಸ್ತಾಪಗಳಿಲ್ಲವೆಂದ ಅವರು ಬರೀ ಜನ ಮರುಳು ಕಾರ್ಯಕ್ರಮಗಳನ್ನು ಇಟ್ಟಿದೆ ವಿನಃ ಈ ವ್ಯಯವನ್ನು ಪೂರೈಸುವ ಯಾವುದೇ ಸ್ಪಷ್ಟ ಯೋಜನೆಗಳಿಲ್ಲದೆ ಸರ್ಕಾರಿ ಜಮೀನುಗಳನ್ನು ಒಟ್ಟುಗೂಡಿಸಲು ಹೊರಟಿದೆ. ಸಂಘ ಪರಿವಾರದ ಅಜೆಂಡಾವಾಗಿರುವ ಬಜೆಟ್ ಕೇಸರೀಕರಣಕ್ಕೆ ಆದ್ಯತೆ ರಸಗೊಬ್ಬರದ ಬದಲಿಗೆ ಸಾವಯವ ಗೊಬ್ಬರ ಎಂದು ಹೇಳಿ ಗೋವು ಮೂತ್ರ; ಸಗಣಿ ಶೇಖರಣೆಗೆ ಹಣ ವಿನಿಯೋಗಿಸಲು ಹೊರಟಿದೆ. ಸಂಸ್ಕೃತ ವಿವಿಗೆ ಆದ್ಯತೆ, ನೀಡ ಹೊರಟಿದೆ. ಮಠಾಧಿಪತಿಗಳಿಗೆ ಕೋಟಿಗಟ್ಟಲೆ ದುಡ್ಡು ಸುರಿಯುತ್ತಿದೆ ಎಂದ ಅವರು ಬಿಜೆಪಿಯ ಸರ್ಕಾರ ಪ್ರತಿಗಾಮಿಯಾಗಿದೆ ಎಂದು ಹೇಳಿದರು. ಪ್ರತಿಭಟನೆಯ ನೇತೃತ್ವವನ್ನು ಸಿಪಿಐ(ಎಂ) ಮುಂದಾಳುಗಳಾದ ವಸಂತ ಆಚಾರಿ, ಯು.ಬಿ. ಲೋಕಯ್ಯ, ರಾಮಚಂದ್ರ ಉಚ್ಚಿಲ, ಯಾದವ ಶೆಟ್ಟಿ, ಸುನೀಲ್‌ಕುಮಾರ್, ಕೃಷ್ಣಪ್ಪ ಸಾಲಿಯಾನ್, ಸಂಜೀವ ಬಂಗೇರ, ಸದಾಶಿವದಾಸ್, ಕೃಷ್ಣಪ್ಪ ಕೊಂಚಾಡಿ, ಬಾಬು ದೇವಾಡಿಗ ಮುಂತಾದವರು ವಹಿಸಿದ್ದರು.

-ವಸಂತ ಆಚಾರಿ

ಯುಪಿಎ ಸರ್ಕಾರ ಹಾಗೂ ಕೋಮುವಾದಿ ಶಕ್ತಿಗಳ ವಿರುದ್ಧದ ಹೋರಾಟ ತೀವ್ರಗೊಳ್ಳಲಿದೆ

ಪ್ರಕಾಶ್ ಕಾರಟ್

ಅಣು ಒಪ್ಪಂದದ ಪ್ರಶ್ನೆಯಲ್ಲಿ ಕೇಂದ್ರ ಸರ್ಕಾರಕ್ಕೆ ಅಂಕಿ ಸಂಖ್ಯೆಗಳ ಲೆಕ್ಕದ ಗೆಲುವು ದಕ್ಕಿರಬಹುದು. ಆದರೆ ಕೆಲವರು ಹೇಳುತ್ತಿರುವಂತೆ ಎಡಪಕ್ಷಗಳು ಮೂಲೆಗುಂಪಾಗಿಲ್ಲ. ಇನ್ನಷ್ಟು ಹೆಚ್ಚು ಪ್ರಜಾಸತ್ತಾತ್ಮಕ ಶಕ್ತಿಗಳನ್ನು ಒಗ್ಗೂಡಿಸಿ ಹೋರಾಟಕ್ಕೆ ಸಜ್ಜಾಗಿದೆ.

ಮನಮೋಹನ್‌ಸಿಂಗ್ ಸರ್ಕಾರಕ್ಕೆ ಜುಲೈ 22ರಂದು ವಿಶ್ವಾಸಮತ ಗೆಲ್ಲುವುದು ಸಾಧ್ಯವಾಯಿತು. ಆದರೆ ಇದು ಒಂದು ಕಳಕಿತ ವಿಜಯ. ನವದೆಹಲಿ ಅಧಿಕಾರ ಕೇಂದ್ರದಲ್ಲಿ ಈ ಹಿಂದೆ ಎಂದೂ ಕಾಣದ ಮಟ್ಟದ ಹಣಬಲದ ಬಳಕೆಯಿಂದ ಈ ಕಳಂಕಿತ ವಿಜಯವನ್ನು ಗಳಿಸಿಕೊಳ್ಳಲಾಯಿತು. ಎಡಪಕ್ಷಗಳನ್ನು ಹೊರತುಪಡಿಸಿ ವಿರೋಧ ಪಕ್ಷಗಳ ಕನಿಷ್ಠ 16 ಸಂಸದರನ್ನು ಖರೀದಿಸಲಾಯಿತು ಅಥವಾ ಹೆದರಿಸಿ, ಬೆದರಿಸಿ ಅವರು ಸರ್ಕಾರದ ಪರವಾಗಿ ಮತ ಚಲಾಯಿಸುವಂತೆ ಅಥವಾ ಮತದಾನದಿಂದ ದೂರ ಉಳಿಯುವಂತೆ ಮಾಡಲಾಯಿತು.

ಕಾಂಗ್ರೆಸ್ ನಾಯಕತ್ವಕ್ಕೆ ಮತ್ತು ಪ್ರಧಾನಮಂತ್ರಿಗೆ ಇದಕ್ಕಿಂತ ನಾಚಿಕೆಗೇಡಿನದು ಇನ್ನೇನಾದರೂ ಇರಲು ಸಾಧ್ಯವೇ? ಆದರೆ ಬಹಳ ಆತಂಕದ ವಿಷಯವೆಂದರೆ ಈ ಅನೈತಿಕತೆ ಬಗೆಗೆ, ಕಳಂಕಿತ ನಡವಳಿಕೆಗಳ ಬಗೆಗೆ ಕಿಂಚಿತ್ತಾದರೂ ಪಾಪ ಪ್ರಜ್ಞೆ ಇದೆಯೇ? ಊಹುಂ. ಇಲ್ಲ. ಕಾಂಗ್ರೆಸ್ ಪಕ್ಷದ ಅಧಿಕಾರದ ಹಪಾಹಪಿತನ, ನೈತಿಕ ಅಧಃಪತನ ಆ ಮಟ್ಟವನ್ನು ಮುಟ್ಟಿದೆ.

ತಾವು ಹಣಕಾಸು ಸಚಿವರಾಗಿದ್ದಾಗ 1991 ರಿಂದ 1996ರವರೆಗೆ ಪ್ರಧಾನಿಯಾಗಿದ್ದ ಪಿ.ವಿ.ನರಸಿಂಹರಾವ್ ಅವರ ದಾಖಲೆಯನ್ನು ಮನಮೋಹನ್‌ಸಿಂಗ್ ಉತ್ತಮಪಡಿಸಿದ್ದಾರೆ! ಆಗಸ್ಟ್ 1993 ರಲ್ಲಿ ಸಿಪಿಐ(ಎಂ) ಪಕ್ಷ ಕಾಂಗ್ರೆಸ್ ವಿರುದ್ಧ ಅವಿಶ್ವಾಸ ಗೊತ್ತುವಳಿ ಮಂಡಿಸಿತ್ತು. ಆಗ ನರಸಿಂಹರಾವ್ ಸರ್ಕಾರ ಅಲ್ಪಮತದ್ದಾಗಿತ್ತು. ಅದು ಹೇಗೆ ಬಹುಮತ ಗಳಿಸಿತು ಎಂಬುದು ಎಲ್ಲರಿಗೂ ಗೊತ್ತಿರುವಂತದ್ದೇ. ಏಳು ಜನ ಸಂಸದರನ್ನು ಖರೀದಿಸಲಾಯಿತು. ನಂತರ ಸಿಬಿಐ ವಿಚಾರಣೆಯಲ್ಲಿ ಜಾರ್ಖಂಡ್ ಮುಕ್ತಿ ಮೋರ್ಚಾ(ಜೆಎಂಎಂ) ಲಂಚ ಪ್ರಕರಣ ಹೂಡಲಾಯಿತು. ನರಸಿಂಹರಾವ್ ಮತ್ತು ಬೂಟಾಸಿಂಗ್‌ರಿಗೆ ಮೂರು ವರ್ಷಗಳ ಜೈಲು ವಾಸದ ಶಿಕ್ಷೆಯನ್ನು ಸಹ ಕೋರ್ಟ್ ವಿಧಿಸಿತು. ನಂತರ ದೆಹಲಿಯ ಹೈಕೋರ್ಟ್‌ನ ಏಕಸದಸ್ಯ ನ್ಯಾಯಪೀಠ ಇವರನ್ನು ಖುಲಾಸೆಗೊಳಿಸಿತು ಎನ್ನುವುದು ಬೇರೆ ಸಮಾಚಾರ.

ವೈಫಲ್ಯ - ಕಳಂಕ

ಈ ಮತದಾನಕ್ಕೆ ಮುಂಚೆಯೇ ಎಡಪಕ್ಷಗಳು ಮನಮೋಹನ್‌ಸಿಂಗ್ ಸರ್ಕಾರವು ಅಮೇರಿಕಾದೊಂದಿಗಿನ ಅಣು ಒಪ್ಪಂದಕ್ಕೆ ಮುಂದಾಗದಂತೆ ತೀವ್ರ ಒತ್ತಡ ಹೇರಿದ್ದವು. ಇದಲ್ಲದೇ ಬೆಲೆ ಏರಿಕೆ ಮತ್ತಿತರ ಜ್ವಲಂತ ಸಮಸ್ಯೆಗಳನ್ನು ತಹಬದಿಗೆ ತರಲಾರದ ವೈಫಲ್ಯಕ್ಕಾಗಿ ಸರ್ಕಾರವನ್ನು ತೀವ್ರವಾಗಿ ತರಾಟೆಗೆ ತೆಗೆದುಕೊಂಡಿದ್ದವು. ಈಗ ಪಾರ್ಲಿಮೆಂಟರಿ ಪ್ರಜಾಪ್ರಭುತ್ವವನ್ನು ಬುಡಮೇಲು ಮಾಡುವ ಈ ಲಂಚ ಪ್ರಕರಣವೂ ಸೇರಿಕೊಂಡಿದೆ.

ಶಿಕ್ಷೆ ಕಾದಿದೆ

ಮಂತ್ರಿ ಪದವಿಯ ಆಮಿಷ, ಮತ ನೀಡಲು ಮನಸ್ಸಿಲ್ಲದ ಸಂಸದರ ಮೇಲೆ ತನಿಖಾ ಸಂಸ್ಥೆಗಳನ್ನು ಛೂ ಬಿಡುವ ಬೆದರಿಕೆ, ಹಾಗೂ ಕೋಟಿಗಟ್ಟಲೆ ಮೊತ್ತದ ಲಂಚಗಳಿಂದ ಈ ಸರ್ಕಾರವು ವಿಶ್ವಾಸಮತವನ್ನು ಗೆಲ್ಲುವುದಾದರೆ ಈ ಸರ್ಕಾರ ಎಷ್ಟು ದಿನ ಉಳಿದೀತು? ಇನ್ನು ಕೆಲವೇ ತಿಂಗಳುಗಳ ನಂತರ ಕಾಂಗ್ರೆಸ್ ನೇತೃತ್ವದ ಈ ಒಕ್ಕೂಟವೂ ಲೋಕಸಭಾ ಚುನಾವಣೆಗಾಗಿ ಜನರ ಬಳಿಗೆ ಹೋಗಲೇಬೇಕಾಗಿದೆ. ಇವರಿಗೆ ತಕ್ಕ ಶಿಕ್ಷೆ ಕಾದಿರುವುದು ಮಾತ್ರ ಖಾತರಿಯಾಗಿದೆ.



10 ಪಕ್ಷಗಳಿಂದ ಜ್ವಲಂತ ಪ್ರಶ್ನೆಗಳ ಮೇಲೆ ಪ್ರಚಾರಾಂದೋಲನದ ಘೋಷಣೆ

ಭಾರತ-ಅಮೇರಿಕಾ ಪರಮಾಣು ಒಪ್ಪಂದದ ವಿಷಯದಲ್ಲಿ ಸಮಾಜವಾದಿ ಪಕ್ಷವು ರಾಗ ಬದಲಿಸಿದ್ದು, ಸರ್ಕಾರವು ಎಡಪಕ್ಷಗಳಿಗೆ ಜನಪರ ನೀತಿಗಳನ್ನು ಜಾರಿಮಾಡುವ ಕುರಿತು ನೀಡಿದ್ದ ಭರವಸೆಗಳನ್ನು ಉಲ್ಲಂಘಿಸುವ ಹುಂಬ ಧೈರ್ಯವನ್ನು ತಂದಿದೆ. ವಿಶ್ವಾಸ ಮತಕ್ಕೆ ಮುಂಚೆಯೇ ಮುಂದೆ ಏನೆಲ್ಲಾ ಆಗಲಿವೆ ಎಂಬುದಕ್ಕೆ ಸೂಚನೆಗಳು ಸಿಗತೊಡಗಿದವು. ಸಮಾಜವಾದಿ ಪಕ್ಷದ ಅಮರ್‌ಸಿಂಗ್ ಪ್ರಧಾನಿ ಮನಮೋಹನ್‌ಸಿಂಗ್ ಅವರು ಪರಸ್ಪರ ಕಚ್ಚಾಟದಲ್ಲಿ ತೊಡಗಿರುವ ಇಬ್ಬರು ಅಂಬಾನಿ ಸಹೋದರರ ನಡುವೆ ಮಧ್ಯಸ್ಥಿಕೆ ವಹಿಸಬೇಕೆಂದು ಒತ್ತಾಯಿಸಿದರು. ಸರ್ಕಾರಕ್ಕೆ ಬೆಂಬಲ ನೀಡಿದವರು ತಮ್ಮ 'ಶುಲ್ಕ'ವನ್ನು ವಸೂಲಿ ಮಾಡಿಕೊಳ್ಳುತ್ತಾರೆ. ಮನಮೋಹನ್‌ಸಿಂಗ್ ಸರ್ಕಾರವು ತತ್ವ ಹೀನವಾದ, ವಿವೇಕಹೀನವಾದ ಚೌಕಾಸಿ ಮತ್ತು ಒತ್ತಡಗಳಿಗೆ ಆಹ್ವಾನ ನೀಡಿದೆ.

ಸಿಪಿಐ(ಎಂ) ಪಕ್ಷ ಮತ್ತು ಎಡಪಕ್ಷಗಳು ತೀಕ್ಷ್ಣ ಪ್ರಚಾರಾಂದೋಲನವನ್ನು ಆರಂಭಿಸಿವೆ. ಅವು ಅಮೇರಿಕಾದೊಂದಿಗಿನ ಅಣು ಒಪ್ಪಂದ ಅಪಾಯಗಳ ಕುರಿತು ಜನತೆಗೆ ವಿವರಿಸಲಿವೆ. ಇದು ಹೇಗೆ ದೇಶದ ಸಾರ್ವಭೌಮತೆ, ಸ್ವತಂತ್ರ ವಿದೇಶಾಂಗ ನೀತಿಗೆ ಮಾರಕವಾಗಿದೆ. ಅಣು ಒಪ್ಪಂದವು ಕನಿಷ್ಠ ಇಂಧನ ಭದ್ರತೆಯನ್ನು ನೀಡಲು ಹೇಗೆ ವಿಫಲವಾಗುತ್ತದೆ ಮತ್ತು ಹೇಗೆ ಇರಾನ್-ಪಾಕಿಸ್ತಾನ-ಭಾರತಗಳ ನಡುವಿನ ಅನಿಲ ಕೊಳವೆ ಯೋಜನೆಗೆ ಅಡ್ಡಿಯಾಗಿದೆ. ಇವೆಲ್ಲದರ ಜೊತೆಗೆ ಹೇಗೆ ಕೇಂದ್ರ ಯುಪಿಎ ಸರ್ಕಾರವು ಭಾರತವನ್ನು ಅಮೇರಿಕಾದ ಮಿಲಿಟರಿ ಮಿತ್ರನನ್ನಾಗಿ ಪರಿವರ್ತಿಸುತ್ತಿದೆ ಎಂಬೆಲ್ಲಾ ವಿಷಯಗಳನ್ನು ಎಡಪಕ್ಷಗಳು ಜನತೆಗೆ ವಿವರಿಸಲಿವೆ.

ಸರ್ಕಾರವು ಅವಶ್ಯಕ ವಸ್ತುಗಳ ಬೆಲೆ ಏರಿಕೆಯನ್ನು ನಿಯಂತ್ರಿಸುವಲ್ಲಿ ದಯನೀಯವಾಗಿ ಸೋತು ಹೋಗಿದೆ. ಇಷ್ಟು ಮಾತ್ರವಲ್ಲ ಅದು ಪಡಿತರ ವ್ಯವಸ್ಥೆಯನ್ನು ಹಾಳುಗೆಡವಿದೆ. ಹಾಗೂ ಬಡತನ ರೇಖೆಯ ಕೆಳಗಿನವರು, ಮೇಲಿನವರು ಎನ್ನುತ್ತಾ ಕಪಟ ವರ್ಗೀಕರಣ ಮಾಡುತ್ತಾ ಜನರಿಗೆ ಆಹಾರ ವಂಚಿಸುತ್ತಾ ನಡೆದಿದೆ. ಮನಮೋಹನಸಿಂಗ್ ಸರ್ಕಾರವು ವಾಷಿಂಗ್‌ಟನ್ ನಿರ್ದೇಶನದ ನೀತಿಗಳಿಗೆ ಹಾಗೂ ಐಎಂಎಫ್, ವಿಶ್ವ ಬ್ಯಾಂಕ್‌ನ ನಿರ್ದೇಶನಗಳಿಗೆ ಬದ್ಧವಾಗಿರುವುದರಿಂದ ಬೆಲೆ ಏರಿಕೆ ತಡೆಗೆ ಎಡಪಕ್ಷಗಳು ಕೊಟ್ಟ ಸಲಹೆಗಳನ್ನು ಪರಿಗಣಿಸಲೇ ಇಲ್ಲ. ಹೀಗಾಗಿ ಜನರ ಬೆನ್ನು ಮೂಳೆ ಮುರಿಯುವಂತಹ ಬೆಲೆ ಏರಿಕೆ ಅನುಭವಿಸುತ್ತಿದ್ದಾರೆ, ಮನಮೋಹನ್‌ಸಿಂಗ್ ಸರ್ಕಾರವು ಅಂತರ ರಾಷ್ಟ್ರೀಯ ಅಣುಶಕ್ತಿ ಆಯೋಗ(ಐಎಇಎ) ಮತ್ತು ಅಣು ಇಂಧನ ಪೂರೈಕೆದಾರರ

ಪುಟ 12 ಕ್ಕೆ

ಎಡಪಕ್ಷಗಳು ಮೂಲೆ ಗುಂಪಾದವೆ ?

ಕಾಂಗ್ರೆಸ್ ನಾಯಕತ್ವವು ತನ್ನ ಕಡೆಗೆ ಸಮಾಜವಾದಿ ಪಕ್ಷವನ್ನು ಸೆಳೆದುಕೊಳ್ಳುವ ಮೂಲಕ ಸಿಪಿಐ(ಎಂ) ಮತ್ತು ಎಡಪಕ್ಷಗಳನ್ನು ಮೂಲೆ ಗುಂಪು ಮಾಡಿದೆ ಎಂದು ಭಾವಿಸಿತು. ಈ ಮೂಲಕ ಅವರು ವಿಶ್ವಾಸಮತವನ್ನು ಗೆಲ್ಲಲು ಸಾಧ್ಯವಾದರೂ ರಾಜಕೀಯವಾಗಿ ಸಿಪಿಐ(ಎಂ) ಮತ್ತು ಎಡಪಕ್ಷಗಳು ಮೂಲೆ ಗುಂಪಾಗಿಲ್ಲ.

ಅಣು ಒಪ್ಪಂದದ ವಿರುದ್ಧ ಹಾಗೂ ಯುಪಿಎ ಸರ್ಕಾರದ ವಿರುದ್ಧ ಹಲವಾರು ಪಕ್ಷಗಳನ್ನು ಅಣಿನೆರೆಸುವ ಪ್ರಕ್ರಿಯೆಯಲ್ಲಿ ಸರ್ಕಾರಕ್ಕೆ ಬೆಂಬಲ ಹಿಂದೆ ಪಡೆದ ನಂತರ ಹೆಚ್ಚಿನ ಶಕ್ತಿಗಳು ಎಡಪಕ್ಷಗಳೊಂದಿಗೆ ಕೈ ಜೋಡಿಸಿವೆ.

ಬಹುಜನ ಸಮಾಜಪಕ್ಷ (ಬಿಎಸ್‌ಪಿ), ತೆಲುಗುದೇಶಂ ಒಳಗೊಂಡ ಯುಎನ್‌ಪಿಎ, ದೇವೇಗೌಡರ ನೇತೃತ್ವದ ಜನತಾದಳ(ಎಸ್) ಮತ್ತು ಅಜಿತ್‌ಸಿಂಗ್ ನೇತೃತ್ವದ ರಾಷ್ಟ್ರೀಯ ಲೋಕದಳ, ಮುಂತಾದ ಪಕ್ಷಗಳು ಕಾಂಗ್ರೆಸ್ ವಿರುದ್ಧ ಎಡ ಪಕ್ಷಗಳೊಂದಿಗೆ ಕೈ ಜೋಡಿಸಿವೆ.

ವಿಶ್ವಾಸಮತದ ನಂತರ ಸೇರಿದ ಈ ಪಕ್ಷಗಳು ತತ್‌ಕ್ಷಣದ ಪ್ರಶ್ನೆಗಳಾದ ಬೆಲೆ ಏರಿಕೆ, ಕೃಷಿ ಬಿಕ್ಕಟ್ಟು, ಅಣು ಒಪ್ಪಂದ, ಕೋಮುವಾದ, ಹಾಗೂ ತನಿಖಾ ಸಂಸ್ಥೆಗಳ ದುರುಪಯೋಗ ಮತ್ತು ಭ್ರಷ್ಟ ವಿಧಾನದಿಂದ ಬಹುಮತ ಗಳಿಸಿದ ಸರ್ಕಾರದ ಅನೈತಿಕತೆ.... ಈ ವಿಷಯಗಳ ಬಗ್ಗೆ ಜನರ ನಡುವೆ ಪ್ರಚಾರಾಂದೋಲನ ನಡೆಸಲು ನಿರ್ಧರಿಸಿವೆ.

ಒಂದು ಕಡೆ ಭ್ರಷ್ಟ ಮತ್ತು ಅನೈತಿಕ ವಿಧಾನದಲ್ಲಿ ಬಹುಮತಗಳಿಸಿದ ಮನಮೋಹನ್‌ಸಿಂಗ್ ಸರ್ಕಾರ ಜನರಿಂದ ದೂರವಾಗುತ್ತಾ ಹೋಗುತ್ತಿದ್ದರೆ, ಮತ್ತೊಂದೆಡೆ ದೇಶ ವಿರೋಧಿ, ವಿದೇಶಾಂಗ ನೀತಿ ಹಾಗೂ ಕಾಂಗ್ರೆಸ್ ಸರ್ಕಾರದ ಜನ ವಿರೋಧಿ ನೀತಿಗಳ ವಿರುದ್ಧ ಹೋರಾಟ ರೂಪಿಸುವ ನಿಟ್ಟಿನಲ್ಲಿ ಎಡಪಕ್ಷಗಳು ಪ್ರಜಾಸತ್ತಾತ್ಮಕ, ಜಾತ್ಯಾತೀತ ಶಕ್ತಿಗಳನ್ನು ಅಣಿನೆರೆಸುತ್ತಿವೆ.

ಕಾಂಗ್ರೆಸ್ ನೇತೃತ್ವದ ಸರ್ಕಾರವು ತಾನು ವಿಶ್ವಾಸ ಮತವನ್ನು ಗೆದ್ದುಬಿಟ್ಟಿರುವುದರಿಂದ ಈ ಸನ್ನಿವೇಶವನ್ನು ಪಿಂಚಣಿ ಬ್ಯಾಂಕಿಂಗ್ ತಿದ್ದುಪಡಿಮಸೂದೆ, ವಿದೇಶಿ ಶಿಕ್ಷಣ ಸಂಸ್ಥೆಗಳ ಮಸೂದೆ-ಮುಂತಾದ ಎಡಪಕ್ಷಗಳು ನಿರಂತರವಾಗಿ ವಿರೋಧಿಸುತ್ತಿರುವ ಮಸೂದೆಗಳಿಗೆ ಅಂಗೀಕಾರ ಪಡೆಯಲು ಬಳಸಬಹುದು ಎಂದು ಯೋಚಿಸುತ್ತಿರಬಹುದು. ಆದರೆ ಈ ಎಲ್ಲ ನವ ಉದಾರೀಕರಣ ನೀತಿಗಳ ವಿರುದ್ಧ ಎಡಪಕ್ಷಗಳು ಬೃಹತ್ ಹೋರಾಟಗಳನ್ನು ನಡೆಸಲಿವೆ ಎಂಬುದನ್ನು ಅವರು ಅರಿತಿರುವುದು ಒಳ್ಳೆಯದು. ಈ ಮಸೂದೆಗಳು ಪಾರ್ಲಿಮೆಂಟ್‌ನಲ್ಲಿ ಸೋಲುವಂತೆ ಮಾಡಲು ಎಡಪಕ್ಷಗಳು ತೀವ್ರವಾಗಿ ಶ್ರಮಿಸಲಿವೆ.

ಮನಮೋಹನ್‌ಸಿಂಗ್ ಸರ್ಕಾರದ ವಿರುದ್ಧದ ಹೋರಾಟದಲ್ಲಿ ಕೇಂದ್ರ ಕಾರ್ಮಿಕ ಸಂಘಟನೆಗಳು ಆಗಸ್ಟ್ 20 ರಂದು ನಡೆಸುತ್ತಿರುವ ಅಖಿಲ ಭಾರತ ಸಾರ್ವತ್ರಿಕ ಮುಷ್ಕರ ಈ ನಿಟ್ಟಿನಲ್ಲಿ ಒಂದು ಅತ್ಯಂತ ಮಹತ್ವದ ಹೆಜ್ಜೆ ಗುರುತಾಗಲಿದೆ. ನಾವು ಕಾಂಗ್ರೆಸ್ ನೇತೃತ್ವದ ಸರ್ಕಾರ ಹಾಗೂ ಬಿಜೆಪಿ ಮತ್ತಿತರ ಕೋಮುವಾದಿ ಶಕ್ತಿಗಳೊಂದಿಗೆ ಸೆಣಸಲು ಶಕ್ತವಾದ ಒಂದು ರಾಜಕೀಯ ಮೈತ್ರಿಗಾಗಿ ಪ್ರಯತ್ನಿಸಬೇಕಿದೆ. ○

ಸಾಮ್ರಾಜ್ಯಶಾಹಿ ವಿರೋಧಿ ಯೋಧ -ಸಿಪಿಐ(ಎಂ) ಹಿರಿಯ ನೇತಾರ

ಕಾಂ. ಸುರ್ಜಿತ್ ಅಮರ

ರಾಷ್ಟ್ರದ ಕಮ್ಯುನಿಸ್ಟ್ ಚಳುವಳಿಯ ಹಿರಿಯ ಚೇತನ, ರೈತ ನಾಯಕ, ಅಪ್ರತಿಮ ಹೋರಾಟಗಾರ, ಕ್ರಾಂತಿಕಾರಿ ನೇತಾರ ಕಾಂ.ಸುರ್ಜಿತ್ ಅವರಿಗೆ ಒಂದು ಗೌರವಪೂರ್ಣ ಶ್ರದ್ಧಾಂಜಲಿ

ಸಿಪಿಐ(ಎಂ)ನ ಹಿರಿಯ ನೇತಾರ ಕಾಮ್ರೇಡ್ ಹರ್ಕಿಶನ್ ಸಿಂಗ್ ಸುರ್ಜಿತ್ ಅಗಸ್ಟ್ 1, 2008ರಂದು ನಿಧನರಾಗಿದ್ದಾರೆ. ಬಹಳ ದಿನಗಳಿಂದ ಅಸ್ವಸ್ಥರಾಗಿದ್ದ ಅವರಿಗೆ 93 ವರ್ಷ ವಯಸ್ಸಾಗಿತ್ತು. ಅವರು ದೇಶದ ಕಮ್ಯುನಿಸ್ಟ್ ಆಂದೋಲನದ ಒಂದು ಉನ್ನತ ವ್ಯಕ್ತಿತ್ವ ಮತ್ತು ಒಬ್ಬ ಪ್ರಸಿದ್ಧ ರಾಷ್ಟ್ರೀಯ ರಾಜಕಾರಣಿ ಎಂದು ಅವರ ನಿಧನಕ್ಕೆ ಆಳವಾದ ದುಃಖ ವ್ಯಕ್ತಪಡಿಸುತ್ತಾ ಸಿಪಿಐ(ಎಂ) ಪೊಲಿಟ್‌ಬ್ಯೂರೋ ಶ್ರದ್ಧಾಂಜಲಿ ಅರ್ಪಿಸಿದೆ.

ಹರ್ಕಿಶನ್ ಸಿಂಗ್ ಸುರ್ಜಿತ್ ರವರ ಏಳೂವರೆ ದಶಕಗಳಷ್ಟು ದೀರ್ಘವಾದ ರಾಜಕೀಯ ಜೀವನ ಆರಂಭವಾದದ್ದು ಬ್ರಿಟಿಶ್ ವಸಾಹತುಶಾಹೀ ಆಳ್ವಿಕೆಯ ವಿರುದ್ಧ ಒಬ್ಬ ದೃಢ ಹೋರಾಟಗಾರನಾಗಿ. ಪಂಜಾಬಿನಲ್ಲಿ ರೈತ ಆಂದೋಲನವನ್ನು ಮತ್ತು ಕಮ್ಯುನಿಸ್ಟ್ ಪಕ್ಷವನ್ನು ಕಟ್ಟಿ ಬೆಳೆಸುವಲ್ಲಿ ಪ್ರಮುಖ ಪಾತ್ರ ವಹಿಸಿದ ಅವರು ಮುಂದೆ ಭಾರತ ಕಮ್ಯುನಿಸ್ಟ್ ಪಕ್ಷದ ಮತ್ತು ಅಖಿಲ ಭಾರತ ಕಿಸಾನ್ ಸಭಾದ ಒಬ್ಬ ರಾಷ್ಟ್ರೀಯ ಮುಖಂಡರಾಗಿ ಮೂಡಿ ಬಂದರು. ಅಂತಿಮವಾಗಿ ಅವರು ನಾಲ್ಕು ಘಟನಾಮಯ ದಶಕಗಳ ಕಾಲ ಸಿಪಿಐ(ಎಂ)ನಲ್ಲಿ ನೇತೃತ್ವದ ಪಾತ್ರ ವಹಿಸಿದರು.

ಹರ್ಕಿಶನ್ ಸಿಂಗ್ ಸುರ್ಜಿತ್‌ರವರ ನಿಧನದಿಂದ ಸಿಪಿಐ(ಎಂ) ಪಕ್ಷ ಹಾಗೂ ದೇಶ ಒಬ್ಬ ಅಪ್ರತಿಮ ಮುಖಂಡರನ್ನು ಕಳಕೊಂಡಿದೆ ಹಾಗೂ ದೇಶ ಎಡ ಮತ್ತು ಜಾತ್ಯಾತೀತ ಪರಂಪರೆಯ ಒಬ್ಬ ಅಧಿಕಾರಯುತ ಪ್ರತಿನಿಧಿಯನ್ನು ಕಳಕೊಂಡಿದೆ. ಈ ಅಪ್ರತಿಮ ಕಮ್ಯುನಿಸ್ಟ್ ಮತ್ತು ಪ್ರೀತಿಯ ನೇತಾರನಿಗೆ ಗೌರವಪೂರ್ಣ ಶ್ರದ್ಧಾಂಜಲಿ.





ಭಗತ್‌ಸಿಂಗ್ ಸ್ಫೂರ್ತಿ

ಭಗತ್‌ಸಿಂಗ್ ಹುತಾತ್ಮರಾದಾಗ ಅದರಿಂದ ಪ್ರೇರಣೆ ಪಡೆದು ಅವರ ಕ್ರಾಂತಿಕಾರಿ ಜೀವನ ಆರಂಭವಾಯಿತು. ಕೇವಲ 16 ವರ್ಷದವರಿದ್ದಾಗ ಅವರು ಹೋಶಿಯಾರ್‌ಪುರದ ಜಿಲ್ಲಾ ಕೋರ್ಟಿನ ಮೇಲೆ ತ್ರಿವರ್ಣ ಬಾವುಟ ಹಾರಿಸಿದ ಸಾಹಸಿ. ಆತನನ್ನು ಬಂಧಿಸಿ, ಇನ್ನೂ ಅಪ್ರಾಪ್ತ ವಯಸ್ಸಿನ ಹುಡುಗ ಎಂದು ಬಾಲಾಪರಾಧಿಗಳನ್ನು ಕಳಿಸುವ ಸುಧಾರಣಾ ಶಾಲೆಗೆ ಕಳಿಸಲಾಯಿತು. ಬಿಡುಗಡೆಗೊಂಡು ಬಂದಾಗ ಅವರು ಪಂಜಾಬಿನ ಆರಂಭದ ಕಮ್ಯುನಿಸ್ಟ್ ಪಥಪ್ರದರ್ಶಕರ ಸಂಪರ್ಕಕ್ಕೆ ಬಂದರು. 1934 ರಲ್ಲಿ ಅವರು ಕಮ್ಯುನಿಸ್ಟ್ ಪಕ್ಷ ಸೇರಿದರು, 1935ರಲ್ಲಿ ಕಾಂಗ್ರೆಸ್ ಸಮಾಜವಾದಿ ಪಕ್ಷದ ಸದಸ್ಯರಾದರು. 1938ರಲ್ಲಿ ಅವರು ಪಂಜಾಬ್ ರಾಜ್ಯ ಕಿಸಾನ್ ಸಭಾದ ಕಾರ್ಯದರ್ಶಿಯಾಗಿ ಚುನಾಯಿತರಾದರು. ಅದೇ ವರ್ಷ ಅವರನ್ನು ಪಂಜಾಬಿನಿಂದ ಗಡೀಪಾರು ಮಾಡಲಾಯಿತು. ಅವರು ಉತ್ತರಪ್ರದೇಶದ ಸಹರಾಣಪುರಕ್ಕೆ ಹೋಗಿ ಅಲ್ಲಿ 'ಚಿಂಗಾರಿ'(ಕಿಡಿ) ಎಂಬ ಮಾಸಿಕ ಪತ್ರಿಕೆಯನ್ನು ಆರಂಭಿಸಿದರು.

'ಸಂಯುಕ್ತ ರಂಗ'ದ ರಚನೆಯಲ್ಲಿ ನಿರ್ಣಾಯಕ ಪಾತ್ರವಹಿಸಿದ ಸುರ್ಜಿತ್ ಇತರ ನಾಯಕರೊಂದಿಗೆ



ಎರಡನೇ ಮಹಾಯುದ್ಧ ಸಿಡಿದಾಗ ಅವರು ಭೂಗತರಾದರು. 1940ರಲ್ಲಿ ಅವರ ಬಂಧನವಾಯಿತು. ಅವರನ್ನು ಕುಖ್ಯಾತ ಲಾಹೋರ್ ಕೆಂಪು ಕೋಟೆ ಜೈಲಿನಲ್ಲಿ ಇಡಲಾಯಿತು. ಅಲ್ಲಿ ಮೂರು ತಿಂಗಳ ಕಾಲ ಒಂಟಿ ಬಂಧನದ ಭೀಕರ ಪರಿಸ್ಥಿತಿಗಳನ್ನು ಅವರು ಎದುರಿಸಬೇಕಾಯಿತು. ನಂತರ ಅವರನ್ನು ದೇವಲಿ ಸ್ಥಾನಬದ್ಧತಾ ಕ್ಯಾಂಪಿಗೆ ಸ್ಥಳಾಂತರಿಸ ಲಾಯಿತು. ಅಲ್ಲಿ ಅವರು 1944ರ ವರೆಗೆ ಇದ್ದರು. ದೇಶ ವಿಭಜನೆಯ ಕಾಲದಲ್ಲಿ ಹಿಂಸಾಚಾರ ಪೀಡಿತ ಪಂಜಾಬಿನಲ್ಲಿ ಅವರು ಕೋಮು ಸೌಹಾರ್ದಕ್ಕಾಗಿ ದಣಿವಿಲ್ಲದೆ ದುಡಿದರು.

ಇತರ ಎಲ್ಲಾ ಪಥಪ್ರದರ್ಶಕ ಕಮ್ಯುನಿಸ್ಟ್ ಮುಖಂಡರಂತೆ ಸುರ್ಜಿತ್ ಕೂಡಾ ತ್ಯಾಗ ಮತ್ತು ಕಷ್ಟಸಹನೆಯ ಅಪಾರ ಸಾಮರ್ಥ್ಯವನ್ನು ಪ್ರದರ್ಶಿಸಿದರು. ಅವರು ಹತ್ತು ವರ್ಷಗಳ ಜೈಲುಗಳಲ್ಲಿ ಕಳೆದರು. ಅದರಲ್ಲಿ ಎಂಟು ವರ್ಷ ಸ್ವಾತಂತ್ರ್ಯದ ಮೊದಲು. ಎಂಟು ವರ್ಷಗಳನ್ನು ಅವರು ಭೂಗತರಾಗಿಯೂ ಕಳೆಯಬೇಕಾಯಿತು.

ಶ್ರಮಜೀವಿಗಳ ಮಾರ್ಗದರ್ಶಿ

ಸುರ್ಜಿತ್ ಜನವರಿ 1954ರಲ್ಲಿ ನಡೆದ ಭಾರತ ಕಮ್ಯುನಿಸ್ಟ್ ಪಕ್ಷದ ಮೂರನೇ ಮಹಾಧಿವೇಶನದಲ್ಲಿ ಕೇಂದ್ರ ಸಮಿತಿ ಮತ್ತು ಪೊಲಿಟ್‌ಬ್ಯೂರೋಗೆ ಆರಿಸಿ ಬಂದರು. 1964 ರಲ್ಲಿ ಕಮ್ಯುನಿಸ್ಟ್ ಆಂದೋಲನದಲ್ಲಿ ವಿಭಜನೆ ಬರುವ ವರೆಗೂ ಅವರು ಸಿಪಿಐ ಮುಖಂಡತ್ವದಲ್ಲಿ ಮುಂದುವರೆದರು. ಪರಿಷ್ಕರಣವಾದದ ವಿರುದ್ಧ ಹೋರಾಡಿದ್ದ ಮುಖಂಡರಲ್ಲಿ ಒಬ್ಬರಾಗಿದ್ದ ಸುರ್ಜಿತ್ ಮುಂದೆ ಸಿಪಿಐ(ಎಂ) ರಚಿಸಿದ ಪ್ರಮುಖರಲ್ಲಿ ಒಬ್ಬರಾದರು. ರೈತ ಆಂದೋಲನವನ್ನು ಬೆಳೆಸುವಲ್ಲಿ ಮತ್ತು ಪಕ್ಷವನ್ನು ಕಟ್ಟುವಲ್ಲಿ ಅವರ ಆಳವಾದ ಅನುಭವದಿಂದಾಗಿ ಕಮ್ಯುನಿಸ್ಟ್ ಆಂದೋಲನದಲ್ಲಿ ಎಡ ಮಾರ್ಗಚ್ಯುತಿ ಬಂದಾಗಲೆಲ್ಲಾ ಅವರು ಅಂತಹ ನಿಲುವುಗಳಿಂದ ದೂರವುಳಿದು ಸರಿಯಾದ ನಿಲುವಿಗಾಗಿ ಶ್ರಮಿಸಿದರು.

ರೈತ ಆಂದೋಲನದೊಂದಿಗೆ ಅವರದ್ದು ಆಜೀವನ ಪರ್ಯಂತ ಒಡನಾಟ. 1959 ರಲ್ಲಿ ಅವರು ಪಂಜಾಬಿನ ರೈತರ 'ಅಭಿವೃದ್ಧಿ ಶುಲ್ಕ'(ಬೆಟರ್‌ಮೆಂಟ್ ಲೆವಿ)-ವಿರೋಧಿ ಹೋರಾಟಕ್ಕೆ ನೇತೃತ್ವ ನೀಡಿದರು. ದೀರ್ಘಕಾಲ ಅವರು ಅಖಿಲ ಭಾರತ ಕಿಸಾನ್ ಸಭಾದ ಅಧ್ಯಕ್ಷರಾಗಿ ಮತ್ತು ಪ್ರಧಾನ ಕಾರ್ಯದರ್ಶಿಯಾಗಿ ದುಡಿದರು.

ಏಳನೇ ಮಹಾಧಿವೇಶನದಲ್ಲಿ ಸುರ್ಜಿತ್ ಸಿಪಿಐ(ಎಂ)ನ ಕೇಂದ್ರ ಸಮಿತಿ ಮತ್ತು ಪೊಲಿಟ್‌ಬ್ಯೂರೋಗೆ ಚುನಾಯಿತರಾದರು. ಇತ್ತೀಚೆಗೆ ನಡೆದ ಪಕ್ಷದ ಹತ್ತೊಂಭತ್ತನೇ ಮಹಾದಿವೇಶನದ ವರೆಗೂ ಅವರು ಆ ಸ್ಥಾನಗಳಲ್ಲಿ ಮುಂದುವರೆದರು. ಈ ನಾಲ್ಕು ದಶಕಗಳಲ್ಲಿ ಪಕ್ಷದ ಕಾರ್ಯಕ್ರಮಾತ್ಮಕ ನೀತಿಗಳನ್ನು ರೂಪಿಸುವಲ್ಲಿ ಮತ್ತು ಕಾರ್ಯತಂತ್ರಗಳನ್ನು ರೂಪಿಸುವಲ್ಲಿ ಒಂದು ಮುಖ್ಯ ಪಾತ್ರ ವಹಿಸಿದರು. ಕಾರ್ಯತಂತ್ರಗಳನ್ನು ರೂಪಿಸುವಲ್ಲಿ ಅವರದ್ದು ಎತ್ತಿದ ಕೈ. ಪಕ್ಷದ ರಾಜಕೀಯ ಲೈನನ್ನು ಅವರು ಅತ್ಯಂತ ನಿಪುಣತೆಯಿಂದ, ನಾವೀನ್ಯತೆಯೊಂದಿಗೆ ಆಚರಣೆಗೆ ತಂದು ಜಾರಿಗೊಳಿಸ ಬಲ್ಲವರಾಗಿದ್ದರು.

ರಾಷ್ಟ್ರೀಯ ಐಕ್ಯತೆಯ ರಕ್ಷಣೆಯಲ್ಲಿ

ಕೋಮುವಾದದ ವಿರುದ್ಧ ಅವರದ್ದು ಆಜೀವನ ಪರ್ಯಂತ ಹೋರಾಟ. ಭಾರತೀಯ ಪ್ರಭುತ್ವದ ಜಾತ್ಯಾತೀತ ನೀತಿಗೆ ಕೋಮುವಾದೀ ಶಕ್ತಿಗಳ ಬೆಳವಣಿಗೆಯಿಂದ ಬಂದಿರುವ ಬೆದರಿಕೆಯನ್ನು ಮೊದಲು ಗುರುತಿಸಿದ ಮುಖಂಡರಲ್ಲಿ ಅವರೊಬ್ಬರು. ಅವರು 1989 ರಲ್ಲಿ, 1996 ರಲ್ಲಿ ಮತ್ತು 2004 ರಲ್ಲಿ ಕೋಮುವಾದಿಗಳನ್ನು ಹೊರಗಿಟ್ಟ ಸರ್ಕಾರ ಹಾಗೂ ರಾಜಕೀಯ ರಚನೆಗಳನ್ನು ನಿರ್ಮಿಸುವಲ್ಲಿ ಮತ್ತು ಸರಕಾರಗಳ ರಚನೆಯಲ್ಲಿ ಅವರು ನಿರ್ಣಾಯಕ ಪಾತ್ರ ವಹಿಸಿದರು.

ರಾಷ್ಟ್ರೀಯ ಐಕ್ಯತೆಯ ರಕ್ಷಣೆಯಲ್ಲಿ ಮತ್ತು ವಿಭಜನಕಾರೀ ಶಕ್ತಿಗಳಿಂದ ಬೆದರಿಕೆಗಳನ್ನು ಎದುರಿಸುವ ನೀತಿಗಳನ್ನು ರೂಪಿಸುವಲ್ಲಿ ಅವರದ್ದು ಒಂದು ಅಸಾಧಾರಣವಾದ ಪಾತ್ರ. ಪಂಜಾಬಿನಲ್ಲಿ ಖಾಲಿಸ್ತಾನೀ ಭಯೋತ್ಪಾದಕತೆಯ ವಿರುದ್ಧ ಹೋರಾಡುವಲ್ಲಿ ಅವರ ದೃಢ ನಿಲುವು ಮತ್ತು ಮುಖಂಡತ್ವ ಹಾಗೂ ಉಗ್ರಗಾಮಿತ್ವದ ವಿರುದ್ಧ ಹೋರಾಡುತ್ತಾ 200 ಕ್ಕೂ ಹೆಚ್ಚು ಕಮ್ಯುನಿಸ್ಟರು



ದೀರ್ಘಕಾಲದ ಒಡನಾಡಿ ಕಾಂ. ಜ್ಯೋತಿಬಸುರವರೊಂದಿಗೆ

ಪುಟ 11 ಕ್ಕೆ

ಜನಶಕ್ತಿ ಕನ್ನಡ ವಾರಪತ್ರಿಕೆ

ಹರ್ಕಿಷನ್ ಸಿಂಗ್ ಸುರ್ಜಿತ್

ಕ್ರಾಂತಿಕಾರಿ ಚಟುವಟಿಕೆಗಳ ಬಾಲ್ಯ

ಬೆಳೆಯ ಸಿರಿ ಮೊಳಕೆಯಲ್ಲೇ ಎಂಬಂತೆ ಸುರ್ಜಿತ್‌ರದ್ದು ಬಾಲ್ಯದಿಂದಲೇ ಕ್ರಾಂತಿಕಾರಿ ಹೋರಾಟದ ದಾರಿ. ಅದಕ್ಕೆ ಶಹೀದ್ ಭಗತ್‌ಸಿಂಗ್ ಸ್ಫೂರ್ತಿ

ಹರ್‌ಕಿಶನ್ ಸಿಂಗ್ ಸುರ್ಜಿತ್‌ರವರು ಜನಿಸಿದ್ದು 1916 ಮಾರ್ಚ್ 23ರಂದು ಬಾಲ್ಯದಿಂದಲೇ ಮೋರ್ಚಾ, ಜಾಥಾಗಳ ಮಧ್ಯೆ ನಂತನಂತೆ ಬಾನೆತ್ತರಕ್ಕೆ ಬೆಳೆದು ನಿಂತರು. ಸುರ್ಜಿತ್ ಅವರ ಅಜ್ಜ ಶ್ರೀಮಂತ ರೈತರಾಗಿದ್ದು ಹಲವು ವರ್ಷ ಆಸ್ಟ್ರೇಲಿಯಾದಲ್ಲಿ ಜೀವನೋಪಾಯಕ್ಕಾಗಿ ದುಡಿಮೆ ಮಾಡಿ ಭಾರತಕ್ಕೆ ಹಿಂದಿರುಗಿದ್ದರು. ಅಜ್ಜನಿಗೆ ಒಬ್ಬನೇ ಮಗನಾದ ಸುರ್ಜಿತ್‌ರ ತಂದೆ ಸೇನೆಯಲ್ಲಿ ಕೆಲಸ ಮಾಡುತ್ತಿದ್ದು ಪ್ರಥಮ ಮಹಾಯುದ್ಧ ಮುಗಿದ ನಂತರ ರಾಷ್ಟ್ರೀಯ ಚಳುವಳಿಗೆ ಧುಮುಕಿದರು. ಸುರ್ಜಿತ್ ತಂದೆ ಅಕಾಲಿ ಪಕ್ಷವನ್ನು ಸೇರಿದ್ದನ್ನು ವಿರೋಧಿಸಿದ ಅವರ ಅಜ್ಜ, ಸುರ್ಜಿತ್ ತಂದೆಯನ್ನು ಮನೆಯಿಂದ ಹೊರಹಾಕಿದರು. ಸ್ನೇಹಿತರು ಮತ್ತು ಸಂಬಂಧಿಕರ ಒತ್ತಡದಿಂದಷ್ಟೇ ಎರಡು ಎಕರೆ ಭೂಮಿಯನ್ನು ತಂದೆಗೆ ನೀಡಲು ಒಪ್ಪಿದರು. ಅವರ ಆರ್ಥಿಕ ಸ್ಥಿತಿ ತೀರಾ ದುಸ್ತರಗೊಂಡು ತಾಯಿ ಕಡೆಯ ಸಂಬಂಧಿಕರ ನೆರವಿಂದ ಕುಂಟುತ್ತಾ ಸಾಗಿತ್ತು. ಅಕಾಲಿ ಪಕ್ಷದಲ್ಲಿ ಜಲಂಧರ್ ಜಿಲ್ಲೆಯ ನಾಯಕನಾಗಿ ಅವರ ತಂದೆ ಹೊರಹೊಮ್ಮಿದರು. ಅಂದಿನ ದಿನಗಳಲ್ಲಿ ಬ್ರಿಟೀಷರ ತೀವ್ರ ದೌರ್ಜನ್ಯವನ್ನೆದುರಿಸಿ 500 ಅಕಾಲಿ ಸೇವಾಕರ್ತರ ತಂಡವು [illegible] ಬಂಧನಕ್ಕೊಳಗಾಗುತ್ತಿತ್ತು. ಸುರ್ಜಿತ್‌ರ ತಾಯಿ ಅನಕ್ಷರರಾಗಿದ್ದು [illegible] ಕುಟುಂಬದವರಾಗಿದ್ದೂ ಅವರು ಅಕಾಲಿ ಪಕ್ಷದ ಸ್ವಯಂ ಸೇವಕರಾಗಿ ಸೇರಲು ಅದೇನೂ ಅಡ್ಡಿಬರಲಿಲ್ಲ.

ಯುಪಿಎ ಸರ್ಕಾರಕ್ಕೊಂದು ಕನಿಷ್ಟ ಕಾರ್ಯಕ್ರಮ



ಸುರ್ಜಿತರ ತಂದೆ, 8-10 ವರ್ಷವಿದ್ದಾಗಲೇ ಹಳ್ಳಿಯಿಂದ ಹಳ್ಳಿಗೆ ತೆರಳುತ್ತಿದ್ದ ಜಾಥಾಗಳಲ್ಲಿ ಆಹಾರದ ಏರ್ಪಾಡು ಮಾಡಲು ಸುರ್ಜಿತ್‌ರನ್ನು ಅವರ ತಾಯಿ ಜೊತೆಯಲ್ಲಿ ಕೊಂಡೊಯ್ಯುತ್ತಿದ್ದರು.

ಚಳುವಳಿ ಮತ್ತು ಹೋರಾಟಗಳಲ್ಲಿ ಮುಂಚೂಣಿಯಾಗಿ ಭಾಗವಹಿಸುತ್ತಿದ್ದ ಇವರ ತಂದೆ ತಾಯಿಯರಿಂದ ಹುಟ್ಟು ಹೋರಾಟದ ಕಿಡಿ ಇವರಲ್ಲೂ ಅಡಕವಾಗಿತ್ತೆಂದೇ ತೋರುತ್ತದೆ. 1924ರಲ್ಲಿ ಒಮ್ಮೆ ಪೊಲೀಸರ ತಂಡವೊಂದು ಸುರ್ಜಿತ್‌ರ ತಂದೆಯನ್ನು ಬಂಧಿಸಿ ಕ್ರಿಮಿನಲ್ ಕಾಯಿದೆಯಡಿ ಕೋರ್ಟಿನಲ್ಲಿ ದಾವಾ ಹೂಡಿ ಎರಡು ವರ್ಷಗಳ ಕಠಿಣ ಸಜೆ ವಿಧಿಸಿತು. ಅಂತಹ ಕಠಿಣ ಸಂದರ್ಭದಲ್ಲಿ ಅವರ ತಾಯಿ ಪ್ರದರ್ಶಿಸಿದ ಧೈರ್ಯ ಮತ್ತು ಗ್ರಾಮೀಣ ಜನತೆಯ ಪ್ರೋತ್ಸಾಹ ಅವರ ತಂದೆಯಲ್ಲಿ ಹೊಸ ಚೈತನ್ಯ ಮತ್ತು ಏಕಾಗ್ರತೆಯನ್ನು ಸೃಷ್ಟಿಸಿತು.

ಸುರ್ಜಿತ್ ಹುಟ್ಟು ಹೋರಾಟಗಾರರಾಗಿ ರೂಪುಗೊಳ್ಳಲು ಅವರ ಸುತ್ತಲಿನ ಪರಿಸರ ಹೋರಾಟ ಮತ್ತು ಚಳುವಳಿಗಳ ಗೂಡಾಗಿದ್ದದ್ದು ಮುಖ್ಯ ಕಾರಣ. ಅವರ ಹಳ್ಳಿಯಿಂದ ಮೂರು ಮೈಲಿ ದೂರದಲ್ಲಿರುವ ರೂರ್ಕಾ ಕಲಾನ್ ಎಂಬ ಗ್ರಾಮವು ತಾನು ಸ್ವತಂತ್ರವೆಂದು ಘೋಷಿಸಿಕೊಂಡಿತ್ತು. ಬಂಚಿತ್‌ಸಿಂಗ್ ಎಂಬ ಆ ಗ್ರಾಮ ಚುನಾಯಿಸಿ ಆರಿಸಿದ ಪಂಚಾಯತ್‌ನ ಮುಖ್ಯಸ್ಥನು ಆ ಗ್ರಾಮಕ್ಕೆ ಯಾವುದೇ ಪೊಲೀಸ್ ತಂಡ ಅಥವಾ ಸಶಸ್ತ್ರ ಸೇನೆಯು ಪ್ರವೇಶಿಸುವುದನ್ನು ತಡೆದಿದ್ದನು. ಈ



ಮಾಜಿ ಪ್ರಧಾನಿ ವಿ.ಪಿ.ಸಿಂಗ್ ರೊಂದಿಗೆ ಸುರ್ಜಿತ್

ಘಟನೆಯು ಆ ಭಾಗದ ಪ್ರದೇಶದಲ್ಲಿ ಚಳುವಳಿಯ ಕಾವನ್ನು ಏರಿಸಿದ್ದು, ಬಂಚಿತ್ ಸಿಂಗ್‌ರನ್ನು ಬ್ರಿಟೀಷರು ಬಂಧಿಸಿದ ಕೂಡಲೇ ಅವರನ್ನು ರೂರ್ಕಾ ರಾಜ ಎಂದು ಕರೆಯಲಾಯಿತು. ಬಂಚಿತ್ ಸಿಂಗ್‌ರ ಬಂಧನವನ್ನು ವಿರೋಧಿಸಿ ಮಾಸ್ಟರ್ ಮೋಟಾಸಿಂಗ್ ಎಂಬುವವರು ದೊಡ್ಡ ಸಾರ್ವಜನಿಕ ಸಭೆಯನ್ನು ಏರ್ಪಡಿಸಿದ್ದರು. ಸಣ್ಣ ವಯಸ್ಸಿನಲ್ಲಿ ತಾಯಿಯೊಡನೆ

ಪುಟ 11ಕ್ಕೆ

ಲಂಡನ್ ತೋಡೇ ಸಿಂಗ್ ಸುರ್ಜಿತ್

ಮಾರ್ಚ್ 23, 1932 ಪಂಜಾಬಿನ ಹೋಶಿಯಾರ್‌ಪುರದ ಕಾಂಗ್ರೆಸ್ ಕಛೇರಿಯಲ್ಲಿ ಒಬ್ಬ 1[illegible] ವರ್ಷದ ಸಿಖ್ ಬಾಲಕ ಕೇಳುತ್ತಿದ್ದ-"ಇವತ್ತು ಇಲ್ಲಿ ಜಿಲ್ಲಾ ಕೋರ್ಟಿನಲ್ಲಿ ಯೂನಿಯನ್ ಜಾಕ್ ಇಳಿಸಿ ತ್ರಿವರ್ಣ ಧ್ವಜ ಹಾರಿಸುವ ಕಾರ್ಯಕ್ರಮವಿತ್ತಲ್ಲಾ ಅದು ನಡೆಯುವುದಿಲ್ಲವೇ?" ಕಛೇರಿಯ ಕಾರ್ಯದರ್ಶಿ ತೀಕ್ಷ್ಣವಾಗಿ ಹೇಳಿದ- 'ನೀನು ಕಲೆಕ್ಟರ್ ಪ್ರಕಟಣೆಯನ್ನು ಕೇಳಿಲ್ಲವೇ' ಆ ಬಾಲಕನಿಗೆ ಅದು ತಿಳಿದಿತ್ತು.

ಹೋಶಿಯಾರ್‌ಪುರಧ ಜಿಲ್ಲಾ ಕೋರ್ಟಿನಲ್ಲಿ ಹಾರಾಡುತ್ತಿದ್ದ ಬ್ರಿಟನ್ನಿನ ಬಾವುಟ ಯೂನಿಯನ್ ಜಾಕನ್ನು ಇಳಿಸಿ ಸ್ವಾತಂತ್ರ್ಯ ಆಂದೋಲನದ ತ್ರಿವರ್ಣ ಧ್ವಜವನ್ನು ಹಾರಿಸುವ ಮೂಲಕ ಭಗತ್‌ಸಿಂಗ್‌ರು ಹುತಾತ್ಮರಾದ ಮೊದಲ ವಾರ್ಷಿಕವನ್ನು ಆಚರಿಸಲು ನಿರ್ಧರಿಸಲಾಗಿತ್ತು. ಭಗತ್‌ಸಿಂಗ್ ಸ್ಥಾಪಿಸಿದ 'ನೌಜವಾನ್ ಭಾರತ್ ಸಭಾ'ದ ಸದಸ್ಯನಾಗಿದ್ದ ಈ ಬಾಲಕ 25 ಕಿ.ಮೀ.ದೂರದ ಜಾಲಂಧರ್‌ನಲ್ಲಿ ಮ್ಯಾಟ್ರಿಕ್ ಪರೀಕ್ಷೆ ಮುಗಿಸಿ(ವಿಜ್ಞಾನದ ಪ್ರಾಯೋಗಿಕ ಪರೀಕ್ಷೆ ಬಾಕಿ ಉಳಿದಿತ್ತು) ಈ ಕಾರ್ಯಕ್ರಮದಲ್ಲಿ ಭಾಗವಹಿಸಲೆಂದೇ ಹೋಶಿಯಾರ್‌ಪುರಕ್ಕೆ ಬಂದಿದ್ದ. ಅಂದು ಅಲ್ಲಿಗೆ ಬ್ರಿಟಿಷ್ ಗವರ್ನರ್ ಭೇಟಿ ಮಾಡುವ ಕಾರ್ಯಕ್ರಮವಿದ್ದು, ಆ ದಿನ ಕೋರ್ಟಿನ ಕಟ್ಟಡದಲ್ಲಿ ತ್ರಿವರ್ಣ ಧ್ವಜ, ಹಾರಿಸಲು ಪ್ರಯತ್ನಿಸುವವರನ್ನು ಗುಂಡಿಟ್ಟು ಕೊಲ್ಲುವುದಾಗಿ ಕಲೆಕ್ಟರ್ ಪ್ರಕಟಣೆ ಹೊರಡಿಸಿದ್ದ. ಜಿಲ್ಲಾ ಕೋರ್ಟ್ ಸುತ್ತ ಸೇನೆಯನ್ನು ನಿಲ್ಲಿಸಿದ್ದ. ಈ ಪ್ರಕಟಣೆಯನ್ನು ಕೇಳಿ ಕಾಂಗ್ರೆಸ್ ಸಮಿತಿ ತನ್ನ ಕಾರ್ಯಕ್ರಮವನ್ನು ಕೈಬಿಟ್ಟಿತು. ಪ್ರಕಟಣೆ ಬಗ್ಗೆ ತಿಳಿಸಿದ್ದರೂ ಇದು ತಿಳಿಯದಿದ್ದ ಬಾಲಕ ಕಛೇರಿ ಕಾರ್ಯದರ್ಶಿಗೆ ಮರು ಪ್ರಶ್ನೆ ಹಾಕಿದ -"ಗುಂಡಿಟ್ಟು ಕೊಲ್ಲುವ ಕಲೆಕ್ಟರ್‌ನ ಬೆದರಿಕೆ ಮಾತ್ರದಿಂದಲೇ ನೀವು ಕೈ ಬಿಟ್ಟಿರಾ? ಇದು ದೇಶಕ್ಕೆ ಅವಮಾನ" ಎಂದು ಖಾರವಾಗಿ, ಸಿಟ್ಟಿಗೆದ್ದ ಕಛೇರಿ ಕಾರ್ಯದರ್ಶಿ "ಅಷ್ಟು ಧೈರ್ಯವಿದ್ದರೆ ನೀನೇ ಆ ಕೆಲಸ ಮಾಡು" ಎಂದ.


ಬಾವುಟ ಹಾರಿಸಲು ನಿಗದಿ ಮಾಡಿದ್ದ ಸಮಯ ಮೀರಿ ಹೋಗಿತ್ತು. ಆದರೂ ಆ ಬಾಲಕ ಒಂದು ಸಣ್ಣ ಕೋಲಿಗೆ ಸಿಗಿಸಿದ ತ್ರಿವರ್ಣ ಧ್ವಜವನ್ನು ಹಿಡಿದು ಹೊರಟೇ ಬಿಟ್ಟ, ಆಗ ಸಾಮ್ರಾಜ್ಯಶಾಹಿ ಆಳ್ವಿಕೆಯ ಪ್ರತೀಕವಾಗಿದ್ದ ಜಿಲ್ಲಾ ಕೋರ್ಟಿನ ಕಟ್ಟಡದತ್ತ. ನಿಗದಿತ ಸಮಯ ಆಗಿ ಹೋದದ್ದರಿಂದ ಕಾವಲು ಸೈನಿಕರು ಸ್ವಲ್ಪ ನಿರ್ಲಕ್ಷ್ಯದಿಂದಿದ್ದರು. ಬಾಲಕ ಮೇಲೆ ಹತ್ತಿ ಯೂನಿಯನ್ ಜಾಕ್ ಇಳಿಸಿ 'ತ್ರಿವರ್ಣ ಧ್ವಜ'ವನ್ನು ಹಾರಿಸಿಯೇ ಬಿಟ್ಟ. ಎರಡು ಗುಂಡುಗಳು ಹಾರಿದವು. ಎರಡೂ ತಾಕಲಿಲ್ಲ. ಸದ್ದು ಕೇಳಿ ಡೆಪ್ಯೂಟಿ ಕಮೀಷನರ್ ಹೊರಬಂದ. ಆತ ಭಾರತೀಯನಾಗಿದ್ದ ಮಹಾರಾಷ್ಟ್ರದ ಬಾಕ್ಲೆ ಎಂಬಾತ. ಆಗ ಡಿ.ಸಿ.ಗಳಲ್ಲಿ ಭಾರತೀಯರು ಎಲ್ಲೋ ಕೆಲವರಿದ್ದರು. ಸಣ್ಣ ಬಾಲಕನನ್ನು ನೋಡಿದ ಆತ ಗುಂಡು ಹಾರಿಸುವುದನ್ನು ನಿಲ್ಲಿಸಲು ಹೇಳಿದ. ಬಾಲಕ ಅಲ್ಲಿಂದಲೇ ಬ್ರಿಟಿಷರನ್ನು ಸಿಕ್ಕಾಪಟ್ಟೆ ಬಯ್ಯಲಾರಂಭಿಸಿದ. ಕೆಲವು ಸೈನಿಕರು ಆತನನ್ನು ಹಿಡಿದರು-ನಂತರ ಸಬ್ ಜೈಲಿಗೆ ಕಳಿಸಿ ಒಂದು ಕೆಟ್ಟ ಸೆಲ್‌ಗೆ ಹಾಕಿದರು. ಮರುದಿನವೇ ವಿಚಾರಣೆ. ಮ್ಯಾಜಿಸ್ಟ್ರೇಟ್ ಹೆಸರೇನೆಂದು ಕೇಳಿದಾಗ ಬಂದ ಉತ್ತರ -"ಲಂಡನ್ ತೊಡೇ ಸಿಂಗ್" (ಲಂಡನ್ ಮುರುಕ ಸಿಂಗ್) ಆತನಿಂದ ನಿಜವಾದ ಹೆಸರು ಹೇಳಿಸಲು ಮ್ಯಾಜಿಸ್ಟ್ರೇಟಿಗೆ ಆಗಲೇ ಇಲ್ಲ. ಬಾಲಕ ತಾನು ಮಾಡಿದ ಕೆಲಸವನ್ನು ಒಪ್ಪಿಕೊಂಡು ಭಗತ್‌ಸಿಂಗ್‌ರನ್ನು ಹೊಗಳಿದ. ಮ್ಯಾಜಿಸ್ಟ್ರೇಟ್ ಒಂದು ವರ್ಷದ ಕಠಿಣ ಶಿಕ್ಷೆ ವಿಧಿಸಿದ. ಬಾಲಕ ಕೇಳಿದ-"ಒಂದೇ ವರ್ಷವೇ"? ಮ್ಯಾಜಿಸ್ಟ್ರೇಟ್ ನಾಲ್ಕು ವರ್ಷಗಳ ಶಿಕ್ಷೆ ವಿಧಿಸಿದ. ಆಗಲೂ ಬಾಲಕನ ಪ್ರಶ್ನೆ -"ನಾಲ್ಕೇವರ್ಷವೇ? "ಇದಕ್ಕಿಂತ ಹೆಚ್ಚು ಶಿಕ್ಷೆ ವಿಧಿಸಲು ಸಾಧ್ಯವಿಲ್ಲ" ಎನ್ನಬೇಕಾಯಿತು ಆ ಮ್ಯಾಜಿಸ್ಟ್ರೇಟ್.


ಅಂದು ಆ ಬಾಲಕನ ಜನ್ಮದಿನವೂ ಆಗಿತ್ತು. ಭಗತ್‌ಸಿಂಗ್ ಹುತಾತ್ಮರಾದ ದಿನ ಆ ಬಾಲಕನ ಜನ್ಮದಿನವೂ ಆಗಿದ್ದುದು ಕೇವಲ ಆಕಸ್ಮಿಕವಾಗಿರಬಹುದು. ಆದರೆ ಭಗತ್‌ಸಿಂಗ್‌ರ ಅಭಿಮಾನಿಯಾದ ಈ ಬಾಲಕ ಮುಂದೆ ಭಗತ್‌ಸಿಂಗ್‌ರ ಕೊನೆಯ ಉಯಿಲನ್ನು ವಾಸ್ತವಗೊಳಿಸಲು ತನ್ನ ಇಡೀ ಜೀವನವನ್ನೇ ಮುಡಿಪಿಟ್ಟಿದ್ದು ಕೇವಲ ಆಕಸ್ಮಿಕವಾಗಿರಲಿಲ್ಲ. ಆ ಬಾಲಕನೇ ರಾಷ್ಟ್ರದ ಹಿರಿಯ ನೇತಾರ, ಕ್ರಾಂತಿಕಾರಿ ಮಾರ್ಕ್ಸ್‌ವಾದಿ ನಾಯಕ ಕಾಂ.ಹರ್‌ಕಿಶನ್ ಸಿಂಗ್ ಸುರ್ಜಿತ್.

ಹತ್ತು ವರ್ಷಗಳ ಜೈಲು ವಾಸ, ಎಂಟು ವರ್ಷ ಭೂಗತ ಜೀವನ, ಐದು ಬಾರಿ ವಸಾಹತುಶಾಹಿ ಜೈಲುಗಳಿಂದ ಪಲಾಯನ, ಅನೇಕ ಬಾರಿ ಕರಿನೀರಿನ ಶಿಕ್ಷೆ, ಕಮ್ಯುನಿಸ್ಟರಿಗಾಗಿಯೆಂದೇ ಇದ್ದ ಬ್ರಿಟಿಷ್ ಆಳರಸರ ಯಾತನಾ ಶಿಬಿರದಲ್ಲಿ ಭೀಕರ ಅನುಭವ - ಇದು ಭಾರತ ಸ್ವಾತಂತ್ರ್ಯವನ್ನು ಅರ್ಥಪೂರ್ಣವಾಗಿಸಲು ಪಣತೊಟ್ಟಿರುವ ಕ್ರಾಂತಿಕಾರಿ ಚಳುವಳಿಯ ಮುಂಚೂಣಿ ಪಾತ್ರ ವಹಿಸಿದ ಸಿಪಿಐ(ಎಂ)ನ ಮಾಜಿ ಪ್ರಧಾನ ಕಾರ್ಯದರ್ಶಿ ಸುರ್ಜಿತ್‌ರವರ ಸಾಹಸಮಯ, ಹೋರಾಟಮಯ ಜೀವನದ ಒಂದು ಅಂಶವಷ್ಟೇ.

ಜನಶಕ್ತಿ ಕನ್ನಡ ವಾರಪತ್ರಿಕೆ
ಆಗಸ್ಟ್ 10, 200

ಬಯಲ ಬೆಳಕು





ಆನೆಯನೇರಿಕೊಂಡು ಹೋದಿರೇ
ನೀವು
ಕುದುರೆಯನೇರಿಕೊಂಡು ಹೋದಿರೇ
ನೀವು
ಕುಂಕುಮ ಕಸ್ತೂರಿಯ ಪೂಸಿಕೊಂಡು ಹೋದಿರೇ
ಅಣ್ಣಾ,
ಸತ್ಯದ ನಿಲವನರಿಯದೇ ಹೋದಿರಲ್ಲಾ.
ಸದ್ಗುಣವೆಂಬ ಫಲವ ಬಿತ್ತದೆ ಬೆಳೆಯದೇ
ಹೋದಿರಲ್ಲಾ
ಅಹಂಕಾರವೆಂಬ ಮದಗಜವೇರಿ
ವಿಧಿಗೆ ಗುರಿಯಾಗಿ ನೀವು ಹೋದಿರಲ್ಲಾ...

ಹೌದು, ಬಸವಣ್ಣನ ಈ ವಚನವೂ ಬಹಳ ಸಾರಿ ಮೆದುಳ ಮಾಮರದ ಮ್ಯಾಲೆ ಕುಂತು ಹಾಡುವ ಕೋಗಿಲೆ. ಮತ್ತೆ ಮತ್ತೆ ನೆನಪಿನಂಗಳಕೆ ಜ್ಞಾನದ ರಂಗೋಲಿಯಾಗಿ ಅರಳುತ್ತದೆ. ನಾನು ಆಸ್ಪತ್ರೆಗೆ ದಾಖಲಾದ ದಿನ. ಅಡೊಂದು ಹೊಸ ಅನುಭವಕ್ಕೆ ಮನಸು ಸಜ್ಜಾಗಿತ್ತು. ಕುತೂಹಲವೂ ಹಣಿಕಿತ್ತು. ಬೆನ್ನಹುರಿಗೆ ಸೂಚಿ ಚುಚ್ಚಿದ ಪುಟ್ಟ ನೋವು. ಭಯವಿಲ್ಲದ ಬಯಲಲ್ಲಿ ನಿಧಾನಕ್ಕೆ ಪಯಣ. ನಾನಿದ್ದೂ ನಾನಿಲ್ಲದಾಗುತ್ತಾ ಹಾದಿ ತುಳಿಯುತ್ತಿದ್ದೆ. ನಾನೆಂಬ ಠೇಂಕಾರದ ಸೊಕ್ಕಡಗುತ್ತಿದೆಯೇ? ಹಾಗೆಯೇ ಬರಿ ಶೂನ್ಯದತ್ತ. ನಾನೆಂಬ ಅಹಂ ಅಳಿದ ಹೊತ್ತಲ್ಲಿಯೇ ಎಣಿಕೆಗೆ ಎಟುಕದ ಆನಂದದ ಅಲೆಗಳು ಮೆಲ್ಲ-ಮೆಲ್ಲನೇ ಆವರಿಸುತ ಮೈದುಡುವುತ ಬಹು ಹೊತ್ತಿನ ನಿದ್ರಾಸ್ಥಿತಿಗೆ ಹೊರಳಿಸಿದವೇನೋ.. ಮತ್ತೆ ಮರಳಿದೆ ಎಚ್ಚರದ ದಂದುಗಕ್ಕೆ, ಶರೀರದ ತೊಗಲು ಹರಿದು ಕಿರಿ ಕಿರಿ ಕೊಡುವ ಭಾಗವನ್ನು ಕಿತ್ತಿ ಮತ್ತೆ ಹೊಲಿಗೆ ಹಾಕಲಾಗಿತ್ತು. ತೀವ್ರ ನೋವು ನುಂಗಲು ಮನಸ್ಸು ಮಾಡಿದ್ದೆ. ಈ ಶರೀರದೊಳಗಿನ ಅಪಾಯಕಾರಿ ಪೀಡೆಯಿಂದ ಮುಕ್ತಿ ದೊರಕಿಸಿದಂತೆ, ಈ ಲೋಕಕ್ಕೆ ಕಂಟಕವಾಗುವ ನಮ್ಮೊಳಗಿನ ಅಹಂಕಾರವನ್ನೂ ಕಿತ್ತೊಗೆಯ ಬಾರದಿತ್ತೇ..? ಅಣ್ಣನ ವಚನದ ಬೆನ್ನ ಹಿಂದೆಯೇ ತತ್ವ ಪದವೊಂದು ತೇಲಿ ಬಂದಿತು.

ಬಯಲ ಬೆಳಕು

ಹ್ಯಾಂಗ ಭ್ರಾಂತಿ ನೀಗುತಿ?
ನೀ ಹ್ಯಾಂಗ ಮಹಾಂತ ನಾಗುತಿ?
ಹಾಂಗ ಹೀಂಗ ಹೊತ್ತುಗಳೆದು
ಹೀಂಗೇ ನೀ ಸತ್ಹೋಗುತಿ...

ಒಂದಿಷ್ಟು ಆರೋಗ್ಯ ಚೇತರಿಕೆಯತ್ತ ವಾಲಿತು. 'ರಾಹು' ಅನುವಾದಿಸಿದ ಮ್ಯಾಕ್ಸಿಂಗಾರ್ಕಿ ವಿರಚಿತ ಪುಸ್ತಕ 'ವ್ಯಕ್ತಿತ್ವದ ವಿಘಟನೆ' (Disintigration of Personality) -ಓದ ತೊಡಗಿದೆ. ಮೊದಲ ವಾಕ್ಯವೇ ನನ್ನನ್ನು ಬಯಲ ಬೆಳಕಿಗೆ ಎಳೆದು ತಂದಿತು.

ಒಂದಿಷ್ಟು ಆರೋಗ್ಯ ಚೇತರಿಕೆಯತ್ತ ವಾಲಿತು. 'ರಾಹು' ಅನುವಾದಿಸಿದ ಮ್ಯಾಕ್ಸಿಂಗಾರ್ಕಿ ವಿರಚಿತ ಪುಸ್ತಕ 'ವ್ಯಕ್ತಿತ್ವದ ವಿಘಟನೆ' (Disintigration of Personality) -ಓದ ತೊಡಗಿದೆ. ಮೊದಲ ವಾಕ್ಯವೇ ನನ್ನನ್ನು ಬಯಲ ಬೆಳಕಿಗೆ ಎಳೆದು ತಂದಿತು. "ಶ್ರೀ ಸಾಮಾನ್ಯದಿಂದೊಡ ಗೂಡಿದ ಜನ ಕೋಟಿಯೇ ಸಾಮಾಜಿಕ ಬದುಕಿನ ಸಕಾಲ ಭೌತ ಸಂಪತ್ತನ್ನು ಸೃಷ್ಟಿಸಿದ ಮಹಾಶಕ್ತಿ". ಸಾಮಾನ್ಯ ಜನತೆಯೇ ಜಗತ್ತಿನ ಪ್ರಪ್ರಥಮ ಕವಿ ದಾರ್ಶನಿಕರಾಗಿದ್ದಾರೆ.

"ಶ್ರೀ ಸಾಮಾನ್ಯದಿಂದೊಡಗೂಡಿದ ಜನ ಕೋಟಿಯೇ ಸಾಮಾಜಿಕ ಬದುಕಿನ ಸಕಾಲ ಭೌತ ಸಂಪತ್ತನ್ನು ಸೃಷ್ಟಿಸಿದ ಮಹಾಶಕ್ತಿ". ಸಾಮಾನ್ಯ ಜನತೆಯೇ ಜಗತ್ತಿನ ಪ್ರಪ್ರಥಮ ಕವಿ ದಾರ್ಶನಿಕರಾಗಿದ್ದಾರೆ.

ಜನಪದರ, ಬದುಕೊಂದು ನಿತ್ಯ ನಿರಂತರ ಸಂಚಲನೆಯ ಪ್ರತೀಕ. ಪ್ರಕೃತಿಯ ಎಲ್ಲ ಆಟೋಟೋಪಗಳನ್ನು ಮೆಚ್ಚಿ-ಮೀರಿ-ಸೆಣೆಸಿ ಅದನ್ನು ಹೆಗಲಗೇರಿಸಿಕೊಂಡ ಧೀಮಂತ ಪಯಣಿಗರು. ಅವರ ಜೀವನ ಸ್ವಯಂ ಸ್ಫೂರ್ತಿವಾದ ಸ್ವಭಾವಿತ: ಅವಿನಾಶಿಯಾದ ಸೃಜನಶೀಲ ಬದುಕು. ಆದರೆ 'ವ್ಯಕ್ತಿ ಪ್ರಧಾನವಾದ'ವು ಆಳುವ ಶಕ್ತಿಯಾಯಿತು. ಇತರರ ಮೇಲೆ ದಬ್ಬಾಳಿಕೆ ನಡೆಸುವುದಕ್ಕಾಗಿ ದೇವನನ್ನು ಸೃಷ್ಟಿಸಿತು. ತನ್ನ ಅಹಂ ತೃಪ್ತಿಗಾಗಿ ಜನಪದರನ್ನೂ ನಂಬಿಸಿತು. ಕ್ರಮೇಣ ಆಳುವ ಶಕ್ತಿಯ ಅಹಂಗೆ ಧಕ್ಕೆಯಾಗಿ, ವ್ಯಕ್ತಿವಾದ ಅಲುಗಾಡತೊಡಗಿದಾಗ, ತಾನೇ ಸೃಷ್ಟಿಸಿದ 'ಪೂಜ್ಯ ದೇವನ' ಕೈ ಮೇಲಾದಾಗ ಇದೇ ಆಳುವ ದರ್ಪದ ವ್ಯಕ್ತಿ-ಶಕ್ತಿಯು ಸಂಪ್ರದಾಯ ಮತ್ತು ದೇವನೊಡನೆ ಸಂಘರ್ಷಕ್ಕಿಳಿಯಿತು. ಅಂತೆಯೇ ಹೊರ ಶಕ್ತಿಯ ಸಹಾಯವಿಲ್ಲದೆ ಏನನ್ನೂ ಸೃಷ್ಟಿಸಲಾಗದಕ್ಕೆ ದುರ್ಬಲ. ವ್ಯಕ್ತಿಯು (ಅಹಂ ಸಹ) ನಿರ್ನಾಮ ಹೊಂದಿದನು. ಯಾಕೆಂದರೆ ಬದುಕು ಮತ್ತು ಸೃಜನಶೀಲತೆ ಎರಡೂ ಪರಸ್ಪರ ಅವಲಂಬಿಯಾಗಿವೆ. ಅವಿಭಾಜ್ಯವಾಗಿವೆ.

ಹೀಗೆ ಮುಂದುವರೆಯುತ್ತಾನೆ ಮಾಕ್ಸಿಂ ಗಾರ್ಕಿ. ವ್ಯಕ್ತಿವಾದದೊಳಗಿನ ಅಹಂ ಪ್ರತಿಷ್ಠೆ ಹೇಗೆ ಸ್ವಾರ್ಥದ ಮೇರು ಹಂತ ತಲುಪಿ, ದರ್ಪ-ದಬ್ಬಾಳಿಕೆ ನಡೆಸುವ ದುಷ್ಟ ಶಕ್ತಿಯಾಗಿ ಮಾರ್ಪಟ್ಟಿತು ಎಂಬುದನ್ನು ಅನಾವರಣಗೊಳಿಸುತ್ತಲೇ, ಈ ವ್ಯಕ್ತಿ ವಾದವು ವೈಯಕ್ತಿಕ ಕಾದಾಟವಾಗಿ ಸಮುದಾಯ ಶಕ್ತಿಯನ್ನು ಹುಸಿಗೊಳಿಸಿ, ಮನುಕುಲ ನಾಶಕ್ಕೆ ನಾಂದಿ ಹಾಡುವ ಅಪಾಯವನ್ನು ಗಾರ್ಕಿ ಇನ್ನಷ್ಟು ನಿಚ್ಚಳವಾಗಿ ವಿವರಿಸುತ್ತಾನೆ. ಅಧಿಕಾರ ದಾಹ ಕೀರ್ತಿ ಕಾಮಕ್ಕಾಗಿ ಕ್ರೌರ್ಯದ ಬಡಿದಾಟದಲ್ಲಿ ತೊಡಗುತ್ತಿದ್ದಂತೆಯೇ ಸಮುದಾಯವು ಶಿಥಿಲಗೊಳ್ಳತೊಡಗಿತು. ವ್ಯಕ್ತಿಯೊಂದಿಗಿನ ಭಾವನಾತ್ಮಕ ಐಕ್ಯತೆಯೂ ನಶಿಸತೊಡಗಿತು. ಹೀಗೆ ವ್ಯಕ್ತಿವಾದವು ತನ್ನ ಒಡಲಲ್ಲಿಯೇ ತನ್ನ ಅವಸಾನದ ಬೀಜ ಹೊಂದಿರುತ್ತದೆ.

ಗಾರ್ಕಿಯು ಈ ಪುಸ್ತಕವು ಸಮಾಜವಾದಿ ಸಮಾಜದ ಸಾಹಿತ್ಯ ಮೀಮಾಂಸೆ, ಖಾಸಗಿ ಆಸ್ತಿ ಸೃಷ್ಟಿಸಿದ ಅಹಂ (ವ್ಯಕ್ತಿವಾದ), ಸಮುದಾಯವನ್ನು ಒಡೆದ ಬಗೆಯನ್ನು ವಿವರಿಸುತ್ತಲೇ, ಜನಪದರು ಮತ್ತು ಅಸಂಖ್ಯಾತ ಕಥೆ-ಕವನ, ಗಾದೆಗಳನ್ನು ಸೃಷ್ಟಿಸಿದ್ದನ್ನು ಬಿಚ್ಚಿಡುತ್ತಾನೆ. ಒಥಲೋ, ಹ್ಯಾಮ್ಲೆಟ್, ಡಾನ್ ಜೂವನ್,ಷೇಕ್ಸ್ ಪಿಯರ್, ಬೈರನ್, ಕಾಲ್ಡಿರಾನ್, ಸರ್ವೆಂಟೀಸ್, ಹೀಗೆ ಇವರೆಲ್ಲ ಖ್ಯಾತವೆತ್ತ ಸಾಹಿತಿ-ಕವಿಗಳು ಜನಪದರ ಸಾಮೂಹಿಕ ಸೃಜನಶೀಲ ತೊರೆಯಲ್ಲಿ ಮಿಂದು ಬಂದಿದ್ದಾರೆ. ಜಗತ್ತಿನ ಎಲ್ಲ ದೇಶಗಳ ಮಹಾಕವಿಗಳು ಈ ಅಕ್ಷಯ ಸಾಗರದಿಂದಲೇ ತಮ್ಮ ಬೊಗಸೆಗೆ ಒಂದಷ್ಟು ಹೀರಿ ಹಿಗ್ಗಿದ್ದಾರೆ.

ಗಂಭೀರ ದಿಕ್ಕಿನತ್ತ

ಗಾರ್ಕಿಯ ಪಯಣ ಇನ್ನೂ ಗಂಭೀರ ದಿಕ್ಕಿನತ್ತ ಹೊರಳುತ್ತದೆ. ಅಂದಿನ ಆರ್ಥಿಕ ರಾಜಕೀಯ ಮತ್ತು ಸಾಮಾಜಿಕ ಸ್ಥಿತಿ-ಗತಿಗಳ ಕುರಿತು ಬರೆಯುತ್ತಾನೆ. ಬೂರ್ಜ್ವಾ ಶಕ್ತಿಯು, ಸ್ವ ಹಿತಾಸಕ್ತಿಯು ಸ್ವಾರ್ಥವೊಂದನ್ನುಳಿದು ಎಲ್ಲವನ್ನೂ ತಿರಸ್ಕರಿಸುವ ಸರ್ವ ಶೂನ್ಯವಾದಿ ವ್ಯಕ್ತಿವಾದ (Nihilistic Individualism) ದ ವಿಷವುಂಡೂ ಉಸಿರಾಡುತ್ತಿರುವ ಪರಿಯನ್ನು ಬಿಚ್ಚಿಡುತ್ತಾನೆ. ಆಗ ಪ್ರಕಾಂಡ ಪಾಂಡಿತ್ಯವನ್ನು ಹೊಂದಿ, ಬುದ್ಧಿವಂತಿಕೆಯ ಗರಿ ಹಚ್ಚಿಕೊಂಡ ಸಾಹಿತಿ ಬುದ್ಧಿಜೀವಿಗಳು ಯಾರ ಕಡೆ ಎಂಬ ಪ್ರಶ್ನೆಯು ಜನ ಚಳುವಳಿಯ ಒಡಲಿನಿಂದ ಚಿಮ್ಮಿ ಬರುತ್ತದೆ. ಆ ಹೊತ್ತಿನ ಸಾಹಿತ್ಯ ಕೃತಿಗಳ ವಿಮರ್ಶೆ-ವಿಶ್ಲೇಷಣೆಯೊಂದಿಗೆ, ಕರ್ತೃಗಳ ಒಲವು-ನಿಲುವು-ಬದ್ಧತೆ ಯಾರ ಪರವಿತ್ತು ಎನ್ನುವುದರ ಮೇಲೆ ಬೆಳಕು ಚೆಲ್ಲುತ್ತಾನೆ. ಆಳುವ ವರ್ಗದ ಪರ ಚಿಂತನೆಗಳು ರೈತ-ಕಾರ್ಮಿಕ, ದುಡಿಯುವವರ ಪರ ಚಿಂತನೆಗಳು ಹಾಗೂ ಎಡಬಿಡಂಗಿ ನಿಲುವು ಉಳ್ಳವರು, ಹೀಗೆ ಆಧ್ಯಾತ್ಮಿಕ ಬಯಕೆಯ ಉತ್ಕಟತೆಯಲ್ಲಿ ತೊಳಲಾಡುವವರು ಹೀಗೆ ನಾನಾ ನಮೂನೆಯ ಚಿಂತನಾವತಾರಗಳು ಗಾರ್ಕಿಯ ಹರಿತ ವಿಮರ್ಶೆಗೆ ಪಕ್ಕಾಗುತ್ತವೆ. ಅನಂತ ತಂತ್ರ-ಕುತಂತ್ರದ ದುಷ್ಟ ಆಳುವ ಶಕ್ತಿಯ ವಿರುದ್ಧ ಸಮೂಹ ಸಂಘರ್ಷದ ಹಾದಿ ಸವೆಸಿದ ರೈತ ಸಮುದಾಯವು ಗಂಭೀರ ಹೆಜ್ಜೆ ಹಾಕುತ್ತಿತ್ತು. ವ್ಯಕ್ತಿವಾದದ ಸೋಂಕಿನಿಂದ ತಪ್ಪಿಸಿಕೊಳ್ಳುವ ಸಹಜ ದೌರ್ಬಲ್ಯ ಮೀರುತ ಮುನ್ನಡೆದ ಅನೇಕ ಜನಪರ ಬುದ್ಧಿಜೀವಿಗಳ ಕೊಡುಗೆಯನ್ನು ಗಾರ್ಕಿ ಮುಕ್ತವಾಗಿ ಹೊಗಳುತ್ತಾನೆ. ಇದೇ ಸಮಯದಲ್ಲಿ ವ್ಯಕ್ತಿವಾದವನ್ನು ಅಪ್ಪಿಕೊಂಡವರ ಉನ್ಮಾದ ಸ್ಥಿತಿ ಅವರ ಮಾನಸಿಕ ಅಸ್ವಸ್ಥತೆ , ವೈಚಾರಿಕ ಅಸಂಬದ್ಧತೆ ಮನೋದಾರ್ಢ್ಯದ ಕೊರತೆ, ಸಾಮಾಜಿಕವಾಗಿ ಸ್ಪಂದಿಸದ ಜಡತೆ, ಅಹಂನಿಂದ ಬೀಗುವ ವಿಚಿತ್ರ ಮನೋರೋಗದ ಕುರಿತು ಕಟು ಟೀಕೆ ಮಾಡುತ್ತಾನೆ. ಆ ಹೊತ್ತಿನ ಬುದ್ಧಿಜೀವಿ ಮೆರೆಝ್‌ಕೊವೆಸ್ಕಿಯು "ನನ್ನ ಅಂತ್ಯದೊಂದಿಗೆ ಸಕಲವೂ ಲಯವಾಗಬೇಕು"ಎಂಬ ದುಷ್ಟ-ಸ್ವಾ[illegible] ಮತ್ತು ಅಹಂಭಾವದ ಪರಾಕಾಷ್ಠೆಯ ಬಯ[illegible] ವ್ಯಕ್ತಿಸುತ್ತಾನೆ. ಆದರೆ ಜನ ಚಳುವಳಿ(ರಾಜಕೀ[illegible] ಗುರಿಯುಳ್ಳ ಸೈದ್ಧಾಂತಿಕ ಸಾಂಸ್ಕೃತಿಕ ಚಳುವಳಿ) [illegible] ಶರವೇಗದಲ್ಲಿ ಮುನ್ನಡೆಯುವಾಗ ಅನೇಕ ಪ್ರಾಂಜ[illegible] ಮನಸಿನ, ಸಂವೇದನಾಶೀಲ ಲೇಖಕ[illegible] ಜನಸಾಮಾನ್ಯರ ಧ್ವನಿಯಾಗಿ ನಿಂತರು.

ಪುಸ್ತಕದ ಕೊನೆಯ ವ್ಯಾಕ್ಯಗಳು ಮನದಾಳದ[illegible] ಮಹಂತ ಪ್ರಜ್ಞೆ ಬೆಳಗುತ್ತವೆ. "ನಿಸರ್ಗದ ನಿಷ್ಠುರತ[illegible] ಧನ್ಯವಾದಗಳು, ನಿಸರ್ಗದ ಮುಂದೆ ಎಲ್ಲರ[illegible] ಸಮಾನರು. ಯಾರೂ ಅಮರರ[illegible] ಖಾಸಗಿ-ವೈಯಕ್ತಿಕ ಅಮರತ್ವಕ್ಕೆ ಸ್ಥಾನವಿಲ್ಲ. [illegible] ಭೂಮಿಯ ಮೇಲೆ ನಮಗಿಂತ ಶಕ್ತರು, ಸುಂದರ[illegible] ಮತ್ತು ಸುಗಣಿಗಳು ಜನಿಸಿ ಬಾಳಲು ನಾವು ನವ[illegible] ಸ್ಥಾನ ತೆರವು ಮಾಡಬೇಕಾದದ್ದು ಪ್ರಕೃತಿ ನಿಯಮ[illegible] ಹೊಸ ಆವಿಷ್ಕಾರ ಮತ್ತು ವೈವಿಧ್ಯತೆ ಬದುಕು [illegible] ಸೃಷ್ಟಿ ನಿಯಮ. ಮನುಷ್ಯನ ಜೀವನವೆಲ್ಲ ಸೃಷ್ಟಿಶೀ[illegible] ಪ್ರಯತ್ನಗಳಿಂದ ಕೂಡಿದೆ. ನಿರ್ಜೀವ ಜಗತ್ತುವೊಡ್ಡ[illegible] ಅಡೆ-ತಡೆಗಳನ್ನು ಮೀರಿ ಭೌತ ವಸ್ತುವಿ[illegible] ಸ್ವರೂಪವನ್ನರಿಯುತ, ತನ್ಮೂಲಕ ಲಭಿ[illegible] ಅರಿವನ್ನು ಮಾನವ ಕಲ್ಯಾಣಕ್ಕೆ ಬಳಸುವ ಹಂಬಲ[illegible] ವ್ಯಕ್ತಿಯು ಸ್ಥಾಯಿಗುಣವಾಗಿದೆ. ಜನಪದರ[illegible] ಅಂತರ್ಗತವಾಗಿರುವ ಅಪಾರ ಶಕ್ತಿ-ಸಾಮರ್ಥ್ಯಗಳ[illegible] ಕ್ರೋಢೀಕರಿಸಿ, ಸಂಘಟಿಸಿ ಪ್ರಜ್ಞಾವಂತ ಕ್ರಿಯಾಶೀ[illegible] ವರ್ಗಗಳನ್ನಾಗಿ, ಸಮರಶೀಲ ಸಾಮೂಹಿ[illegible] ಪಕ್ಷಗಳನ್ನಾಗಿ ಪರಿವರ್ತಿಸಬೇಕಾದದ್ದು ಸಮಕಾಲೀ[illegible] ಚರಿತ್ರೆಯ ಈ ಕ್ಷಣದ ಕಾರ್ಯಭಾರವಾಗಿದೆ".

.....ನೂರು ಪುಟಗಳು ಓದಿ ಮುಗಿಸಿದಾ[illegible] ಹೃದಯ ಹಗುರವಾಗಿತ್ತು. ಎಂಟೆ ಎಂಟು ವಯಸ್ಸಿ[illegible] ಪುಟ್ಟ ಬಾಲಕ. ತರಕಾರಿ ಬಂಡಿ ತಳ್ಳುತ, ಗ[illegible] ದನಿಯಲ್ಲಿ 'ಆಂಟಿ, ಟಮೋಟೋ ತಗೋ[illegible] ಆದೇಶಿಸಿದನು. ಮೊನ್ನೆ ಮೆಹಬೂಬನ ಫೋಟೋ[illegible] ತೆಗೆದಿದ್ದೆ 'ಪ್ರಿಂಟ್ ಮಾಡಿ ಕೊಡ್ರಿ' ಎಂದು ತಾಕೀ[illegible] ಮಾಡಿದ.

ಆನೆ-ಕುದುರೆಯನೇರಿ ಗಂಧ ಕಸ್ತೂ[illegible] ಪೂಸಿಕೊಂಡು ಹೋದವರಾರು ನ[illegible] ನೆನಪಲ್ಲುಳಿಯಲಿಲ್ಲ. ಕಣ್ಣೆದುರಿನ ಕಂಪ್ಯೂಟರ್ನ[illegible] 'ಪುಟ್ಟ ಮೆಹಬೂಬ', ಟಮಾಟೋ ತೂಗುತ, ಮು[illegible] ನಗೆ ಚೆಲ್ಲುತ ನಿಂತಿದ್ದನು' ಅವನ ಹಾಲ್ದಿಂಗಳ[illegible] ಪ್ರಾಂಜಲ ನಗು ಚಿದ್‌ಜ್ಯೋತಿಯಂತೆ ಬೆಳಗುತ್ತಿತ್ತು.

ಹಲೋ ದೇಶಭಕ್ತರು?

ಹಲ್ಲೋ ದೇಶಭಕ್ತರು ವಂದನೆಯು ನಿಮಗೆ
ಶಾಸಕರ ಮಾರ್ಕೆಟ್ ಹೇಗುಂಟು ಕೊನೆಗೆ?
ತೆಜಿಯೋ ಮಂದಿಯೋ ಮಾಡದೆ ಲೋಭ
ಖರೀದಿಸಿ ಮುಂದುಂಟು ದುಪ್ಪಟ್ಟು ಲಾಭ

ಸ್ವಾಯತ್ತತೆ

ನಮ್ಮ ಸ್ವಾಯತ್ತತೆಯ ಅಮೇರಿಕಕೆ ಮಾರಿ
ಈ ಜನರು ಅಲ್ಲಿಗೆ ಹೋಗುವವರೆ ಹಾರಿ?
ಸಂದೇಹ ಕೆಲವು ಜನ ವಿಫುಲ ಹಣ ಕೂಡಿ
ಇಟ್ಟಿದ್ದೆ ಪರದೇಶಿ ಬ್ಯಾಂಕಿನೊಳು ನೋಡಿ

– ವಿಡಂಬಾರಿ

....ಕಾಂ. ಸುರ್ಜಿತ್ ಅಮರ

ಪುಟ 8 ರಿಂದ

ನೀಡಿದ ಬಲಿದಾನ ಒಂದು ಅಮೋಘ ಅಧ್ಯಾಯ. ಐವತ್ತರ ದಶಕದ ಕೊನೆಯ ವರ್ಷಗಳಿಂದಲೂ ಸುರ್ಜಿತ್ ಜಮ್ಮು ಮತ್ತು ಕಾಶ್ಮೀರ ಸಮಸ್ಯೆಯನ್ನು ಎದುರಿಸುವಲ್ಲಿ ತೊಡಗಿದ್ದರು. ಎಂಭತ್ತರ ದಶಕದಲ್ಲಿ ಅವರು ಅಸ್ಸಾಂ ಒಪ್ಪಂದ ವಿಕಾಸಗೊಳ್ಳುವಲ್ಲಿ ಒಂದು ಪಾತ್ರ ವಹಿಸಿದರು. ಆಳವಾದ ಸಾಮ್ರಾಜ್ಯಶಾಹೀ-ವಿರೋಧಿ ತತ್ವಗಳು ಮತ್ತು ರಾಷ್ಟ್ರೀಯ ಆಂದೋಲನದ ಮೌಲ್ಯಗಳನ್ನು



ಬೆಂಗಳೂರಿನ ರ್‍ಯಾಲಿಯೊಂದರಲ್ಲಿ ಕಾಂ. ಸುರ್ಜಿತ್

ರಕ್ತಗತಗೊಳಿಸಿಕೊಂಡಿದ್ದ ಸುರ್ಜಿತ್ ರಾಷ್ಟ್ರೀಯ ಐಕ್ಯತೆಯ ಎಲ್ಲಾ ಪ್ರಶ್ನೆಗಳನ್ನು ಒಂದು ಪ್ರಜಾಸತ್ತಾತ್ಮಕ ಮತ್ತು ಜಾತ್ಯಾತೀತ ಕಣ್ಣೋಟದಿಂದ ನೋಡುತ್ತಿದ್ದರು.

ಸಿಪಿಐ(ಎಂ)ನಲ್ಲಿ ಸುರ್ಜಿತ್ ಮೂರು ದಶಕಗಳ ಕಾಲ ಅವರು ಅಂತರ್ರಾಷ್ಟ್ರೀಯ ವಿಭಾಗದ ಮುಖ್ಯಸ್ಥರಾಗಿದ್ದರು. ಜಗತ್ತಿನಾದ್ಯಂತ ಎಲ್ಲಾ ಕಮ್ಯುನಿಸ್ಟ್ ಮತ್ತು ಪ್ರಗತಿಪರ ಪಕ್ಷಗಳೊಂದಿಗೆ ಅವರು ಸಂಬಂಧಗಳನ್ನು ಬೆಳೆಸಿದರು. ಅವರ ಮುಖಂಡತ್ವದಲ್ಲಿ ಸಿಪಿಐ(ಎಂ) ಸಾಮ್ರಾಜ್ಯಶಾಹಿ-ವಿರೋಧಿ ಹೋರಾಟಗಳೊಂದಿಗೆ ಮತ್ತು ರಾಷ್ಟ್ರೀಯ ವಿಮೋಚನಾ ಆಂದೋಲನಗಳೊಂದಿಗೆ ದೃಢ ಸೌಹಾರ್ದವನ್ನು ವ್ಯಕ್ತಪಡಿಸಿತು. ವಿಯೆಟ್ನಾಂ ವಿಮೋಚನಾ ಹೋರಾಟ, ಪ್ಯಾಲೆಸ್ಟೇನಿಯನ್ ಆಂದೋಲನ ಮತ್ತು ಕ್ಯೂಬಾ ಸೌಹಾರ್ದ ಪ್ರಚಾರದ ವೇಳೆ ಸೌಹಾರ್ದ ಚಟುವಟಿಕೆಗಳಲ್ಲಿ ಅವರ ಕೊಡುಗೆ ಗಮನಾರ್ಹ.

ಅನುಭವೀ ಸಲಹೆಗಾರ

ಸಿಪಿಐ(ಎಂ)ನ್ನು ದೇಶದ ಎಡಪಂಥೀಯ ಆಂದೋಲನದ ಅತಿ ದೊಡ್ಡ ತುಕಡಿಯಾಗಿಸುವಲ್ಲಿ ಸುರ್ಜಿತ್ ಒಂದು ಮಹತ್ವದ ಪಾತ್ರ ವಹಿಸಿದರು. ಕೇವಲ ಸ್ವಂತ ಅಧ್ಯಯನ ಮತ್ತು ಅನುಭವಗಳಿಂದ ಕಲಿತೇ ಅವರು ಮಾರ್ಕ್ಸ್‌ವಾದ-ಲೆನಿನ್‌ವಾದವನ್ನು ಅರಗಿಸಿಕೊಂಡವರು. ಸದಾ ಪಕ್ಷದ ಸೈದ್ಧಾಂತಿಕ ಮತ್ತು ರಾಜಕೀಯ ನಿಲುವುಗಳನ್ನು ಮಾರ್ಕ್ಸ್‌ವಾದದ ಆಧಾರದಲ್ಲಿ ವಿಮರ್ಶಾತ್ಮಕವಾಗಿ ಪರೀಕ್ಷಿಸಬೇಕಾದುದರ ಮೂಲಭೂತ ಮಹತ್ವವನ್ನು ಅವರು ಒತ್ತಿ ಹೇಳುತ್ತಿದ್ದರು. 1990ರ ದಶಕದಲ್ಲಿ ಸೋವಿಯೆತ್ ಒಕ್ಕೂಟದ ಕುಸಿತದ ನಂತರ ಅವರು ಹಿಂದಿನ ಅನುಭವಗಳಿಂದ ಪಾಠ ಕಲಿತು ಸರಿಯಾದ ನಿಲುವುಗಳಿಗೆ ಬರುವಲ್ಲಿ ಪಕ್ಷಕ್ಕೆ ಮಾರ್ಗದರ್ಶನ ನೀಡಿದರು.

(ಭಾರತದಲ್ಲಿ ಭೂಸುಧಾರಣೆಗಳು), (ಪಂಜಾಬಿನ ಘಟನೆಗಳು) ಹಾಗೂ (ಕಮ್ಯುನಿಸ್ಟ್ ಪಕ್ಷದ ಇತಿಹಾಸದ ರೂಪರೇಷೆ) ಅವರು ಬರೆದಿರುವ ಪುಸ್ತಕಗಳು. ಪ್ರಸಕ್ತ ರಾಜಕೀಯ ಪ್ರಶ್ನೆಗಳ ಮೇಲೆ ಅಸಂಖ್ಯ ಕಿರುಪುಸ್ತಕಗಳನ್ನು ಅವರು ಬರೆದರು.

ಸಿಪಿಐ(ಎಂ)ನ ಪ್ರಧಾನ ಕಾರ್ಯದರ್ಶಿಯಾಗಿ ಅವರು ದೇಶದ ಎಡ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳ ಅತ್ಯಂತ ಅಧಿಕಾರವಾಣಿಯಿಂದ ಮಾತನಾಡಬಲ್ಲ ವಕ್ತಾರರಾದರು. ಅವರು ಪ್ರಜಾಪ್ರಭುತ್ವ ವಾದಿ ಮತ್ತು ಜಾತ್ಯಾತೀತ ಮೌಲ್ಯಗಳ ರಕ್ಷಣೆಗಾಗಿ ಮತ್ತು ಭಾರತ ತನ್ನ ಅಲಿಪ್ತ ಮತ್ತು ಸ್ವತಂತ್ರ ವಿದೇಶಾಂಗ ನೀತಿಯನ್ನು ಕಾಯ್ದುಕೊಳ್ಳಬೇಕೆಂದು ಅವಿಶ್ರಾಂತವಾಗಿ ದುಡಿದರು. ರಾಜಕೀಯ ವಲಯಗಳಲ್ಲಿ ಅವರ ಅಭಿಪ್ರಾಯಗಳನ್ನು ಕೇಳಿಕೊಂಡು ಬರುತ್ತಿದ್ದರು ಮತ್ತು ಅವರ ಸಲಹೆಯನ್ನು ಗೌರವದಿಂದ ಆಲಿಸುತ್ತಿದ್ದರು ಅವರ



ಕಾಂ.ಸುರ್ಜಿತ್ - ಕಾರಟ್ ಸಮಾಲೋಚನೆ

ನಿಧನದಿಂದ ಪಕ್ಷ ಒಬ್ಬ ಅಪ್ರತಿಮ ಮುಖಂಡರನ್ನು ಕಳಕೊಂಡಿದೆ ಹಾಗೂ ದೇಶ ಎಡ ಮತ್ತು ಜಾತ್ಯಾತೀತ ಪರಂಪರೆಯ ಒಬ್ಬ ಅಧಿಕಾರಯುತ ಪ್ರತಿನಿಧಿಯನ್ನು ಕಳಕೊಂಡಿದೆ.

ಸಿಪಿಐ(ಎಂ)ನ ಇಡೀ ಪಕ್ಷ, ಯಾವ ಸಿದ್ಧಾಂತ ಮತ್ತು ತತ್ವಗಳಿಗಾಗಿ ಹರ್ಕಿಶನ್ ಸಿಂಗ್ ಸುರ್ಜಿತ್ ತಮ್ಮ ಜೀವನವನ್ನೇ ಮುಡಿಪಿಟ್ಟರೋ ಅವುಗಳಲ್ಲಿ ವಿಶ್ವಾಸವಿಟ್ಟು ಅವನ್ನು ಎತ್ತಿ ಹಿಡಿಯುತ್ತದೆ ಎಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯೂರೋ ಈ ಅಪ್ರತಿಮ ಕಮ್ಯುನಿಸ್ಟ್ ಮತ್ತು ಪ್ರೀತಿಯ ನೇತಾರನಿಗೆ ಗೌರವಪೂರ್ಣ ಶ್ರದ್ಧಾಂಜಲಿ ಅರ್ಪಿಸಿದೆ ಹಾಗೂ ಅವರ ಪತ್ನಿ ಪ್ರೀತಮ್ ಕೌರ್, ಪುತ್ರರು, ಪುತ್ರಿ, ಮೊಮ್ಮಕ್ಕಳು ಮತ್ತು ಕುಟುಂಬದ ಸದಸ್ಯರಿಗೆ ಹಾರ್ದಿಕ ಸಂತಾಪವನ್ನು ವ್ಯಕ್ತಪಡಿಸಿದೆ.

○

ಸುರ್ಜಿತ್ : ಕ್ರಾಂತಿಕಾರಿ ಚಟುವಟಿಕೆಗಳ ಬಾಲ್ಯ

ಪುಟ 9ರಿಂದ

ಈ ಸಭೆಯಲ್ಲಿ ಭಾಗವಹಿಸಿದ ಸುರ್ಜಿತ್‌ರಿಗೆ ಅದೊಂದು ಬಹುದೊಡ್ಡ ಸ್ಫೂರ್ತಿಯ ಸೆಲೆಯಾಯಿತು. ಯಾವುದೇ ಶಸ್ತ್ರಾಸ್ತ್ರ ಅಥವಾ ಆಯುಧಗಳಿಲ್ಲದೆ ಚಳುವಳಿಯಲ್ಲಿ ಸ್ವಯಂ ಪ್ರೇರಣೆ ಯಿಂದ ಭಾಗವಹಿಸಿ ಬ್ರಿಟಿಷ್ ಸಾಮ್ರಾಜ್ಯಶಾಹಿ ಶಕ್ತಿಯನ್ನು ಅನಕ್ಷರರಾದ ಆದರೆ ಸಾಮೂಹಿಕ ಜನತಾ ಶಕ್ತಿಯು ಮುಖಾಮುಖಿಯಾಗಿ ಎದುರಿಸಿ ತನ್ನ ಜನತಾ ಶಕ್ತಿಯನ್ನು ಜಳಪಿಸಿದ್ದು ಸುರ್ಜಿತ್‌ರಲ್ಲಿ ರೋಮಾಂಚನವನ್ನುಂಟು ಮಾಡಿತ್ತು.

ಸುರ್ಜಿತ್‌ರ ತಂದೆಯು ಸ್ವಾತಂತ್ರ್ಯ ಸಂಗ್ರಾಮದಲ್ಲಿ ನಿರಂತರವಾಗಿ ಪಾಲ್ಗೊಳ್ಳುತ್ತಿದ್ದರಿಂದ ಅವರು ಪೊಲೀಸರಿಂದ ಆಗಾಗ್ಗೆ ಬಂಧನಕ್ಕೊಳಗಾಗಿ ಒಂದಷ್ಟು ತಿಂಗಳು ಸೆರೆವಾಸ ಅನುಭವಿಸಿದ ನಂತರ ಬಿಡುಗಡೆಯಾಗುತ್ತಿದ್ದರು. ಅವರ ಕುಟುಂಬಕ್ಕೆ ಒಂದು ಚಿಕ್ಕಳತೆಯ ಭೂಮಿ ಬಿಟ್ಟರೆ ಮತ್ತೇನೂ ಇಲ್ಲದ್ದರಿಂದ ಅವರು ಅತೀವ ಆರ್ಥಿಕ ಸಂಕಷ್ಟಗಳನ್ನು ನಿರಂತರವಾಗಿ ಎದುರಿಸಬೇಕಾಗಿತ್ತು. ಸೆರೆವಾಸದಿಂದ ಬಿಡುಗಡೆಗೊಂಡು ಹೊರಬಂದ ನಂತರ ಇದ್ದಷ್ಟು ಭೂಮಿಯನ್ನೂ ಸಹ ಒತ್ತೆಯಿಡುವಂತಹ ಶೋಚನೀಯ ಸ್ಥಿತಿಯನ್ನು ಅವರು ತಲುಪಿದರು. ಇಂಥಹ ದಿಕ್ಕೆಟ್ಟ ಸ್ಥಿತಿಯಲ್ಲಿ ಅವರ ತಂದೆ 1929ರಲ್ಲಿ ಅಮೇರಿಕಾಗೆ ಕಾನೂನುಬಾಹಿರ ಪಾಸ್‌ಪೋರ್ಟ್ ಪಡೆದುಕೊಂಡು ಹೋದರಾದರೂ ನಂತರದ 5 ವರ್ಷಗಳಲ್ಲಿ ಅವರಿಂದ ಯಾವುದೇ ಹಣ ಬಾರದಂತಹ ಕಾಲವಾಗಿತ್ತದು. ಕಷ್ಟಕರವಾದ ಬದುಕನ್ನೆದುರಿಸಿ ಸಂಕಷ್ಟದ ಪಾತಾಳದಿಂದ ಅವರ ತಾಯಿ ಎದ್ದುನಿಂತು ಜೀವನ ಸಾಗಿಸಬೇಕಿತ್ತು. ತಾಯಿಯ ಪೋಷಕರು ಸಹಾಯಹಸ್ತವನ್ನು ಚಾಚಿ ನೆರವಾದರು.

1930ರಲ್ಲಿ ಒಂದೊಮ್ಮೆ ಸುರ್ಜಿತ್ ಶಾಲಾ ಬಾಲಕನಾಗಿದ್ದಾಗ ಕಾನೂನು ಬಾಹಿರ ಪಕ್ಷವೊಂದಕ್ಕೆ ಸಾರ್ವಜನಿಕ ಸಭೆ ನಡೆಸಲು ಸಿದ್ದತೆ ಮಾಡುವಲ್ಲಿ ನೆರವಾಗಿದ್ದರು. ಮರುದಿನ ಅವರು ಶಾಲೆಗೆ ಹೋದಾಗ ಪೊಲೀಸರು ಕಾದು ಕುಳಿತಿದ್ದರು. ಸುರ್ಜಿತ್‌ರವರು ಬಾಲಕನಾಗಿರುವುದರಿಂದ ಅವನನ್ನು ಬಂಧಿಸಬಾರದೆಂದು ಅವರ ತಂದೆಯ ಸ್ನೇಹಿತ ಮಾಸ್ತರರು ಗೋಗರೆದರು. ಕೊನೆಗೆ ಸುರ್ಜಿತ್ ತಪ್ಪೊಪ್ಪಿಗೆ ಕೇಳಿದಲ್ಲಿ ಅವರನ್ನು ಬಂಧಿಸದೆ ಬಿಟ್ಟು ಬಿಡುವುದಾಗಿ ರಾಜಿಗೆ ಪೊಲೀಸರು ಮುಂದಾದರು. ತಪ್ಪೊಪ್ಪಿಕೊಳ್ಳದಿದ್ದಲ್ಲಿ ಶಾಲೆಯಲ್ಲಿ ವ್ಯಾಸಂಗ ಮುಂದುವರಿಯುವುದು ಸಾಧ್ಯವಿಲ್ಲವೆಂಬ ಒತ್ತಡವನ್ನು ತಂದರು. ಸುರ್ಜಿತ್‌ರ ಕಣ್ಣಮುಂದೆ ಅವರ ತಂದೆ ಬೀಳ್ಕೊಡುವಾಗ ಅವರೊಬ್ಬ ಉನ್ನತ ವಿದ್ಯೆಗಳಿಸಿದ ವಿದ್ವಾಂಸನಾಗಬೇಕೆಂದು ಕಂಡಿದ್ದ ಕನಸುಗಳು ಕಣ್ಣೀರು ತರಹತ್ತಿದವು. ಮತ್ತೊಂದೆಡೆ ರಾಷ್ಟ್ರೀಯ ಸ್ವಾಭಿಮಾನ ಹೆಮ್ಮರವಾಗಿ ಬೆಳೆದು ಅವರಲ್ಲಿ ಬೇರುಬಿಟ್ಟಿತ್ತು. ಆ ಪುಟ್ಟ ಬಾಲಕನಲ್ಲಿ ಸ್ವಂತ ಭವಿಷ್ಯದ ಉತ್ಕಟತೆ ಮತ್ತು ರಾಷ್ಟ್ರಕ್ಕಾಗಿನ ತ್ಯಾಗಗಳೆರಡೂ ಬೆಂಕಿಕೊಳ್ಳಿಗಳಂತೆ ಒಂದಕ್ಕೊಂದು ಕಿಡಿಯಾಡತೊಡಗಿದವು. ಆ ಬಾಲಕನು ತೆಗೆದುಕೊಂಡ ನಿರ್ಧಾರ ಏನು ಎಂದರೆ ಅದರ ಪರಿಣಾಮ ಆತನನ್ನು ಶಾಲೆಯಿಂದ ವಜಾ ಮಾಡುವಲ್ಲಿ ಕೊನೆಗೊಂಡಿತು. ಅಚಲವಿಶ್ವಾಸ ಮತ್ತು ದಿಟ್ಟತನದ ಆ ನಿರ್ಧಾರದ ಹಿಂದೆ ಘಾಸಿಗೊಂಡ ಹೃದಯ ಸಂಕಟದಲ್ಲಿ ತುಯ್ದಾಡುತ್ತಿತ್ತು.

ಆ ಹೊತ್ತಿಗೆ ಧೈರ್ಯ ಮತ್ತು ಸ್ಫೋಟಕ ಶಕ್ತಿ ಅವರ ವ್ಯಕ್ತಿತ್ವದಲ್ಲಿ ಹೊರಹೊಮ್ಮ ತೊಡಗಿತ್ತು. ಶಾಲೆಯಿಂದ ಹೊರಹಾಕಿದ ಸುದ್ದಿ ತಿಳಿದ ಅವರ ತಾಯಿ ಸುರ್ಜಿತ್‌ರನ್ನು ಮತ್ತೊಂದು ಶಾಲೆಗೆ ಸೇರಿಸಲು ಪ್ರಯತ್ನಿಸಿದರು. ಸಮೀಪದಲ್ಲೆಲ್ಲೂ ಪರ್ಯಾಯ ಶಾಲೆಯಿಲ್ಲದ್ದರಿಂದ ಅವರ ತಂದೆಯ ಸ್ನೇಹಿತರಾದ ಹರಿಸಿಂಗ್ ಜಲಂಧರ್‌ರವರ ಸಹಾಯದಿಂದಾಗಿ ಜಲಂಧರ್‌ನ ಖಾಲ್ಸಾ ಶಾಲೆಗೆ ಅವರನ್ನು ಸೇರಿಸಲಾಯಿತು. ಶಾಲೆಗೆ ತೆರಬೇಕಾದ ಶುಲ್ಕವೇನೂ ಕೈಗೆಟುಕುವಂತಿರಲಿಲ್ಲ. ತಿಂಗಳಿಗೆ 10 ರೂಪಾಯಿ ಶುಲ್ಕ ಭರಿಸಲು ಅಳೆದು ಸುರಿದು ಲೆಕ್ಕ ಮಾಡಿ ಎಮ್ಮೆಯ ಹಾಲಿನ ಮಾರಾಟದಿಂದ ಮತ್ತು ಚರಕದ ನೂಲಿನ ಹಣದಿಂದ ಒಗ್ಗೂಡಿಸಲಾಗುತ್ತಿತ್ತು. ಅವರ ತಾಯಿಯ ಶ್ರಮ, ಅರ್ಪಣೆ ಮತ್ತು ತ್ಯಾಗ ಮನೋಭಾವ ಸುರ್ಜಿತ್‌ರಿಗೆ ಭವಿಷ್ಯದಲ್ಲಿ ಭದ್ರ ಅಡಿಪಾಯವನ್ನೊದಗಿಸಿದವು.

ಸುರ್ಜಿತ್‌ರಿಗೆ ಅಗಾಧ ಸ್ಫೂರ್ತಿ, ಸ್ವಯಂಪ್ರೇರಣೆ ಮತ್ತು ಕೆಚ್ಚೆದೆಯ ಶಕ್ತಿಯನ್ನು ತುಂಬಿದ ಬಹುಮುಖ್ಯ ಪಾತ್ರಧಾರಿಯೆಂದರೆ ಮಹಾನ್ ಕ್ರಾಂತಿಕಾರಿ ಭಗತ್‌ಸಿಂಗ್. ಭಗತ್‌ಸಿಂಗ್‌ರನ್ನು 1931ರಲ್ಲಿ ನೇಣುಗಂಬಕ್ಕೇರಿಸಿದರೂ ಅಷ್ಟರಲ್ಲಾಗಲೇ ಅವರ ಬಲಿದಾನ ಭಾರತೀಯ ಯುವಕ ಯುವತಿಯರಲ್ಲಿ ಅದೆಂಥದೋ ಮಾಂತ್ರಿಕ ಶಕ್ತಿಯನ್ನು ತುಂಬಿ ಹೋರಾಟ, ಬಲಿದಾನಗಳಿಗೆ ಸೂಜಿಗಲ್ಲಿನಂತೆ ಆಕರ್ಷಿಸುವ ಗುಣವನ್ನು ಪಡೆದುಕೊಂಡಿತ್ತು. ಭಗತ್‌ರು ಸ್ಥಾಪಿಸಿದ್ದ ನೌಜವಾನ್ ಭಾರತ್ ಸಭಾಗೆ ಸುರ್ಜಿತ್‌ರು ಸದಸ್ಯರಾದರು. ಆ ಕಾಲಘಟ್ಟದಲ್ಲಿ ವಿಶೇಷವಾಗಿ 1930 ದಶಕದಲ್ಲಿ ಆರ್ಥಿಕತೆಯ ತೀವ್ರ ಬಿಕ್ಕಟ್ಟಿನಲ್ಲಿದ್ದು ರೈತಾಪಿ ವರ್ಗದ ಅಸಹನೆ ಮತ್ತು ದಂಗೆಗೆ ಕಾರಣವಾಗಿತ್ತು. ಅಂಥಹ ಸಂದರ್ಭದಲ್ಲಿ ಜರುಗುತ್ತಿದ್ದ ಹಲವಾರು ಚಳುವಳಿ ಮತ್ತು ಸಾಮೂಹಿಕ ಹೋರಾಟಗಳಲ್ಲಿ ಪಾಲ್ಗೊಳ್ಳುತ್ತಿದ್ದರು.

ಸುರ್ಜಿತ್‌ರನ್ನು ಖಾಯಂ ಆಗಿ ಚಳುವಳಿಯ ಪ್ರಮುಖ ವಾಹಿನಿಯೊಳಗೆ ಮುನ್ನುಗ್ಗುವಂತೆ ಮಾಡಿದ ಚಾರಿತ್ರಿಕ ತಿರುವಿಗೆ ಕಾರಣವಾದ ಘಟನೆಯೊಂದು ಜರುಗಿತು. (ಅದರ ವಿವರಗಳಿಗಾಗಿ ಬಾಕ್ಸ್ ನೋಡಿ ಪುಟ 9).

ಜೈಲಿನಲ್ಲಿ ಅಸಹಕಾರ ಚಳುವಳಿಯಲ್ಲಿ ಭಾಗವಹಿಸಿದ್ದ ಹಲವು ರಾಜಕೀಯ ಬಂಧಿಗಳ ಸಂಪರ್ಕವಾಯಿತು. ಅವರ ತಂದೆ ಪತ್ರದಲ್ಲಿ ಸುರ್ಜಿತ್ ಹಿಡಿದಿರುವ ಹಾದಿಯಿಂದ ಹಿಂದೆ ಸರಿಯಬಾರದೆಂಬ ಆಶಯ ವ್ಯಕ್ತಪಡಿಸಿದ್ದರು. ಜೈಲಿನಲ್ಲಿ ಕಾಣಲು ಬಂದಿದ್ದ ತಾಯಿಯು ಯಾವುದೇ ದುಃಖ ಅಥವಾ ಕೋಪ ತೋರದೆ ಪ್ರೋತ್ಸಾಹದ ಮಾತುಗಳನ್ನಾಡಿದರು. ಇವೆಲ್ಲ ಅವರಿಗೆ ಬಂಡೆಗಲ್ಲಿನ ಶಕ್ತಿಕೊಟ್ಟು ಭವಿಷ್ಯದ ಹಾದಿಯಲ್ಲಿ ದಾಪುಗಾಲಿಡಲು ನೀರುಣಿಸಿದಂತೆ ಪೋಷಿಸಿದವು. ಅನುಭವಿಸಿದ ಆರ್ಥಿಕ ಸಂಕಷ್ಟ, ಸಾಮ್ರಾಜ್ಯಶಾಹಿ ಶಕ್ತಿಯ ಕಪಿಮುಷ್ಟಿ, ಸಾಮೂಹಿಕ ಜನತಾ ಶಕ್ತಿಯ ಸಂಕಲ್ಪ ಇವೆಲ್ಲವೂ ಸುರ್ಜಿತ್‌ರು ಸ್ವಾಭಾವಿಕವಾಗಿಯೇ ದುಡಿಯುವ ವರ್ಗದೊಂದಿಗೆ ವಿಲೀನವಾಗುವಲ್ಲಿ ಮಹತ್ತರ ಪಾತ್ರ ವಹಿಸಿದವು.

○

ಜನಶಕ್ತಿ ಕನ್ನಡ ವಾರಪತ್ರಿಕೆ

ಹಕ್ಕುಗಳು ಯಾರಿಗಾಗಿ ? ಜಾರಿಗಾಗಿ !

ಕನ್ನಡಿ



ಕೆ.ಎಸ್.ವಿಮಲ

ಒಂದು ಒಳ್ಳೆಯ-ಸಭೆ ಮುಗಿಸಿ, ಮುಂದಿನ 6 ತಿಂಗಳ ಚಟುವಟಿಕೆಗಳಿಗೆ ಅಡಿಪಾಯ ಹಾಕಿಕೊಂಡು ಬಹಳ ಹುಮ್ಮಸ್ಸಿನಿಂದ ಗೆಳತಿಯೊಬ್ಬಳ ಜೊತೆ ಬಸ್ಸು ಹತ್ತಿದೆ. ಸೀಟುಗಳು ಭರ್ತಿ. ಒಂದು ಮೀಸಲು ಸೀಟಿನಲ್ಲಿ ಪುರುಷನೋರ್ವ ಕುಳಿತಿದ್ದ. ಸಹಜವಾಗಿ ಸಾರ್ ಲೇಡಿಸ್ ಸೀಟು ಬಿಡ್ತೀರಾ? ಕೇಳಿದೆವು.

ಕಿವುಡನ ತರಹ ಕುಳಿತೇ ಇದ್ದ. ಮತ್ತೆ ಕೇಳಿದೆವು. ಯಾಕ್ರೀ ಬಿಡಬೇಕು. ಇದು ನಿಮ್ ಸೀಟ್ ಅಲ್ಲ ಅಂದ. ಮೇಲೆ ಬರೆದ ಚಿತ್ರ ತೋರಿಸಿ ಮತ್ತೆ ಕೇಳಿದೆವು. ಎಂತಹ ಅಪರಾಧ. ಮಹಿಳೆಯರು ಬಂದು ಪುರುಷನ ಬಳಿ ಸೀಟು ಕೊಡಲು ಕೇಳುವುದೇ. ಅವನು ನಿರಾಕರಿಸಿದ ಮೇಲೂ ಮತ್ತೆ ಒತ್ತಡ ಹೇರುವುದೇ ಅಕ್ಷಮ್ಯ ಅಪರಾಧ! ಗಂಡಸು ಜಾತಿಗೆ, ಪುರುಷನ ಪೌರುಷಕ್ಕೆ ಮಾಡಿದ ಅವಮಾನವೆಂಬಂತೆ ಬಸ್ಸಿನಲ್ಲಿದ್ದ ಎಲ್ಲ ಗಂಡಸರೂ ಒಮ್ಮೇಲೇ ಮೇಲೆ ಬೀಳುವುದೇ! ಸ್ವಾಮೀ, ಕಾನೂನಿದೆ ನೀವು ಬಿಡದಿದ್ದಲ್ಲಿ-ಚಾಲಕರಿಗೆ ಪೋಲೀಸ್ ಸ್ಟೇಷನ್‌ಗೆ ತೆಗೆದುಕೊಂಡು ಹೋಗಲು ಹೇಳದೇ ಬೇರೆ ದಾರಿ ಇಲ್ಲ ಎಂದಿದ್ದೇ. ಎಲ್ಲ ಪುರುಷ ಶಿರೋಮಣಿಗಳೂ ವಾಚಾನುಗೋಚರ ಬೈಯ್ಯಲು ಪ್ರಾರಂಭಿಸಿದರು. ಅಲ್ಲ, ಬದುಕಿಡೀ ಸುಖವನ್ನೇ ಅನುಭವಿಸುವ ಇರಾದೆಯಿಂದಲೇ ಇರುವ ಇವರಿಗೆ ಇಷ್ಟು ಧ್ವನಿ ಇದ್ದರೆ ಹೋರಾಟದ ಮೂಲಕ ಪಡೆದ ಹಕ್ಕು ಸಾಧಿಸಿಕೊಳ್ಳಲು ಹಠ ನಮಗೆ ಬಾರದೇ? ಬಿಡದೇ ಆ ವ್ಯಕ್ತಿಯನ್ನು ಏಳಿಸಿದೆವು. ಆದರೆ ಹಿಂದೆ ಕುಳಿತ ಗಂಡಸರು ಆಡುತ್ತಿದ್ದ ಕುಹಕದ ಮಾತುಗಳು ವ್ಯವಸ್ಥೆಯ ಕನ್ನಡಿಯಾಗಿತ್ತು. ಕನಿಷ್ಠ ನಾಗರಿಕ ಪ್ರಜ್ಞೆಯೂ ಇಲ್ಲದ ಪುರುಷ ದರ್ಪದ ಪ್ರತೀಕವಾಗಿತ್ತು. ಆ ಪುರುಷನ ಪಕ್ಕದಲ್ಲಿ ಕುಳಿತಿದ್ದ ಮಹಿಳೆ ಕೂಡ ನಮ್ಮನ್ನೇ ಸುಮ್ಮನಿರಲು ಹೇಳುತ್ತಿದ್ದಳೇ ಹೊರತು ಇವರ ಪರವಾಗಿ ನಾನೂ ಯಾಕೆ ಮಾತನಾಡಬಾರದು ಎಂದುಕೊಳ್ಳಲಿಲ್ಲ. ಆ ವ್ಯಕ್ತಿ ಎದ್ದ ಮೇಲೆ ನಿಧಾನವಾಗಿ ಹೇಳುತ್ತಾಳೆ. ನಾನು ಬಸ್ಸು ಹತ್ತಿದಾಗಲೇ ಅವರಿಗೆ ಹೇಳಿದೆ. ಹಿಂದೆ ಸೀಟಿದೆ ಹೋಗಿ ಕುಳಿತುಕೊಳ್ಳಿ ಎಂದು. ಆತ ನನಗೇ ದಬಾಯಿಸಿದ ಎಂದು!

ಹೇಗೆ ಬಂತು ಬಸ್‌ನಲ್ಲಿ 4+4 ಸೀಟು

ಬೆಳಗಿನ ಗಡಿಬಿಡಿಯ ಸಮಯ. ಅಡುಗೆ ಮನೆಯಿಂದ ವರಾಂಡಕ್ಕೆ ಅದೆಷ್ಟು ಬಾರಿ ಸುತ್ತಿರುತ್ತಾಳೋ ಮಹಿಳೆ ಲೆಕ್ಕವಿಲ್ಲ. ಅದರಲ್ಲೂ ಉದ್ಯೋಗಕ್ಕಾಗಿ ಹೊರಗೆ ಹೋಗಬೇಕಾದವಳ ಪಾಡಂತೂ ಕೇಳುವುದೇ ಬೇಡ. ಅಡುಗೆ, ತಿಂಡಿ, ಗಂಡ ಅಥವಾ ಮನೆಯಿಂದ ಹೊರಗೆ ಹೋಗುವ, ಮನೆಯಲ್ಲೇ ವಿರಾಮವಾಗಿ ಇರುವ ಗಂಡಸರ ಬೆಳಗಿನ ಅಗತ್ಯಗಳಿಗೆ ಬೇಕಾದ ವಸ್ತುಗಳನ್ನು ಪೂರೈಸಿ, ಶಾಲೆ/ಕಾಲೇಜುಗಳಿಗೆ ಹೋಗುವ ಮಕ್ಕಳಿದ್ದರೆ ಅವರ ಪುಸ್ತಕ, ಬ್ಯಾಗು, ಸಮವಸ್ತ್ರ ಇತ್ಯಾದಿಗಳ ಜೊತೆ ತನ್ನ ಊಟದ ಡಬ್ಬಿ ಇತರರ ಊಟದ ಡಬ್ಬಿ- ಅಯ್ಯೋ...... ಅಯ್ಯೋ..... ಪಟ್ಟಿ ಹನುಮಂತನ ಬಾಲದಂತೆ. ಇಷ್ಟೆಲ್ಲ ಮುಗಿಸಿ ಕಛೇರಿಯಲ್ಲಿ ಮೇಲಾಧಿಕಾರಿಗಳ ಕೆಟ್ಟ ಕಣ್ಣಿಗೆ ಆಹಾರವಾಗಬಾರದೆಂದರೆ ಸಮಯಕ್ಕೆ ಸರಿಯಾಗಿ ಕಛೇರಿಗೆ ಸೇರಿಸಿಕೊಳ್ಳಲೇಬೇಕು. ಕುಳಿತು ವಿರಾಮದಲ್ಲಿ ಊಟ, ತಿಂಡಿ, ಕೊನೆಗೆ ಒಂದು ಕಪ್ ಕಾಫಿ.... ಅದು ಕನಸಿನಲ್ಲೂ ಸಾಧ್ಯವಿಲ್ಲದ ಮಾತೇ. (ಇದು ಇಂದಿಗೂ ಬಹುಪಾಲು ಮಹಿಳೆಯರ ಜೀವನ ಕ್ರಮ)

ಹಾಗೆಂದೇ ಅರೆಬರೆ ಬಾಚಿಕೊಂಡ ತಲೆಯ ಹೆರಳು ಹಾಕಿಕೊಳ್ಳುತ್ತಲೇ ಉಸಿರುಕಟ್ಟಿಕೊಂಡು ಓಡಿಬಂದು ಬಸ್ ಹತ್ತಿದರೆ- ಸುಖವಾಗಿ ಮನೆಯಲ್ಲಿ ಹೊಟ್ಟೆ ಭರ್ತಿ ಊಟ ಮಾಡಿ ಎಲೆ ಅಡಿಕೆ ಮೆಲ್ಲುತ್ತ ಮುಂದಿನ ಸೀಟಿಯಲ್ಲಿಯೇ ವಿರಾಜಮಾನರಾಗಿ ಬಸ್ಸಿನಲ್ಲಿ ನೇತಾಡಿಕೊಂಡು ಪ್ರಯಾಣ ಮಾಡುವ ಮಹಿಳೆಯರನ್ನು ಉದ್ದ-ಅಗಲಕ್ಕೆ ಕಣ್ಣಿನಿಂದಲೂ ಅಳೆಯುವ ಪುರುಷ ಶಿರೋಮಣಿಗಳು. ಇವು ಬಹಳ ವರ್ಷಗಳ ಕಾಲ ನಿರಂತರವಾಗಿ ನಮ್ಮ ಕಣ್ಣಿಗೆ ಕಾಣುತ್ತಿದ್ದ ಸಂಗತಿ.

ಎಷ್ಟು ದಿನ ಯಾರಾದರೂ ಸಹಿಸಿಕೊಳ್ಳಲು ಸಾಧ್ಯ. ಕಾರಣ ಬೆಳಗಿನ ಗಡಿಬಿಡಿಯಲ್ಲಿ ಮಾತ್ರ ಅಲ್ಲ, ಸಂಜೆ ಬರುವಾಗಲೂ ಕಛೇರಿಯಲ್ಲಿ ಕೆಲಸದ ಸಮಯ ಪುರುಷ ಮಹಿಳೆ ಇಬ್ಬರಿಗೂ ಒಂದೇ. ಹಾಗಾಗಿ ಕಛೇರಿಯಿಂದ ಹೊರಬೀಳುವುದು ಒಟ್ಟಿಗೇ ಆದರೂ, ನುಗ್ಗಿ ಬಸ್ಸು ಹತ್ತಿ ಖಾಲಿ ಬಸ್ಸಿನಲ್ಲಿ ಕೂಡ ಮುಂದಿನ ಸೀಟುಗಳಲ್ಲೇ ಸುಖಾಸೀನರಾಗುವ ಮಹಾಶಯರಿಗೇನೂ ಕೊರತೆ ಇರಲಿಲ್ಲ. ಕಛೇರಿಯ ಜನರಿಗೆ ಮಾತ್ರವಲ್ಲ ಉಳಿದಂತೆ ಪ್ರಯಾಣಿಸುವ ನಾಗರೀಕರಿಗೂ ಈ ಕಿರಿಕಿರಿಗಳು ತಪ್ಪಿದ್ದಲ್ಲ. ದಟ್ಟ ಜನಸಂದಣಿಯ ಬಸ್ಸುಗಳಲ್ಲಿ, ಉದ್ದೇಶಪೂರ್ವಕವಾಗಿ ಮೈ-ಕೈ ತಾಗಿಸಿ ಕೀಳು ತೃಷೆ ತೀರಿಸಿಕೊಳ್ಳುವವರ ಮಧ್ಯದಲ್ಲಿ ಸಂಚಾರ ಮಾಡುವುದೇ ಒಂದು ದೊಡ್ಡ ಸಾಹಸವಾಗಿತ್ತು. ಹಾಗೆಂದೇ ಕರ್ನಾಟಕದಲ್ಲಿಯೂ ಪ್ರಾರಂಭವಾಯಿತು, ಮಹಿಳೆಯರಿಗೆ ಪ್ರತ್ಯೇಕ ಆಸನ ಬಸ್ಸುಗಳಲ್ಲಿ ಕಡ್ಡಾಯವಾಗಿ ಕೊಡಲೇಬೇಕು ಎಂಬ ಹೋರಾಟ. ಅಂದು ಮಹಿಳೆಯರು ಮಾತ್ರ ಮಾಡಿದ ಹೋರಾಟವೇನಲ್ಲ.; ಸಮಾನತೆಯ ಕಲ್ಪನೆಯ ಜ್ಯೋತಿಗೆ ಎಣ್ಣೆಯಾಗುವ ದೊಡ್ಡ ಪುರುಷ ವರ್ಗ ನಮ್ಮ ಜೊತೆ ಇದೆ. ಪ್ರಾರಂಭದಲ್ಲಿ ಹೋರಾಟವನ್ನು ಬೆಂಬಲಿಸಿದವರಿಗಿಂತ ಅವಹೇಳನ ಮಾಡಿದವರೇ ಹೆಚ್ಚು. ನಿರಂತರ ಪ್ರಯತ್ನದ ಫಲವಾಗಿ ಅಂತೂ ಕೊನೆಗೆ ಬಂತು ಕಾನೂನು. ಮುಂದಿನ ಎರಡೂ ಪಕ್ಕದ ನಾಲ್ಕು ಸೀಟುಗಳು ಮಹಿಳೆಯರಿಗೆ ಮೀಸಲು ಎಂದು. ಆಸನದ ಮೇಲ್ಭಾಗಕ್ಕೆ ಮಹಿಳೆಯರಿಗೆ ಎಂದು ಬರೆಯುವ ಮಹಿಳೆಯ ಚಿತ್ರ ಬಿಡಿಸುವ ಹೀಗೆ ಒಟ್ಟಿನಲ್ಲಿ ಅದು ಮಹಿಳೆಯರಿಗಾಗಿ ಮೀಸಲಿಟ್ಟ ಜಾಗವೆಂದು ನೋಡಿದ ತಕ್ಷಣ ತಿಳಿಯುವಂತೆ ಮಾಡುವ ಪ್ರಯತ್ನಗಳಾದವು. ಸರ್ಕಾರಿ ಆದೇಶವೇನೋ ಬಂತು. ಅಷ್ಟು ಸುಲಭವಾಗಿ ಮನಃಸ್ಥಿತಿಗಳು, ಧೋರಣೆಗಳು ಬದಲಾಗಲು ಸಾಧ್ಯವೇ? ಸ್ವಲ್ಪ ಧೈರ್ಯ, ಧ್ವನಿ ಇರುವ ಮಹಿಳೆಯರು ಕುಳಿತ ಪುರುಷರಿಗೆ ಸೀಟು ಬಿಟ್ಟುಕೊಡುವಂತೆ ಕೇಳಿದರೆ ಮಹಾಪರಾಧ ಮಾಡಿದವರಂತೆ ಎಲ್ಲ ಪುರುಷರು ಒಟ್ಟಿಗೇ ಧ್ವನಿ ಏರಿಸುವುದು. ಒಬ್ಬ ಮಹಿಳೆ ಧ್ವನಿ ಎತ್ತಿದರೆ ನಾವೂ ಬೆಂಬಲಿಸೋಣ ಎಂಬ ಭಾವನೆಯೇ ಇಲ್ಲದಂತೆ ಅವಳನ್ನೇ ತಪ್ಪಿತಸ್ಥಳೆಂಬಂತೆ ನೋಡುವ ಪ್ರಯಾಣಿಕರು. ಬಾಯಿ ಇದ್ದವರು ಬದುಕಿದರು ಎನ್ನುವ ಹಾಗೆ ನಡೆಯುತ್ತಲೇ ಇದೆ ಈಗಲೂ. ಈ ಮಧ್ಯದಲ್ಲಿ ಚಾಲಕರು, ನಿವಾಹಕರು ತಮಗದು ಸಂಬಂಧವೇ ಇಲ್ಲದಂತೆ ಸ್ಥಿತಪ್ರಜ್ಞರಾಗಿದ್ದುಬಿಡುವುದು ಅಥವಾ ಮಹಿಳೆಗೇ ಸುಮ್ಮನಿರಲು ಹೇಳುವುದು ಸಾಮಾನ್ಯ ಸಂಗತಿ. ಕ್ರಮೇಣ ಬೆಂಗಳೂರಿನಂತಹ ನಗರದಲ್ಲಿ ಸ್ವಲ್ಪ ಬದಲಾವಣೆಯ ಗಾಳಿ ಬೀಸಿದಂತಹ ಅನುಭವ. ಪ್ರತಿನಿತ್ಯ ಬಸ್ಸಿನಲ್ಲಿ ಪ್ರಯಾಣಿಸುವ ನಮ್ಮಂತಹವರಿಗಾದಾಗ ಅಬ್ಬಾ. ಶಾಸನಸಭೆಯಲ್ಲಿ ಅವಕಾಶ ಸಿಗುವ ದಿನ ದೂರವಿದ್ದರೇನಂತೆ. ಬಸ್ಸಿನಲ್ಲಿಯಾದರೂ ಹೋರಾಟದ ಮೂಲಕ ಪಡೆದುಕೊಂಡೆವಲ್ಲ ಎಂಬ ಸಾರ್ಥಕತೆಯ ಭಾವನೆ ಸುಳಿದಿತ್ತೆನ್ನುವುದನ್ನು ಒಪ್ಪಿಕೊಳ್ಳಲು ಸಂಕೋಚವಿಲ್ಲ.

ಆದರೆ ಪುರುಷ ಪ್ರಧಾನ ಮೌಲ್ಯಗಳು ಎಷ್ಟು ಆಳವಾಗಿ ಬೇರೂರಿದೆ ಎಂದರೆ ಈಗಲೂ- ಸರ್ಕಾರದ ಆದೇಶ ಜಾರಿಗೆ ಬಂದು 10-12 ವರ್ಷಗಳೇ ಕಳೆದ ಮೇಲೆ ಆದೇಶದ ಪ್ರಕಾರ - ಮಹಿಳೆಯರಿಗೆ ಮೀಸಲಿಟ್ಟ ಸ್ಥಳದಲ್ಲಿ ಪುರುಷರು ಕುಳಿತುಕೊಳ್ಳುವಂತಿಲ್ಲ.

ಒಂದೊಮ್ಮೆ ಕುಳಿತರೂ ಮಹಿಳೆಯರು ಬಂದಾಗ ಎದ್ದುಬಿಟ್ಟುಕೊಡಲೇಬೇಕು.

ಹಾಗೊಮ್ಮೆ ಮಾಡದಿದ್ದಲ್ಲಿ ನಿರ್ವಾಹಕರ ಕರ್ತವ್ಯದ ಭಾಗ

ಮಹಿಳೆಯರಿಗೆ ಸ್ಥಳ ಬಿಡಿಸಿಕೊಡುವುದೂ ಕೂಡ.

ಅದಕ್ಕೂ ಜಗ್ಗದಿದ್ದಲ್ಲಿ ಚಾಲಕರು ಸಮೀಪದ ಪೋಲೀಸ್ ಸ್ಟೇಷನ್‌ಗೆ ಬಸ್ಸನ್ನು ತೆಗೆದುಕೊಂಡು ಹೋಗಬೇಕು ಮತ್ತು ತಪ್ಪಿತಸ್ಥ ಪ್ರಯಾಣಿಕರನ್ನು ಪೋಲೀಸರಿಗೆ ಒಪ್ಪಿಸಬೇಕು. ಇದು ಪ್ರಥಮ ಹಂತದ ಆದೇಶ. ಅನುಭವದ ಆಧಾರದಲ್ಲಿ ಕೆಲವು ವರ್ಷಗಳ ನಂತರ ಮತ್ತಷ್ಟು ಬಿಗಿಗೊಳಿಸಿ ಸ್ಕ್ವಾಡ್‌ಗಳನ್ನು ರಚಿಸಿ, ಸ್ಥಳದಲ್ಲಿಯೇ 50/- ರೂ.ಗಳ ದಂಡ ವಿಧಿಸುವವರೆಗೂ ಆದೇಶ ನೀಡಲಾಯಿತು. ಇಷ್ಟೆಲ್ಲದರ ನಂತರವೂ ನಾನು ಪುರುಷ. ನನ್ನನ್ನೇನು ಕೇಳುವುದು ಎನ್ನುವ ಧೋರಣೆಗೆ ಮೇಲಿನ ಘಟನೆ ನಿಜ ಸಾಕ್ಷಿ ಇದರ ಜೊತೆ ಚಾಲಕ/ ನಿರ್ವಾಹಕರಿಬ್ಬರೂ ತಮಗೆ ಇಂತಹ ಆದೇಶ, ಕಾನೂನುಗಳ ಕುರಿತು ಏನೂ ಗೊತ್ತಿಲ್ಲ ಎಂದು ಹೇಳುವುದೇ? ಯಾಕೆ, ಈ ಸಮಾಜ ಮಹಿಳೆಯರ ಕುರಿತು ಇನ್ನಷ್ಟು ಆರೋಗ್ಯ ಪೂರ್ಣವಾಗಿ ಯೋಚಿಸಬಾರದು? ಸರ್ಕಾರ ಮತ್ತು ಸಮಾಜ ಒಟ್ಟಿಗೇ ಸೇರಿದಾಗ ಮಾತ್ರ ಒಂದು ಪರಿವರ್ತನೆ ಬರಲು ಸಾಧ್ಯ. ಕೇವಲ ಕಾನೂನು ರಚಿಸಿ, ನಿಯಮಗಳನ್ನು ಸೂಚಿಸಿದರೆ ಸಮಸ್ಯೆ ಪರಿಹಾರವಾಗದು. ○

ಯುಪಿಎ ಹಾಗೂ ಕೋಮುವಾದಿಗಳ ವಿರುದ್ಧ ಹೋರಾಟ

ಪುಟ 6 ರಿಂದ

ಗುಂಪು(ಎನ್‌ಎಸ್‌ಜಿ)ಗಳಲ್ಲಿ ಅಣುಒಪ್ಪಂದವನ್ನು ಮುಂದೆ ತಳ್ಳುವ ಕೆಲಸದಲ್ಲಿ ನಿರತವಾಗಿದೆ. ಸರ್ಕಾರವು, ಹಲವು ಮಂತ್ರಿಗಳು ಇಂದು ಈ ಕೆಲಸದಲ್ಲಿ ನಿರತವಾಗಿದ್ದಾರೆ.

ಒಂದು ಕಡೆ ಕೃಷಿ ಬಿಕ್ಕಟ್ಟು ತೀವ್ರಗೊಂಡಿದೆ. ರೈತರು ಗ್ರಾಮೀಣ ಬಡವರು - ಭಾರಿ ಸಂಕಷ್ಟದಲ್ಲಿದ್ದಾರೆ. ಅದೇ ಸಮಯದಲ್ಲಿ ದೇಶದ ಹಿತಾಸಕ್ತಿಗಳಿಗೆ ಹಾಗೂ ರೈತರಿಗೆ ಗಂಭೀರ ಹಾನಿ ಮಾಡು 'ನಾಮ' (NAMA-Non Agricultural Market Access) -ಅಂದರೆ ಕೃಷಿಯೇತರ ಮಾರುಕಟ್ಟೆ ಪ್ರವೇಶಾಧಿಕಾರ) ವನ್ನು ಹಾಗೂ ವಿಶ್ವವ್ಯಾಪಾರ ಸಂಘಟನೆಯ ಕೃಷಿ ಒಪ್ಪಂದವನ್ನು ಒಪ್ಪಿಕೊಳ್ಳುವಂತೆ ಅಮೇರಿಕಾದ ಅಧ್ಯಕ್ಷ ಬುಷ್ ಮನಮೋಹನ್‌ಸಿಂಗ್‌ಗೆ ಒತ್ತಾಯಿಸುತ್ತಿದ್ದಾರೆ.

ಈಗ ಅಣು ಒಪ್ಪಂದಕ್ಕೆ ಏನಾಗುತ್ತದೆ?

ಈ ಒಪ್ಪಂದದ ವಿರುದ್ಧದ ಹೋರಾಟವು ಇನ್ನೂ ಮುಗಿದಿಲ್ಲ. ಐಎಇಎಯೊಂದಿಗಿನ ಸುರಕ್ಷಾ ಒಪ್ಪಂದದ ದಾಖಲೆಗಳು ಸರ್ಕಾರ ತಾನು ಈ ವಿಷಯದಲ್ಲಿ ಏನೆಲ್ಲಾ ಸಾಧಿಸಿದ್ದೇನೆ ಎಂದು ಹೇಳಿಕೊಳ್ಳುತ್ತಿದೆಯೋ ಹಾಗೇನೂ ಇಲ್ಲ ಎಂಬುದನ್ನು ಜಗಜ್ಜಾಹೀರುಗೊಳಿಸಿದೆ.

ಭಾರತವು ಅಣು ಇಂಧನ ಪೂರೈಕೆದಾರರ ಗುಂಪಿನಿಂದ ವಿನಾಯಿತಿ ಪಡೆದರೂ, ಅಮೇರಿಕಾದ ಕಾಂಗ್ರೆಸ್ ಅಂಗೀಕರಿಸಿರುವ ಹೈಡ್ ಕಾಯ್ದೆಯ ನಿಯಮಗಳ ನಿರ್ಬಂಧಕ್ಕೆ ಗುರಿಯಾಗುತ್ತದೆ. ಇದಾದ ಮೇಲೆ ಸಹ ಭಾರತ ಸರ್ಕಾರವು ಅಣು ಒಪ್ಪಂದ ಜಾರಿಗೆ ಅಂತಿಮ ಹೆಜ್ಜೆ ಇಡುವ ಮುನ್ನ ಅಮೇರಿಕಾದ ಕಾಂಗ್ರೆಸ್ 123 ಒಪ್ಪಂದಕ್ಕೆ ಅಂಗೀಕಾರ ನೀಡಬೇಕಾಗುತ್ತದೆ. ಅಣು ಒಪ್ಪಂದ ಜಾರಿಯನ್ನು ತಡೆಯುವ ಹೋರಾಟವನ್ನು ಈ ಎಲ್ಲಾ ಹಂತಗಳಲ್ಲೂ ಮುಂದುವರಿಯಬೇಕಾಗುತ್ತದೆ.

ಎಡಪಕ್ಷಗಳು ಆರಂಭಿಸಿರುವ ಆಂದೋಲನವು ಭಾರತದ ಹಿತಾಸಕ್ತಿಗಳನ್ನು ಅಮೇರಿಕಾದ ಸರ್ಕಾರಕ್ಕೆ ಶರಣಾಗಿಸುವ, ಹಾಗೂ ಬೆಲೆ ಏರಿಕೆಯ ವಿರುದ್ಧ ಅಗತ್ಯ ಕ್ರಮಗಳನ್ನು ಕೈಗೊಳ್ಳುವುದಕ್ಕೆ ನಿರಾಕರಿಸುವುದು ಮತ್ತಿತರ ಜನ ವಿರೋಧಿ ನೀತಿಗಳ ವಿರುದ್ಧ ಜನರನ್ನು ಸೆಳೆಯುತ್ತಿದೆ. ಹೀಗೆ ಜನರನ್ನು ಅಣಿ ನೆರೆಸುವಾಗಲೇ ಎಡಪಕ್ಷಗಳು ಬಿಜೆಪಿಯ ಕೋಮುವಾದಿ ಅಜೆಂಡಾವನ್ನು ಎದುರಿಸಲು ದೃಢವಾದ ಹೆಜ್ಜೆಗಳನ್ನಿಡುತ್ತಿವೆ.

ಬಿಜೆಪಿಯು ಅದು ಅಮರನಾಥ ಜಮೀನು ವಿವಾದ ಅಥವಾ ಸೇತು ಸಮುದ್ರಂ ವಿವಾದ ಅಥವಾ ಇತ್ತೀಚಿನ ಭಯೋತ್ಪಾದಕರ ಸರಣಿ ಬಾಂಬ್ ಸ್ಫೋಟ ಯಾವುದೇ ವಿಷಯ ಇರಲಿ ಕೋಮುಭಾವನೆ ಕೆರಳಿಸಿ ಜನರನ್ನು ಮತೀಯಭಾವನೆ ಆಧಾರದಲ್ಲಿ ವಿಭಜಿಸಿ ಕೋಮುವಾದಿ ಧೃವೀಕರಣ ಸಾಧಿಸಲು ಪ್ರಯತ್ನಿಸುತ್ತಿದೆ. ○

'ಬೆಲೆ' ತೆರುತ್ತಿರುವ ಭಾರತೀಯರು.....

ಪುಟ 5 ರಿಂದ

ಅದು ನಿಜವೂ ಆಗಿದೆ. ಅನೇಕ ದೇಶಗಳು ಇಂದು ಹಣದುಬ್ಬರದಿಂದ ತತ್ತರಿಸುತ್ತಿವೆ. ಜಾಗತಿಕ ಮಟ್ಟದ ಈ ಹಣದುಬ್ಬರಕ್ಕೆ ಮುಖ್ಯವಾಗಿ ಆಹಾರ ಪದಾರ್ಥಗಳ ಬೆಲೆ ಏರಿಕೆಗೆ ಜಾಗತೀಕರಣದ ಭಾಗವಾಗಿರುವ ನವ ಉದಾರೀಕರಣ ನೀತಿಗಳೇ ಕಾರಣವಾಗಿವೆ. ಜಾಗತಿಕ ಹಣದುಬ್ಬರ ದಾಪುಗಾಲು ಹಾಕುತ್ತಿರುವುದಕ್ಕೆ ಅನೇಕ ಕಾರಣಗಳಿವೆ. ತೈಲ ಬೆಲೆಗಳ ಏರಿಕೆ ಎಲ್ಲಾ ಸರಕುಗಳ ಬೆಲೆ ಏರಿಕೆಗೆ ಕಾರಣವಾಗಿದೆ. ಆಹಾರ ಧಾನ್ಯ ಬೆಳೆಯುವುದನ್ನು ಕಡಿಮೆ ಮಾಡಿರುವುದು, ಮತ್ತು ಅಮೇರಿಕಾ, ಯುರೋಪ್, ಬ್ರೆಜಿಲ್ ಮೊದಲಾದ ದೇಶಗಳಲ್ಲಿ ಆಹಾರ ಧಾನ್ಯ ಮತ್ತು ವನಸ್ಪತಿಗಳನ್ನು ಜೈವಿಕ ಇಂಧನವನ್ನು ತಯಾರಿಸಲು ಹೆಚ್ಚೆಚ್ಚಾಗಿ ಬಳಸುತ್ತಿರುವುದರಿಂದ ಆಹಾರ ಉತ್ಪಾದನೆ ಕುಸಿಯುವಂತಾಗಿದೆ. ಕೃಷಿ ಕ್ಷೇತ್ರದಲ್ಲಿ, ಮುಖ್ಯವಾಗಿ ನೀರಾವರಿ, ಉತ್ಪಾದಕತೆ ಹೆಚ್ಚಿಸುವ ತಂತ್ರಜ್ಞಾನ ಮೊದಲಾದ ಕ್ಷೇತ್ರಗಳಲ್ಲಿ ಸರ್ಕಾರಗಳು ಸಾರ್ವಜನಿಕ ಹೂಡಿಕೆಯನ್ನು ಕಡಿತಮಾಡುತ್ತಿರುವುದು ಇನ್ನೊಂದು ಕಾರಣವಾಗಿದೆ. ಕೃಷಿ ಉತ್ಪನ್ನಗಳನ್ನು ಸರ್ಕಾರಗಳೇ ಖರೀದಿ ಮಾಡಿ ವಿತರಣೆ ಮಾಡುವ ಜವಾಬ್ದಾರಿಯನ್ನು ಕೈಬಿಟ್ಟಿರುವುದು, ಆಹಾರ ಉತ್ಪಾದನೆ ಮತ್ತು ಅದರ ವ್ಯಾಪಾರದಲ್ಲಿ ಹೆಚ್ಚುತ್ತಿರುವ ಖಾಸಗಿ ಕಂಪನಿಗಳ ಪ್ರಾಬಲ್ಯ ಮತ್ತು ನಿಯಂತ್ರಣ, ಗ್ರಾಹಕ ಮಾರುಕಟ್ಟೆಯಲ್ಲಿ 'ಮುಂಗಡ ಖರೀದಿ' ವ್ಯಾಪಾರದ ಮೂಲಕ ಹೆಚ್ಚುತ್ತಿರುವ ಜೂಜುಕೋರ ಪ್ರವೃತ್ತಿ ಮುಂತಾದವುಗಳನ್ನು ಪ್ರೋತ್ಸಾಹಿಸುತ್ತಿರುವ ನವ ಉದಾರೀಕರಣದ ಧೋರಣೆಗಳೇ ಈ ಅನಾಹುತಕ್ಕೆ ಕಾರಣವಾಗಿವೆ. ಯುಪಿಎ ಸರ್ಕಾರ ಈ ದಿವಾಳಿಕೋರ ನೀತಿಗಳಿಗೆ ಜೋತುಬಿದ್ದಿದೆ. ನವ ಉದಾರೀಕರಣದ ನೀತಿಗಳನ್ನು ವಿಶ್ವ ಮಟ್ಟದಲ್ಲಿ ಮತ್ತು ನಮ್ಮ ರಾಷ್ಟ್ರ ಮಟ್ಟದಲ್ಲಿ ಹಿಮ್ಮೆಟ್ಟಿಸದೆ ಹಣದುಬ್ಬರದ ಸಮಸ್ಯೆಗೆ ಪರಿಹಾರವಿಲ್ಲ.

ನವ ಉದಾರೀಕರಣದ ವಕ್ತಾರರು ಹಣದುಬ್ಬರದ ಈ ಸಮಸ್ಯೆಗೆ ಸೂಚಿಸುವ ಚಿಕಿತ್ಸೆ ಕಾಯಿಲೆಗಿಂತ ಹೆಚ್ಚು ಅಪಾಯಕಾರಿಯಾಗಿವೆ.

ನವ ಉದಾರೀಕರಣದ ಸಮರ್ಥಕರು ಹಣದುಬ್ಬರವನ್ನು ನಿಯಂತ್ರಿಸಲು ಸರ್ಕಾರದ ವೆಚ್ಚಗಳನ್ನು ಕಡಿತಮಾಡಬೇಕೆಂದು ಸೂಚಿಸುತ್ತಾರೆ. ಮಾರುಕಟ್ಟೆಯಲ್ಲಿ ಬೇಡಿಕೆಯನ್ನು ತಗ್ಗಿಸುವ ನೀತಿಯನ್ನು ಅನುಸರಿಸಬೇಕು ಎಂದು ಹೇಳುತ್ತಾರೆ. ಬೇಡಿಕೆಯನ್ನು ಮಿತಿಗೊಳಿಸುವುದರಿಂದ ಬೆಳವಣಿಗೆಗೆ ಪೆಟ್ಟು ಬೀಳುತ್ತದೆ ಎಂಬುದನ್ನು ಅವರು ಕಡೆಗಣಿಸುತ್ತಾರೆ. ಬ್ಯಾಂಕ್ ಬಡ್ಡಿದರ ದರ ಹೆಚ್ಚಿಸಬೇಕು, ಸಾಲ ದೊರೆಯುವುದರ ಮೇಲೆ ನಿರ್ಬಂಧ ಹೇರಬೇಕು ಎಂದು ಸಲಹೆ ಮಾಡುತ್ತಾರೆ. ಉದಾರೀಕರಣದ ನೀತಿಗಳ ಅನುಷ್ಠಾನದಿಂದಾಗಿ ಬೃಹತ್ ಬಹುರಾಷ್ಟ್ರೀಯ ಕಂಪನಿಗಳು ಭಾರತವನ್ನು ಪ್ರವೇಶಿಸಿದ್ದು ಮತ್ತು ಆ ಮೂಲಕ ಭಾರತದ ಆರ್ಥಿಕ ವಲಯದಲ್ಲಿ ಹಣದ ಹರಿವು ಹಿಂದೆಂದೂ ಕಾಣದಷ್ಟು ಹೆಚ್ಚಾಗಿರುವುದನ್ನು ಉದಾರೀಕರಣ ಪರವಾಗಿರುವ ಈ ಲಾಬಿ ವ್ಯವಸ್ಥಿತವಾಗಿ ಮರೆಮಾಡುತ್ತದೆ.

ಸರ್ಕಾರ ಮಾಡಬೇಕಾದದ್ದು ಏನು?

ಒಟ್ಟು ಆಂತರಿಕ ಉತ್ಪನ್ನ (ಜಿಡಿಪಿ) ದ ತೀವ್ರ ಬೆಳವಣಿಗೆಯ ಹಿನ್ನೆಲೆಯಲ್ಲಿ ಕೆಲಮಟ್ಟಿಗೆ ಹಣದುಬ್ಬರ ಅನಿವಾರ್ಯ ಎಂದು ಕೇಂದ್ರ ಸರ್ಕಾರ ಹಣದುಬ್ಬರವನ್ನು ಸಮರ್ಥಿಸುತ್ತಿದೆ. ಜಾಗತಿಕ ಹಣದುಬ್ಬರದ ಮರೆಯಲ್ಲಿ, ಬೆಲೆ ಏರಿಕೆಯನ್ನು ತಡೆಯುವಲ್ಲಿ ತನ್ನ ವಿಫಲತೆಯನ್ನು ಅದು ಮರೆಮಾಚಲು ಯತ್ನಿಸುತ್ತಿದೆ. ಬೆಲೆ ಏರಿಕೆಯನ್ನು ತಡೆಗಟ್ಟುವಲ್ಲಿ ಅವರ ನಿಷ್ಕ್ರಿಯತೆ ಅವರ ಧೋರಣೆಯ ಭಾಗವಾಗಿದೆ. ಬೆಲೆ ಏರಿಕೆಯನ್ನು ತಡೆಗಟ್ಟುವಲ್ಲಿ ಸರ್ಕಾರದ ಮಧ್ಯಪ್ರವೇಶವೆಂದರೆ ಅದು ಮುಕ್ತ ಮಾರುಕಟ್ಟೆಯಲ್ಲಿ ಸರ್ಕಾರದ ಆಕ್ಷೇಪಾರ್ಹ ಹಸ್ತಕ್ಷೇಪ ಎಂದು ಅದು ಪರಿಗಣಿಸುತ್ತದೆ.

ಬೆಲೆ ಏರಿಕೆಯನ್ನು ತ್ವಡೆಗಟ್ಟಲು ಸರ್ಕಾರ ಮೊತ್ತಮೊದಲು ಮಾಡಬೇಕಾದದ್ದು ಸಾರ್ವಜನಿಕ ರೇಷನ್ ವ್ಯವಸ್ಥೆಯನ್ನು ಸಾರ್ವತ್ರಿಕಗೊಳಿಸುವುದು,

ಈ ಆರ್ಥಿಕ ತಜ್ಞ ಮನಮೋಹನ್‌ಸಿಂಗ್ ಅವರೇ ಆಗಿರಬಹುದೇ?



ಒಬ್ಬ ಅರ್ಥಶಾಸ್ತ್ರಜ್ಞನಾಗಿ ಹಣದುಬ್ಬರ ಇಳಿಸೋದಕ್ಕೆ ನನ್ನ ಸಲಹೆ ಏನೂಂದ್ರೆ, ಮೊದ್ಲಿಗೆ ಜೀವನಾವಶ್ಯಕ ವಸ್ತುಗಳ ಬೆಲೆಗಳನ್ನು ಯದ್ವಾತದ್ವಾ ಏರಿಸಿ ಬಿಡಿ. ಜನ್ರು ಕೊಳ್ಳೋದನ್ನು ಬಿಟ್ಬಿಡ್ತಾರೆ. ಸಹಜವಾಗ್ಲೇ ಬೆಲೆಗಳು ಇಳೀತವೆ.

ಸರ್ವತೋಮುಖ ಬೆಲೆ ಏರಿಕೆಯಿಂದಾಗಿ ಆಹಾರ ಭದ್ರತೆ ಒಂದು ಪ್ರಮುಖ ಸಮಸ್ಯೆಯಾಗಿದೆ. ಆಹಾರ ಸಬ್ಸಿಡಿ ಕಡಿತ ಮಾಡುವುದು ಮತ್ತು ಸಾರ್ವಜನಿಕ ರೇಷನ್ ವ್ಯವಸ್ಥೆಯನ್ನು ಕಳಚಿ ಹಾಕುವುದೇ ಸರ್ಕಾರದ ನವ ಉದಾರೀಕರಣದ ನೀತಿಯಾಗಿದೆ. 1965-1990 ರ ನಡುವೆ ನಮ್ಮ ರೇಷನ್ ವ್ಯವಸ್ಥೆ ಹೆಚ್ಚು ಕಡಿಮೆ ಸರಿಯಾಗಿಯೇ ಇತ್ತು. 1990 ರ ನಂತರ ಆಹಾರ ಸಬ್ಸಿಡಿಯನ್ನು ಕಡಿತ ಮಾಡಲಾಯಿತು. ಅಲ್ಲದೆ ರೈತರಿಗೆ ಬೆಂಬಲ ಬೆಲೆ ನೀಡಿ ಅವರಿಂದ ಆಹಾರ ಧಾನ್ಯಗಳನ್ನು ಖರೀದಿ ಮಾಡಿ ಸಂಗ್ರಹಿಸಿ ಇಡುವುದನ್ನು ಕಡಿತ ಮಾಡಲಾರಂಭಿಸಲಾಯಿತು. 1997 ರಲ್ಲಿ ಟಾರ್ಗೆಟಿಂಗ್ ಪದ್ಧತಿಯನ್ನು ಆರಂಭಿಸಲಾಯಿತು. ಬಡತನ ರೇಖೆ ಕೆಳಗೆ ಹಾಗೂ ಬಡತನ ರೇಖೆ ಮೇಲೆ ಎಂಬ ಅಸಂಬದ್ಧ ವರ್ಗೀಕರಣವನ್ನು ಆರಂಭಿಸಲಾಯಿತು. ಇದು ಸಾರ್ವಜನಿಕ ರೇಷನ್ ವ್ಯವಸ್ಥೆಯನ್ನು ಬಂದ್ ಮಾಡುವುದರ ಆರಂಭದ ಕ್ರಮ. ಇದು ಐಎಂಎಫ್, ವಿಶ್ವಬ್ಯಾಂಕ್ ಹಾಗೂ ವಿಶ್ವ ವ್ಯಾಪಾರ ಸಂಘಟನೆಗಳ ಅಂತಿಮ ಉದ್ದೇಶವಾಗಿದೆ. ಅವುಗಳ ಪ್ರಕಾರ ಸರ್ಕಾರ ಜಾಗತಿಕ ಬೆಲೆಗಳಿಗಿಂತ ಭಿನ್ನವಾದ ಬೆಲೆಗಳಿಗೆ ಏನನ್ನೂ ಕೊಂಡುಕೊಳ್ಳಕೂಡದು ಮತ್ತು ಏನನ್ನೂ ಮಾರಾಟ ಮಾಡಕೂಡದು.

ಸರ್ಕಾರದ ಈ ನವ ಉದಾರೀಕರಣ ನೀತಿಗಳು ಆಹಾರ ಧಾನ್ಯಗಳ ಉತ್ಪಾದನೆಯ ಮೇಲೂ, ಸಾರ್ವಜನಿಕ ರೇಷನ್ ವ್ಯವಸ್ಥೆಯ ಮೇಲೂ ದುಷ್ಪರಿಣಾಮಗಳನ್ನು ಬೀರಿವೆ. ತಕ್ಷಣದ ಕ್ರಮವಾಗಿ ಎಲ್ಲರಿಗೂ ರೇಷನ್ ಕಾರ್ಡುಗಳನ್ನು ವಿತರಿಸಲು ಸರ್ಕಾರ ಕ್ರಮ ಕೈಗೊಳ್ಳಬೇಕು. ಶ್ರೀಮಂತರು, ಬಡವರು ಎಂಬ ಬೇಧ ಅಗತ್ಯವಿಲ್ಲ. ರೇಷನ್ ಕಾರ್ಡುಗಳನ್ನು ಬಡವರಿಗೆ ಮಾತ್ರಕೊಡುವ ಹೆಸರಿನಲ್ಲಿ ಅವುಗಳನ್ನು ಅನುಕೂಲಸ್ಥರಿಗೇ ಕೊಡುವುದು ಹೆಚ್ಚು. ಎಲ್ಲರಿಗೂ ರೇಷನ್ ಕಾರ್ಡ್ ವಿತರಣೆ ಮಾಡಿದರೆ ಯಾವುದೇ ದುರುಪಯೋಗಕ್ಕೆ ಅವಕಾಶ ಇರುವುದಿಲ್ಲ. ಇದಕ್ಕಾಗಿ ಕೇಂದ್ರ ಸರ್ಕಾರ ಆಹಾರ ಸಬ್ಸಿಡಿಯನ್ನು ಹೆಚ್ಚಿಸಬೇಕಾಗುವುದು. ರಾಜ್ಯಗಳಿಗೆ ಅಗತ್ಯ ಪ್ರಮಾಣದಲ್ಲಿ ಆಹಾರ ಧಾನ್ಯಗಳನ್ನು ಒದಗಿಸಬೇಕು. ಇದು ಸಾಧ್ಯವಾಗಬೇಕಾದರೆ ಆಹಾರ ಧಾನ್ಯ ಬೆಳೆಯಲು ರೈತರಿಗೆ ಅಧಿಕ ಪ್ರೋತ್ಸಾಹ ನೀಡಬೇಕು. ಅವರಿಗೆ ಗರಿಷ್ಟ ಬೆಂಬಲ ಬೆಲೆ ನೀಡಿ ಆಹಾರ ಧಾನ್ಯಗಳನ್ನು ಖರೀದಿ ಮಾಡಿ, ಭಾರತ ಆಹಾರ ನಿಗಮದ ಉಗ್ರಾಣಗಳಲ್ಲಿ ದಾಸ್ತಾನು ಮಾಡಿ ರಾಜ್ಯಗಳಿಗೆ ಒದಗಿಸಬೇಕು.

ಅಕ್ಕಿಯನ್ನು ನಮ್ಮ ದೇಶದ ಎಲ್ಲಾ ರಾಜ್ಯಗಳಲ್ಲಿಯೂ ಜನ ಬಳಕೆ ಮಾಡುತ್ತಾರೆ. ಅಕ್ಕಿಯನ್ನು ಅತಿ ಕಡಿಮೆ ಬೆಲೆಗೆ ಒದಗಿಸಲು ಸಾಧ್ಯವಾಗಬೇಕು. ತಮಿಳುನಾಡಿನಲ್ಲಿ 2 ರೂ. ಗೆ ಕೆ.ಜಿ. ಅಕ್ಕಿ ಕೊಡಲಾಗುತ್ತದೆ. ಕೇರಳದ ಎಡರಂಗ ಸರ್ಕಾರ 3 ರೂ. ಗೆ ಕೆ.ಜಿ. ಅಕ್ಕಿ ರೇಷನ್‌ನಲ್ಲಿ ನೀಡುತ್ತದೆ. ಕೇಂದ್ರ ಸರ್ಕಾರಕ್ಕೆ ಇದು ಅಸಾಧ್ಯವೇನಲ್ಲ. ರೇಷನ್‌ನಲ್ಲಿ ಅಕ್ಕಿ ಮಾತ್ರ ಒದಗಿಸಿದರೆ ಸಾಲದು, ಅಕ್ಕಿ ಜೊತೆಯಲ್ಲಿ ಗೋಧಿ, ಜೋಳ, ರಾಗಿ, ಬೇಳೆ, ಖಾದ್ಯ ತೈಲ, ಸಕ್ಕರೆ, ಸೀಮೆ ಎಣ್ಣೆ ಮೊದಲಾದ ಅಗತ್ಯ ವಸ್ತುಗಳನ್ನು ರಿಯಾಯ್ತಿ ದರಗಳಲ್ಲಿ ಒದಗಿಸಬೇಕು. ಇಂತಹ ಕ್ರಮಗಳಿಂದ ಬೆಲೆ ಏರಿಕೆಯಿಂದ ತತ್ತರಿಸಿದ ವಿವಿಧ ವಿಭಾಗಗಳ ಜನಗಳಿಗೆ ಸ್ವಲ್ಪ ಪರಿಹಾರ ಒದಗಿಸಲು ಸಾಧ್ಯ.

ಎರಡನೆಯದಾಗಿ, ಬೆಲೆ ಏರಿಕೆಯನ್ನು ತಡೆಗಟ್ಟಲು ಅಕ್ರಮ ದಾಸ್ತಾನುದಾರರ ಹಾಗೂ ಕಾಳಸಂತೆಕೋರರ ವಿರುದ್ಧ ಕಠಿಣ ಕ್ರಮ ಜರುಗಿಸಬೇಕು. ಸರ್ಕಾರ ಅಗತ್ಯ ವಸ್ತುಗಳ ವ್ಯಾಪಾರದಲ್ಲಿ ದೊಡ್ಡ ದೊಡ್ಡ ಖಾಸಗಿ ಕಂಪನಿಗಳಿಗೆ ಪ್ರವೇಶ ನೀಡಿರುವುದರಿಂದ ಕಾಳಸಂತೆಕೋರರ ಪಿಡುಗು ಹೆಚ್ಚಾಗಿದೆ. ಬೃಹತ್ ಪ್ರಮಾಣದ ಬಂಡವಾಳ ಹೊಂದಿರುವ ಈ ಕಂಪನಿಗಳು, ತಾವು ಖರೀದಿ ಮಾಡಿದ್ದನ್ನು ಬೇಕಾದಷ್ಟು ದಿನ ಮಾರುಕಟ್ಟೆಗೆ ಬಿಡುಗಡೆ ಮಾಡದೆ ಮಾರುಕಟ್ಟೆಯಲ್ಲಿ ಕೃತಕ ಅಭಾವವನ್ನು ಸೃಷ್ಟಿಸಿ, ಬೆಲೆಗಳು ಅಲ್ಲೋಲಕಲ್ಲೋಲವಾಗಲು ಕಾರಣವಾಗುತ್ತಾರೆ. ಪ್ರಭಾವಿ ರಾಜಕಾರಣಿಗಳು ಇವರ ರಕ್ಷಣೆಗೆ ನಿಲ್ಲುತ್ತಾರೆ. ಅಗತ್ಯ ವಸ್ತುಗಳ ಕಾಯ್ದೆಯನ್ನು ಬಲಪಡಿಸಿ, ರಾಜ್ಯ ಸರ್ಕಾರಗಳಿಗೆ ಹೆಚ್ಚಿನ ಅಧಿಕಾರ ನೀಡುವ ಮೂಲಕ ಅಕ್ರಮ ದಾಸ್ತಾನುದಾರರನ್ನು ಮತ್ತು ಕಾಳಸಂತೆಕೋರರನ್ನು ನಿಯಂತ್ರಿಸಲು ಸರ್ಕಾರ ಮುಂದಾಗಬೇಕು.

ಮೂರನೆಯದಾಗಿ, ಕೃಷಿ ಉತ್ಪನ್ನಗಳ ವ್ಯಾಪಾರದಲ್ಲಿ 'ಮುಂಗಡ ಖರೀದಿ'(ವಾಯಿದಾ ವಹಿವಾಟು) ಯನ್ನು ನಿಷೇಧಿಸಬೇಕು. 1952 ರ ಮುಂಗಡ ಗುತ್ತಿಗೆ ನಿಯಂತ್ರಣ ಕಾಯ್ದೆ ಅಡಿಯಲ್ಲಿ ಭಾರತದಲ್ಲಿ ಮುಂಗಡ ಖರೀದಿ ವ್ಯಾಪಾರವನ್ನು ನಿಷೇಧಿಸಲಾಗಿತ್ತು. ಉದಾರೀಕರಣ ನಂತರದ ದಿನಗಳಲ್ಲಿ ಈ ನಿಷೇಧವನ್ನು ಸಡಿಲುಗೊಳಿಸಲಾಯಿತಾದರೂ ಗೋಧಿ, ಅಕ್ಕಿ, ದ್ವಿದಳ ಧಾನ್ಯಗಳು, ಖಾದ್ಯ ತೈಲ ಮತ್ತು ಸಕ್ಕರೆಯಂತಹ ಅಗತ್ಯ ವಸ್ತುಗಳ ವ್ಯಾಪಾರದಲ್ಲಿ ಈ ನಿಷೇಧ ಮುಂದುವರೆಯಿತು. ಆದರೆ 2003 ರಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರ ಎಲ್ಲ ನಿಷೇಧಗಳನ್ನು ವಾಪಸ್ ಪಡೆದು ಮುಂಗಡ ಖರೀದಿಯನ್ನು ಸಾರ್ವತ್ರಿಕಗೊಳಿಸಿತು. ಯುಪಿಎ ಸರ್ಕಾರ ಇದೇ ನೀತಿಯನ್ನು ಮುಂದುವರೆಸಿತು. ಅಗತ್ಯ ವಸ್ತುಗಳ ಬೆಲೆಗಳು ಗಗನಕ್ಕೇರುತ್ತಿರಲಾರಂಭಿಸಿದಾಗ ಮುಂಗಡ ಖರೀದಿ ವ್ಯಾಪರ ತೀವ್ರ ಚರ್ಚೆಗೆ ಒಳಗಾಯಿತು. ಎಡಪಕ್ಷಗಳು ಅದನ್ನು ಮೊದಲಿನಿಂದಲೇ ತೀವ್ರವಾಗಿ ವಿರೋಧಿಸುತ್ತಾ ಬಂದಿದ್ದವು. ಎಡಪಕ್ಷಗಳ ಒತ್ತಡಕ್ಕೆ ಮಣಿದ ಸರ್ಕಾರ ಗೋಧಿ, ಅಕ್ಕಿ ಮತ್ತು ಬೇಳೆ ವ್ಯಾಪಾರದಲ್ಲಿ ಮುಂಗಡ ಖರೀದಿಯನ್ನು ನಿಷೇಧಿಸಿತು. ಅಲ್ಲದೇ ಈ ಪ್ರಶ್ನೆಯನ್ನು ಪರಿಶೀಲಿಸಲು ಸಂಸದೀಯ ಸಮಿತಿಯೊಂದನ್ನು ರಚಿಸಿತು. ಸಮಿತಿಯು 25 ಕೃಷಿ ಉತ್ಪನ್ನಗಳ ವ್ಯಾಪಾರದಲ್ಲಿ ಮುಂಗಡ ಖರೀದಿಯನ್ನು ನಿಷೇಧಿಸಲು ಶಿಫಾರಸ್ಸು ಮಾಡಿದೆ. ಸರ್ಕಾರ ವಿಳಂಬ ಮಾಡದೆ ಈ ಶಿಫಾರಸ್ಸನ್ನು ಅಂಗೀಕರಿಸಿ ಜಾರಿಗೆ ತರಬೇಕು.

ನಾಲ್ಕನೆಯದಾಗಿ, ಆಮದು ಆಗುತ್ತಿರುವ ಪೆಟ್ರೋಲಿಯಂ ಉತ್ಪನ್ನಗಳ ಮೇಲೆ ಹೇರಲಾಗುತ್ತಿರುವ ಆಮದು ತೆರಿಗೆ ಮತ್ತು ಅಬಕಾರಿ ಸುಂಕಗಳನ್ನು ಕಡಿತ ಮಾಡಬೇಕು ಹಾಗೂ ಪೆಟ್ರೋಲ್/ ಡೀಸೆಲ್ ಚಿಲ್ಲರೆ ದರಗಳನ್ನು ಕಡಿತ ಮಾಡಬೇಕು. ಪೆಟ್ರೋಲಿಯಂ ಉತ್ಪನ್ನಗಳ ಬೆಲೆ ಏರಿಕೆಯೇ ಎಲ್ಲ ಅಗತ್ಯ ವಸ್ತುಗಳ ಬೆಲೆ ಏರಿಕೆಗೆ ಒಂದು ಪ್ರಮುಖ ಕಾರಣವಾಗಿದೆ. ಅಂತಾರ್ರಾಷ್ಟ್ರೀಯ ಮಾರುಕಟ್ಟೆಯಲ್ಲಿ ತೈಲ ಬೆಲೆಗಳು ಏರುತ್ತಾ ಹೋದಂತೆ ಸರ್ಕಾರಕ್ಕೆ ಆಮದು ತೆರಿಗೆ ಹಾಗೂ ಅಬಕಾರಿ ತೆರಿಗೆಗಳ ಮೂಲಕ ಬರುವ ಆದಾಯ ಹೆಚ್ಚುತ್ತಲೇ ಇರುತ್ತದೆ. ಆಮದು ಮಾಡಲಾಗುತ್ತಿರುವ ತೈಲದ ಮೇಲೆ ಹಾಕುವ ತೆರಿಗೆಗಳನ್ನು ಒಂದು ಪ್ರಮಾಣದಲ್ಲಿ ಕಡಿತ ಮಾಡಿದರೂ ಸರ್ಕಾರಕ್ಕೆ ಬರುವ ಆದಾಯ ಕಡಿಮೆ ಆಗುವುದಿಲ್ಲ. ಸರ್ಕಾರ ಈ ಸಲಹೆಯನ್ನು ಪದೇ ಪದೇ ತಿರಸ್ಕರಿಸುತ್ತಾ, ಪೆಟ್ರೋಲ್ / ಡೀಸೆಲ್ ಚಿಲ್ಲರೆ ದರಗಳನ್ನು ಏರಿಸುತ್ತಾ ಜನಸಾಮಾನ್ಯರ ಮೇಲೆ ಬೆಲೆ ಏರಿಕೆಯ ಹೊರೆಯನ್ನು ಹೇರುತ್ತಾ ಬಂದಿದೆ. ಸರ್ಕಾರ ಸುಂಕಗಳನ್ನು ಕಡಿಮೆ ಮಾಡುವ ಮೂಲಕ ಬೆಲೆ ಏರಿಕೆಯಿಂದ ತತ್ತರಿಸುತ್ತಿರುವ ಜನಗಳಿಗೆ ಕೊಂಚ ಮಟ್ಟದ ಪರಿಹಾರ ನೀಡಲು ಸಾಧ್ಯವಿದೆ.

ಜಗದಗಲ


ಶರತ್‌ಚಂದ್ರ

ದೋಹಾ ಮಾತುಕತೆ ಮುರಿದು ಬಿತ್ತು

'ಒಂಬತ್ತು ದಿನಗಳ ಬಿರುಸಿನ ಮಾತುಕತೆ-ಚೌಕಾಶಿಗಳ ನಂತರ ದೋಹಾ ಸುತ್ತು' ಎಂದು ಕರೆಯಲಾಗುವ ವಿಶ್ವ ವ್ಯಾಪಾರದ ಬಗ್ಗೆ ಡಬ್ಲ್ಯೂ.ಟಿ.ಒ. ಸಂಘಟಿಸಿದ ಮಾತುಕತೆ, ಯಾವುದೇ ಒಪ್ಪಂದಕ್ಕೆ ಬರದೆ ಮುರಿದು ಬಿದ್ದಿದೆ. ಕಳೆದ ವಾರ ಜಿನೀವಾದಲ್ಲಿ ಡಬ್ಲ್ಯೂ.ಟಿ.ಒ. 'ಮಿನಿ ಮಂತ್ರಿ ಶೃಂಗಸಭೆ' ಯಲ್ಲಿ ನಡೆಸಲಾದ ನಿರ್ಣಾಯಕ ಮಾತುಕತೆಗಳಲ್ಲಿ 40 ದೇಶಗಳ ವಾಣಿಜ್ಯ ಮಂತ್ರಿಗಳು ಭಾಗವಹಿಸಿದ್ದರು. ಏಳು ವರ್ಷಗಳಿಂದ ನಡೆಯುತ್ತಿರುವ ಈ ಸುತ್ತಿನ ಬಹುಪಕ್ಷೀಯ ವಾಣಿಜ್ಯ ಮಾತುಕತೆಗಳು, ತಮ್ಮ ಲಾಭದ ಬಗ್ಗೆ ತಮ್ಮ ಮೂಗಿಗೆ ನೇರಾಗಿ ಮಾತ್ರ ಯೋಚಿಸುವ, ಬಡ ದೇಶಗಳ ಕಾಳಜಿಯನ್ನು ನಿರ್ಲಕ್ಷಿಸುವ ಶ್ರೀಮಂತ ದೇಶಗಳ ಉಧ್ದಟತನದಿಂದಾಗಿ ಮುರಿದು ಬೀಳುತ್ತಿವೆ. ಈ ಬಾರಿಯೂ ಆದದ್ದು ಅದೇ.

ಕೃಷಿ ಉತ್ಪನ್ನಗಳ ಆಮದು ತಮ್ಮ ರೈತರ ಜೀವನೋಪಾಯಕ್ಕೆ ಅಪಾಯ ತರದಂತೆ ಅಗತ್ಯ 'ವಿಶೇಷ ಭದ್ರತಾ ಕ್ರಮ' ಗಳನ್ನು ಕೈಗೊಳ್ಳಲು ಬಡದೇಶಗಳಿಗೆ ಅವಕಾಶ ಕೊಡುವುದು ಮಾತುಕತೆ ಮುರಿದು ಬೀಳಲು ಕಾರಣವಾದ ಮುಖ್ಯ ವಿಷಯ. ಅಮೆರಿಕದ ನಾಯಕತ್ವದಲ್ಲಿ ಶ್ರೀಮಂತ ದೇಶಗಳು ಈ ಕ್ರಮ ತಮ್ಮ ಕೃಷಿಕ್ಷೇತ್ರದ ಲಾಭ ಮತ್ತು ವಿಸ್ತಾರಕ್ಕೆ ಪ್ರತಿಕೂಲವಾದ ಕ್ರಮ ಎಂದವು. ಚೀನಾ ಮತ್ತು ಭಾರತದ ನಾಯಕತ್ವದಲ್ಲಿ ಬಡ ದೇಶಗಳು ಇದು ತಮ್ಮ ರೈತರ ಜೀವನೋಪಾಯದ ಮತ್ತು ಉಳಿವಿನ ಪ್ರಶ್ನೆ ಎಂದವು.

ಹೀಗೆ ಎಂದಿನಂತೆ ಶ್ರೀಮಂತ ದೇಶಗಳ ದೈತ್ಯ ಕೃಷಿ ವ್ಯಾಪಾರ ಕಂಪನಿಗಳ ಲಾಭ (ಅಥವಾ ಸೂಪರ್



ಲಾಭ) ಮತ್ತು ಬಡದೇಶಗಳ ಬಡ ರೈತರ ಅಳಿವು-ಅಳಿವು ಇವೆಡರ ನಡುವಿನ ವೈರುಧ್ಯ ಡಬ್ಲ್ಯೂ.ಟಿ.ಒ. ವನ್ನು ಕಾಡುತ್ತಿದೆ. ಡಬ್ಲ್ಯೂ.ಟಿ.ಒ. ಆರಂಭವಾದದ್ದೇ (90 ರ ದಶಕದಲ್ಲಿ ಯುರೋಪಿನ ಸಮಾಜವಾದಿ ದೇಶಗಳ ಕುಸಿತದ ಹಿನ್ನೆಲೆಯಲ್ಲಿ) ಈ ವೈರುಧ್ಯವನ್ನು ಶ್ರೀಮಂತ ದೇಶಗಳ ಪರವಾಗಿ ಪರಿಹರಿಸಲು. ಈಗ ಜಾರಿಯಲ್ಲಿರುವ ವ್ಯಾಪಾರ ಒಪ್ಪಂದದ ನಿಯಮಗಳ ಸಾರ ಅದೇ. ಇಂದಿನ ಜಾಗತಿಕ ಆಹಾರ ಮತ್ತು ಆರ್ಥಿಕ ಬಿಕ್ಕಟ್ಟಿಗೆ ಅದು ಕಾರಣ ಕೂಡ. ಬದಲಾದ ಅಂತರ್ರಾಷ್ಟ್ರೀಯ ಪರಿಸ್ಥಿತಿ, ತೀವ್ರ ಆಹಾರ ಬಿಕ್ಕಟ್ಟು, ಬಡವರ-ವಿರೋಧಿ ವ್ಯಾಪಾರ ಒಪ್ಪಂದಗಳ ಬಗ್ಗೆ ಬಡರೈತರಲ್ಲಿ ಮೂಡಿರುವ ತಿಳುವಳಿಕೆ - ಇವೆಲ್ಲದರ ಒಟ್ಟಾರೆ ಸಂದರ್ಭದಲ್ಲಿ ಬಡದೇಶಗಳಸರ್ಕಾರಗಳು ಬಲವಾದ ಚೌಕಾಶಿಗೆ ಇಳಿದಿವೆ.

ದೋಹಾ ಮಾತುಕತೆಯಲ್ಲಿ 'ಹಠಮಾರಿತನ' ತೋರಿಸಿದರೆ ಅಣು ಒಪ್ಪಂದಕ್ಕೆ ಧಕ್ಕೆಯಾದೀತು ಎಂಬ ಅಮೆರಿಕನ್ ಬೆದರಿಕೆಯ ಹಿನ್ನೆಲೆಯಲ್ಲೂ ಭಾರತದ ಪ್ರತಿನಿಧಿ ವಾಣಿಜ್ಯ ಮಂತ್ರಿ ಕಮಲನಾಥ್ ಧೃಢತೆ ತೋರಿದ್ದಾರೆ. ಆದರೆ ಅದಕ್ಕೆ ಮೇಲೆ ಹೇಳಿದ ಒಟ್ಟಾರೆ ಸಂದರ್ಭ ಕಾರಣ. 'ರೈತರ ಜೀವನೋಪಾಯ ರಕ್ಷಣೆಗೆ ಕಟಿಭಧ್ಧವಾದ' ಸರ್ಕಾರದ ಧೃಢ ಧೋರಣೆ ಕಾರಣವಲ್ಲ. ಈ 'ಕಟಿಭಧ್ಧತೆ' ಎಷ್ಟು ಸಾಚಾ ಎಂಬುದು ಎಲ್ಲರಿಗೂ ತಿಳಿದದ್ದೇ. ಭಾರತ ಅಮೆರಿಕನ್ ಬೆದರಿಕೆಗೆ ಮಣಿದು ಒಪ್ಪಿದರೂ ದೋಹಾ ಮಾತುಕತೆ ಮುರಿದು ಬೀಳುವಂಥದ್ದೇ ಎಂಬುದು ಸಕಾರಕ್ಕೆ ಗೊತ್ತಿತ್ತು. ಅಣು ಒಪ್ಪಂದ್ಕೆ ಸರ್ಕಾರವನ್ನೇ ಬಲಿ ಕೊಡಲು ತಯಾರಿದ್ದ ಆಳುವ ಪಕ್ಷ ದೋಹಾ ಮಾತುಕತೆಯಲ್ಲಿ ಅಮೆರಿಕದ 'ಅಣತಿ' ಪಾಲಿಸಲು ಹಿಂದೆ ಮುಂದೆ ನೋಡುತ್ತಿರಲಿಲ್ಲ. ಆದರೆ ಒಟ್ಟಾರೆ ಸಂದರ್ಭ ಅದಕ್ಕೆ ಪೂರಕವಾಗಿರಲಿಲ್ಲ ಅಷ್ಟೇ.

ತುರ್ಕಿಯಲ್ಲಿ ಜಾತ್ಯತೀತತೆ ಮತ್ತು ಕೋಮುವಾದದ ನಡುವೆ ಹೊಸ ಘರ್ಷಣೆ

ತುರ್ಕಿಯಲ್ಲಿ ಜಾತ್ಯತೀತತೆ ಮತ್ತು ಕೋಮುವಾದದ ವಿರುದ್ಧ ಹೊಸ ಸುತ್ತಿನ ಘರ್ಷಣೆ ಆರಂಭವಾಗಿದೆ. ಈಗಿನ ಆಳುವ ಪಕ್ಷ ಎ.ಕೆ.ಪಿ. ಮೂಲತಃ (ಆಳುವ ಪಕ್ಷ ವಾಗಿ ಅದನ್ನು ಬಹಳಷ್ಟು ತೆಳುಗೊಳಿಸಿ ದ್ದರೂ) ಇಸ್ಲಾಮಿಕ್ ಮೂಲಭೂತವಾದಿ ಪಕ್ಷ. ಅದು 2002 ರಿಂದ ಅಧಿಕಾರದಲ್ಲಿದೆ. ತುರ್ಕಿಯಲ್ಲಿ ಕೆಮಾಲ್ ಅತಾತುರ್ಕ ಸ್ಥಾಪಿಸಿದ ಪ್ರಬಲ ಜಾತ್ಯತೀತ, ಪ್ರಜಾಸತ್ತಾತ್ಮಕ ಪರಂಪರೆ ಇದೆ. , ಅದನ್ನು ಸಂವಿಧಾನದಲ್ಲಿ ವಿಧಿಸಲಾಗಿದೆ. ಇತ್ತೀಚೆಗೆ ಎ.ಕೆ.ಪಿ. ಜಾತ್ಯತೀತ ಸಂವಿಧಾನವನ್ನು ದುರ್ಬಲಗೊಳಿಸುವ ಮತ್ತು ಹಂತ ಹಂತವಾಗಿ ಶರೀಯತ್ ಕಾನೂನುಗಳನ್ನು ತರುವ ಪ್ರಯತ್ನ ಮಾಡುತ್ತಿದೆ ಎಂಬ ತೀವ್ರ ಗುಮಾನಿ ಮತ್ತು ಆಪಾದನೆ ಇತ್ತು. ಹೆಂಗಸರು ಇಸ್ಲಾಮಿಕ್ ತಲೆವಸ್ತ್ರ ಬಳಸುವುದರ ಮೇಲೆ ಇದ್ದ ನಿಷೇಧ ತೆಗೆಯಲು ಸಂವೈಧಾನಿಕ ತಿದ್ದುಪಡಿ, ಆಹಾರ ನಿಯಮಗಳಲ್ಲಿ ಇಸ್ಲಾಮಿಕ್ 'ಹಲಾಲ್ ನಿಯಮ' ಗಳನ್ನು ಸೇರಿಸದ್ದು, ಸರ್ಕಾರಿ ಶಾಲೆಗಳಲ್ಲಿ ಹೆಚ್ಚುತ್ತಿರುವ ಇಸ್ಲಾಮಿಕ್ ಧಾರ್ಮಿಕ ಶಿಕ್ಷಣ, ಇಸ್ಲಾಮಿಕ್ ಶರೀಯತ್ ಕಾನೂನಿನ ಛತ್ರದಡಿಯಲ್ಲಿ ಕೆಲವು ಮುಸ್ಲಿಂ ದೇಶಗಳೊಂದಿಗೆ ಉಭಯತ್ರ ಒಪ್ಪಂದಗಳು - ಇವು ಈ ಆಪಾದನೆಗೆ ಕಾರಣವಾದವು.

ಇಸ್ಲಾಮಿಕ್ ತಲೆವಸ್ತ್ರ ಬಳಸುವುದರ ಮೇಲೆ ಇದ್ದ ನಿಷೇಧ ತೆಗೆಯಲು ಆಳುವ ಪಕ್ಷ ತಂದ ಸಂವೈಧಾನಿಕ ತಿದ್ದುಪಡಿಯನ್ನು ಸಂವೈಧಾನಿಕ ಕೋರ್ಟು ತಳ್ಳಿ ಹಾಕುವುದರೊಂದಿಗೆ ಹೊಸ ಸುತ್ತಿನ ಘರ್ಷಣೆ ಆರಂಭವಾಯಿತು. ತುರ್ಕಿಯಲ್ಲಿ ಜಾತ್ಯತೀತತೆ ಮತ್ತು ಧಾರ್ಮಿಕ ಮೂಲಭೂತವಾದದ ನಡುವೆ ಘರ್ಷಣೆಯಲ್ಲಿ ಜನವಿಭಾಗಗಳು ಮತ್ತು ಅವರನ್ನು ಪ್ರತಿನಿಧಿಸುವ ರಾಜಕೀಯ ಪಕ್ಷಗಳ ನಡುವೆ ಮಾತ್ರವಲ್ಲ ಎರಡು ಕ್ಯಾಂಪುಗಳು ಆಗಿರುವುದು. ತುರ್ಕಿಯ ಪ್ರಭುತ್ವದಲ್ಲೂ ಎರಡು ಕ್ಯಾಂಪುಗಳು ಆಗಿದೆ ಎನ್ನುವುದು ತುರ್ಕಿಯ ವಿಶಿಷ್ಟತೆ. ಸರ್ಕಾರ ಧಾರ್ಮಿಕ ಮೂಲಭೂತವಾದದ ಕ್ಯಾಂಪಿನಲ್ಲಿದೆ. ಆದರೆ ನ್ಯಾಯಾಂಗ, ಮಿಲಿಟರಿ ಮತ್ತು ಕಾರ್ಯಾಂಗದ ದೊಡ್ಡ ವಿಭಾಗ ಜಾತ್ಯತೀತತೆಯ ಕ್ಯಾಂಪಿನಲ್ಲಿದೆ.

ಪ್ರಧಾನ ಸರ್ಕಾರಿ ಪ್ರೊಸಿಕ್ಯುಟರ್ ಆಳುವ ಪಕ್ಷ ಎ.ಕೆ.ಪಿ. ವಿರುದ್ಧ ಸಂವಿಧಾನಕ್ಕೆ ವಿರುದ್ಧವಾಗಿ ಜಾತ್ಯತೀತತೆ ದುರ್ಬಲಗೊಳಿಸಿ, ಶರೀಯತ್ ನ್ನು ಹಿಂಬಾಗಿಲಿಂದ ತರುವ ಪ್ರಯತ್ನ ಮಾಡುತ್ತಿದೆ ಎಂದು ಆಪಾದಿಸಿದರು. ಮಾತ್ರವಲ್ಲ ಆ ಬಗ್ಗೆ ಸಂವೈಧಾನಿಕ ಕೋರ್ಟಿನಲ್ಲಿ ಎ.ಕೆ.ಪಿ. ವಿರುದ್ಧ ಕೇಸನ್ನೂ ದಾಖಲಿಸಿದರು. ಆಳುವ ಪಕ್ಷ ಎ.ಕೆ.ಪಿ.ಯನ್ನು ಈ ಅಪರಾಧಕ್ಕೆ ನಿಷೇದಿಸಿ ಅದರ 71 (ಈಗಿನ ಪ್ರಧಾನಿ ಮತ್ತು ಅಧ್ಯಕ್ಷರು ಸೇರಿದಂತೆ) ಉನ್ನತ ನಾಯಕರನ್ನು ರಾಜಕೀಯದಲ್ಲಿ ಭಾಗವಹಿಸುವುದರಿಂದ ನಿಷೇದಿಸಬೇಕು ಎಂದು ಅವರು ಕೋರಿದ್ದರು. ಇದನ್ನು ಕೋರ್ಟು ಒಪ್ಪಿದರೆ ತೀವ್ರ ರಾಜಕೀಯ ಬಿಕ್ಕಟ್ಟು ಉಂಟಾಗುತ್ತಿತ್ತು. ಕೇಸು ನಡೆಯುತ್ತಿದ್ದಂತೆ ಈ ಬಗ್ಗೆ ಸಾರ್ವಜನಿಕ ವಾದ-ವಿವಾದ ಜೋರಾಗಿ ನಡೆಯಿತು. ಇದು 'ನ್ಯಾಯಾಂಗದ ಕ್ಷಿಪ್ರಕ್ರಾಂತಿ' ಎಂದು ಆಳುವ ಪಕ್ಷ ಎ.ಕೆ.ಪಿ. ಆಪಾದಿಸಿತು. ಪ್ರೊಸಿಕ್ಯುಟರ್ ಅವರ ಆಪಾದನೆಗಳನ್ನು ನಿರಾಕರಿಸಿತು.

ಕೊನೆಗೂ ಸಂವೈಧಾನಿಕ ಕೋರ್ಟಿನ ತೀರ್ಪು ಬಂತು. ಒಂದು ಮತದ ಅಂತರದಿಂದ ಎ.ಕೆ.ಪಿ. ಮೇಲೆ ನಿಷೇಧ ಆಗಲಿಲ್ಲ. 11 ನ್ಯಾಯಾಧೀಶರ ಪೀಠದಲ್ಲಿ 6 ನ್ಯಾಯಾಧೀಶರು ಎ.ಕೆ.ಪಿ. ಮೇಲೆ ನಿಷೇಧ ಹೇರುವ ಪರವಾಗಿದ್ದರು. ಆದರೆ ಸಂವಿದಾನದ ಪ್ರಕಾರ ಕನಿಷ್ಟ 7 ನ್ಯಾಯಾಧೀಶರು ಬೆಂಬಲ ಬೇಕಾಗಿತ್ತು. ಎ.ಕೆ.ಪಿ.ಗೆ ಬೇರೆ ರೂಪದ ಶಿಕ್ಷೆಯನ್ನು ವಿಧಿಸಿತು. ಎ.ಕೆ.ಪಿ.ಗೆ ಚುನಾವಣೆ ವೆಚ್ಚಕ್ಕೆ ಸಾರ್ವಜನಿಕ ಬೊಕ್ಕಸದಿಂದ ಬರುವ ಸಹಾಯಧನದಲ್ಲಿ ಅರ್ಧದಷ್ಟು ಕಡಿತ ಮಾಡಿದೆ. ಸಂವಿಧಾನಕ್ಕೆ ವಿರುದ್ಧವಾಗಿ ಜಾತ್ಯತೀತತೆಯನ್ನು ದುರ್ಬಲಗೊಳಿಸುವ ಆಪಾದನೆಯನ್ನು ಎತ್ತಿ ಹಿಡಿದಿದೆ. ಸದ್ಯಕ್ಕೆ ರಾಜಕೀಯ ಬಿಕ್ಕಟ್ಟು ಬರದಿದ್ದರೂ, ಸರ್ಕಾರದ ಮೇಲೆ ಜಾತ್ಯತೀತತೆಯನ್ನು ದುರ್ಬಲಗೊಳಿಸುವುದರ ವಿರುದ್ಧ ತೀವ್ರ ಒತ್ತಡ ಹೆಚ್ಚಿದೆ.

ಹೈತಿ ಬಡವರಿಗೆ ಮಣ್ಣು ತಿನ್ನಿಸುತ್ತಿರುವ 'ಆಹಾರ ಬಿಕ್ಕಟ್ಟು'

ಹೈತಿ 'ಆಹಾರ ಬಿಕ್ಕಟ್ಟು' ಅತ್ಯಂತ ತೀವ್ರವಾಗಿ ತಟ್ಟಿರುವ ದೇಶ. ಅಂತರ್ರಾಷ್ಟ್ರೀಯ ಆಹಾರ ಬೆಲೆ ಏರಿಕೆಯಿಂದ ಪ್ರಧಾನವಾಗಿ ಆಹಾರ ಆಮದು ಮಾಡುವ ಹೈತಿಯ ಆಹಾರ ಬಜೆಟ್ ಶೇ.80 ರಷ್ಟು ಏರಿದೆ. ಆದ್ದರಿಂದ ಆಹಾರದ ಬೆಲೆ ಏರಿದೆ ಮತ್ತು ಲಭ್ಯತೆ ಸಹ ಕೈಗೆಟುಕದಂತೆ ಆಗಿದೆ. ಶೇ.67 ರಷ್ಟು ಕಡು ಬಡವರಿರುವ ಹೈತಿಯಲ್ಲಿ ಬಡವ'ರು ಮಣ್ಣು ತಿನ್ನಬೇಕಾಗಿದೆ. ಇದು ಆಲಂಕರಿಕ ಮಾತಲ್ಲ. ಹೈತಿಯ ಬಡವ'ರು ಅಕ್ಷರಶ: ಹೊಟ್ಟೆ ತುಂಬಿಸಲು 'ಮಣ್ಣಿನ ಬಿಸ್ಕತ್ತು' ತಿನ್ನುತ್ತಿದ್ದಾರೆ. 'ಮಣ್ಣಿನ ಬಿಸ್ಕತ್ತು' ಉತ್ಪಾದನೆ ಈಗ ಹೈತಿಯ[ll] ಬೆಳೆಯುತ್ತಿರುವ ಗುಡಿ ಕೈಗಾರಿಕೆ.

'ಮಣ್ಣಿನ ಬಿಸ್ಕತ್ತು' ಹಿಂದಿನಿಂದಲೂ ಹೈತಿಯ ಬಡವ'ರಿಗೆ ಪರಿಚಿತ ಆಹಾರ. ಬಡ ಗರ್ಭಿಣಿ ಮಹಿಳೆಯರು ಹೆಚ್ಚಿನ 'ಪೋಷಕಾಂಶ'ಕ್ಕೆ 'ಮಣ್ಣಿನ ಬಿಸ್ಕತ್ತು' ತಿನ್ನುತ್ತಿದ್ದರು. ಅಪರೂಪಕ್ಕೆ ಹೊಟ್ಟೆ ತುಂಬಿಸಲು 'ಮಣ್ಣಿನ ಬಿಸ್ಕತ್ತು' ಮೊರೆ ಹೋಗುತ್ತಿದ್ದರು. ಆದರೆ ಈಗ 'ಮಣ್ಣಿನ ಬಿಸ್ಕತ್ತು' ಹೈತಿಯ ಬಡವರಿಗೆ ದಕ್ಕುವ ಏಕಮಾತ್ರ 'ಆಹಾರ'. ಇದರಿಂದ ಹಸಿವು ಹಿಂಗುವುದಿಲ್ಲ. ಬರಿಯ ಹೊಟ್ಟೆ ತುಂಬಿಸಲು ಇದರ ಮೊರೆ ಹೋಗುತ್ತೇವೆ ಎನ್ನುತ್ತಾರೆ ಅವರು. ಇದು ಜಗತ್ತಿನ ತುಂಬಾ ಹರಡಿರುವ ತೀವ್ರ ಆಹಾರ ಬಿಕ್ಕಟ್ಟಿನ ಅತ್ಯಂತ ಹೃದಯ ವಿದ್ರಾವಕ ರೂಪ.

ಇತಿಹಾಸದ ವಿಕೃತ ...

ಪುಟ 2 ರಿಂದ


ನಿಯತಕಾಲಿಕಗಳು ವರ್ಷಗಟ್ಟಲೆಯಿಂದ ಬಾಕಿ ಉಳಿಯುತ್ತಾ ಬಂದಿವೆ. ಪುರಾತತ್ವ ಇಲಾಖೆಯ ಸಲಹಾ ಮಂಡಳಿ ಹನ್ನೆರಡು ವರ್ಷವಾದರೂ ಇನ್ನೂ ಸಭೆ ಸೇರಿಲ್ಲ. 1970ರಲ್ಲೇ ಅಯೋಧ್ಯೆಯಲ್ಲಿ ಉತ್ಖನನ ನಡೆಸಲಾಗಿತ್ತು. ಅದರ ವರದಿಯನ್ನು ಇವತ್ತಿಗೂ ಗುಪ್ತವಾಗಿರಿಸಲಾಗಿದೆ. ಉತ್ಖನ ನಡೆಸಿದ ಬಿ.ಬಿ.ಲಾಲ್ ಅಂದು ಹೇಳುತ್ತಿದ್ದುದೇ ಒಂದು, ಈಗ ಹೇಳುತ್ತರುವುದೇ ಒಂದು! ಕಾಲಕಾಲಕ್ಕೆ ವರದಿ ಪ್ರಕಟವಾಗಿರುತ್ತಿದ್ದರೆ ಈ ಅನುಮಾನಕ್ಕೆ ಎಡೆಯಿರುತ್ತಿತ್ತೆ?

ಈಗಂತೂ ಈ ವಿಭಾಗದಲ್ಲಿ ಬರೇ ಅಯೋಗ್ಯರೇ ತುಂಬಿಕೊಂಡಿದ್ದಾರೆ. ಮೇಲಿನ ಆದೇಶಕ್ಕನುಸರಿಸಿ ಇವರು ಉತ್ಖನನದ ವರದಿಯನ್ನು ತಯಾರಿಸುತ್ತಾರೆ. ಅವಶೇಷಗಳನ್ನು ಸಾರ್ವಜನಿಕರಿಂದ ಮುಚ್ಚಿಡುತ್ತಾರೆ. ಕಪೋಲ ಕಲ್ಪಿತ ಕಥೆಗಳನ್ನೇ ಎಎಸ್ಐ ತನ್ನ ಸಂಶೋಧನಾ ವರದಿಯೆಂದು ಪ್ರಚಾರಪಡಿಸುತ್ತದೆ.

ರೈತ ನಾಯಕ, ಧೀಮಂತ ಕ್ರಾಂತಿಕಾರಿ.....

...ಗಲಿದ ಕಮ್ಯುನಿಸ್ಟ್ ಚಳುವಳಿಯ ನೇತಾರ ...ರ್ಜಿತ್ ಸಾವಿನ ಸುದ್ದಿ ತಿಳಿದ ಕೂಡಲೇ ...ಪಿಐ(ಎಂ) ಪಕ್ಷದ ರಾಜ್ಯ ಸಮಿತಿ ಕಛೇರಿಯಲ್ಲಿ ...ಂಜಿ ಶ್ರದ್ಧಾಂಜಲಿ ಸಭೆ ನಡೆಯಿತು. ಈ ...ಂದರ್ಭದಲ್ಲಿ ಮಾತನಾಡಿದ ರಾಜ್ಯ ...ಾರ್ಯದರ್ಶಿ .ಮಂಡಳಿ ಸದಸ್ಯ ...ತ್ಯಾನಂದ ಸ್ವಾಮಿಯವರು 1931 ರಲ್ಲಿ ...ಗತ್‌ಸಿಂಗ್‌ರನ್ನು ಗಲ್ಲಿಗೇರಿಸಿದ್ದರಿಂದ ...ರ್ಜಿತ್‌ರ ರಕ್ತ ಕುದಿದಿತ್ತು. ಭಗತ್ ...ಂಗ್ ಮತ್ತು ಸಂಗಾತಿಗಳ ನೇತೃತ್ವದ ...ಂದೂಸ್ತಾನ್ ಸೋಷಲಿಸ್ಟಿಕ್ ...ಪಬ್ಲಿಕನ್ ಆರ್ಮಿಯ ಸದಸ್ಯರಾಗಿದ್ದ ...ವರೊಬ್ಬ ಸಾಮ್ರಾಜ್ಯಶಾಹಿ ವಿರೋಧಿ ...ೋರಾಟಗಾರರಾಗಿ ಬೆಳೆದು ಬಂದರು ...ಂದರು. ಭಗತ್‌ಸಿಂಗ್‌ರ ಪ್ರಥಮ ...ತಾತ್ಮ ದಿನಾಚರಣೆಯಂದು ಕೇವಲ 16ನೇ ...ಯಸ್ಸಿನಲ್ಲಿ ಹೋಷಿಯಾರ್‌ಪುರದ ಜಿಲ್ಲಾ ...ಮ್ಯಾಜಿಸ್ಟ್ರೇಟ್ ಕಛೇರಿ ಮೇಲೆ ಗುಂಡಿನ ದಾಳಿಗೂ ಹೆದರದೇ ರಾಷ್ಟ್ರಧ್ವಜ ಹಾರಿಸಿದ ಧೀಮಂತರು ಅವರು ಎಂದರು.

ನಂತರ ಮಾತನಾಡಿದ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ವಿ.ಜೆ.ಕೆ.ನಾಯರ್ ಸಿಪಿಐ ಪಕ್ಷದೊಳಗಿದ್ದು ಪಕ್ಷದ ಪರಿಷ್ಕರಣಾವಾದಿ ತಪ್ಪು ಧೋರಣೆ ವಿರುದ್ಧ ಹೋರಾಡಿ, ಸಿಪಿಐ(ಎಂ) ಪಕ್ಷವನ್ನು ರೂಪಿಸುವುದರಲ್ಲಿ ಮಹತ್ವದ ಪಾತ್ರವನ್ನು ವಹಿಸಿದವರು. ರಾಷ್ಟ್ರ ರಾಜಕಾರಣದಲ್ಲಿ ಕೋಮುವಾದಿ ಬಿಜೆಪಿಯನ್ನು ಅಧಿಕಾರದಿಂದ ದೂರವಿಡುವ ನಿಟ್ಟಿನಲ್ಲಿ ಹಾಗೂ ಕಾಂಗ್ರೆಸ್ - ಬಿಜೆಪಿಗಳಿಗೆ ಪರ್ಯಾಯವಾಗಿ ತೃತೀಯ ಶಕ್ತಿಯನ್ನು ರೂಪಿಸುವಲ್ಲಿ ಅಪಾರವಾಗಿ ಶ್ರಮಿಸಿದವರು ಸುರ್ಜಿತ್ ಎಂದರು.



ಮತ್ತೊಬ್ಬ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾಂ. ಜಿ.ಎನ್.ನಾಗರಾಜ್ ಮಾತನಾಡಿ ಸ್ವಾತಂತ್ರ್ಯನಂತರ - ದೇಶ ವಿಭಜನೆಯ ಸನ್ನಿವೇಶದಲ್ಲಿ ಜಮ್ಮು ಕಾಶ್ಮೀರವು ಭಾರತ ಒಕ್ಕೂಟವನ್ನು ಸೇರುವಂತೆ ಮಾಡುವಲ್ಲಿ, ಶೇಖ್ ಅಬ್ದುಲ್ಲಾರವರ ಆತ್ಮೀಯ ಒಡನಾಟವಿದ್ದ ಸುರ್ಜಿತ್ ಮಹತ್ವ ಪಾತ್ರವಹಿಸಿದರು. ಅದೇ ರೀತಿ ಪಂಜಾಬಿನ ಸಮಸ್ಯೆಯನ್ನು ಚೆನ್ನಾಗಿ ಅರಿತವರಾಗಿದ್ದ ಸುರ್ಜಿತ್, ಪಂಜಾಬ್‌ನ ಪ್ರತ್ಯೇಕತಾವಾದದ ವಿರುದ್ಧ ಭಯೋತ್ಪಾದಕ ಚಳುವಳಿ ವಿರುದ್ಧ ದೃಢ ನಿಲುವು ತಳೆದದ್ದಲ್ಲದೇ, ಅಕಾಲಿ ಚಳುವಳಿ ಹಾಗೂ ಭಾರತದ ಸರ್ಕಾರದ ನಡುವೆ 'ಲೋಂಗೋವಾಲ ಒಪ್ಪಂದ' ಏರ್ಪಡುವುದರಲ್ಲಿ ಮಹತ್ವದ ಪಾತ್ರ ವಹಿಸಿ, ದೇಶದ ಐಕ್ಯತೆಗೆ ದೊಡ್ಡ ಕಾಣಿಕೆ ನೀಡಿದ್ದಾರೆಂದರು. ಗ್ರಾಮೀಣ ಭಾರತದ ಕೃಷಿ ಸಮಸ್ಯೆ, ರೈತ, ಕೂಲಿಕಾರರ ಸಮಸ್ಯೆಗಳನ್ನು ಅರ್ಥ ಮಾಡಿಕೊಳ್ಳುವಲ್ಲಿ ಹಾಗೂ ಅದರ ಆಧಾರದಲ್ಲಿ ರೈತ, ಕೂಲಿಕಾರರ ಚಳುವಳಿ ಹಾಗೂ ಪಕ್ಷವನ್ನು ಬೆಳೆಸುವಲ್ಲಿ ಸುರ್ಜಿತ್ ಕೊಡುಗೆ ಅಪಾರ ಎಂದು ಜಿ.ಎನ್.ನಾಗರಾಜ್ ತಿಳಿಸಿದರು.

ಜನಶಕ್ತಿ ಪತ್ರಿಕೆಯ ಸಂಪಾದಕರೂ, ಸಿಪಿಐ(ಎಂ) ಕಾರ್ಯದರ್ಶಿ ಮಂಡಳಿ ಸದಸ್ಯರೂ ಆದ ಎಸ್.ವೈ.ಗುರುಶಾಂತ್ ಹಾಗೂ ಪಕ್ಷದ ರಾಜ್ಯ ಸಮಿತಿ ಸದಸ್ಯರು ಹಾಗೂ ಕಾರ್ಯಕರ್ತರು ಸಭೆಯಲ್ಲಿ ಪಾಲ್ಗೊಂಡಿದ್ದರು.

ಸುದ್ದಿಬಿಂಬ

ಇದು ವಿಜಯಕರ್ನಾಟಕದಲ್ಲಿಕಂಡ ಸುದ್ದಿ

ಸರ್ಕಾರಿ ಸೇವೆಗೆ ಬಡವರ ಲಂಚ 900 ಕೋಟಿ

ಸಾರ್ವಜನಿಕ ಮೂಲ ಸೇವೆಗಳನ್ನು ಪಡೆಯಲು ...ಾರತದ ಬಡಪ್ರಜೆಗಳು ಕೇವಲ ಮೂರು ...ಂಗಳಲ್ಲಿ 900 ಕೋಟಿ ರೂ. ಲಂಚ ನೀಡಿದ್ದಾರೆ ...ಂದು ಹೊಸ ಅಧ್ಯಯನವೊಂದು ತಿಳಿಸಿದೆ.

ಟ್ರಾನ್ಸ್‌ಪರೆನ್ಸಿ ಇಂಟರ್‌ನ್ಯಾಷನಲ್ ...ಡಿಯಾ(ಟಿಐಐ) ಸ್ವಸಹಾಯ ಸಂಸ್ಥೆ 2007ರ ...ೆಂಬರ್‌ನಿಂದ 2008ರ ಜನವರಿವರೆಗೆ ನಡೆಸಿದ ...ಮೀಕ್ಷೆಯಲ್ಲಿ ಈ ವಿಷಯ ತಿಳಿದುಬಂದಿದೆ. ...ತತನದ ರೇಖೆಗಿಂತ ಕೆಳಗಿರುವ ಜನರು 11 ...ಸೇಯ ವಿವಿಧ ಸೇವೆಗಳನ್ನು ಪಡೆಯಲು 883 ...ೋಟಿ ರೂ.ಗಳನ್ನು ಲಂಚ ರೂಪದಲ್ಲಿ ...ಡಿರುವುದು ಸಮೀಕ್ಷೆಯಲ್ಲಿ ತಿಳಿದುಬಂದಿದೆ.

...ಪೋಲೀಸ್ ಇಲಾಖೆ ಎಲ್ಲಕ್ಕಿಂತ ಹೆಚ್ಚು ...ಷ್ಟವಾಗಿದೆ. ಇಲ್ಲಿ ಪ್ರತಿ ಐವರಲ್ಲಿ ಇಬ್ಬರು ಕೆಲಸ ...ಡಿಕೊಡಲು ಲಂಚ ಕೇಳುತ್ತಾರೆ. ಭೂ ದಾಖಲೆ ...ತ್ತು ನೋಂದಣಿ ವಿಭಾಗಕ್ಕೆ ಲಂಚ ...ಯುವಿಕೆಯಲ್ಲಿ ದ್ವಿತೀಯ ಸ್ಥಾನ.

...ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರ ...ಗೆ ತಂದಿರುವ ಮಹಾತ್ವಾಕಾಂಕ್ಷೆಯ ರಾಷ್ಟ್ರೀಯ ...ಮೀಣ ಉದ್ಯೋಗ ಖಾತರಿ ಯೋಜನೆ ಸಹ ...ಚದ ಪಿಡುಗಿನಿಂದ ಹೊರತಾಗಿಲ್ಲ ಎಂದು ...ಜಾಗಿ ಸೆಂಟರ್ ಫಾರ್ ಮಿಡಿಯಾ ಸ್ಟಡೀಸ್ ...ರುವ ಸಮೀಕ್ಷೆ ಹೇಳಿದೆ.

...12ನೇ ತರಗತಿವರೆಗಿನ ಶಾಲಾ ಶಿಕ್ಷಣ ...ರ್ಯಕ್ರಮ ಭ್ರಷ್ಟತೆಯಲ್ಲಿ ಕೊನೆಯ ಸ್ಥಾನ ಪಡೆದಿದೆ. ಆದರೆ ಬಡತನ ರೇಖೆಗಿಂತ ಕೆಳಗಿನ ಮಂದಿ ತಮ್ಮ ಮಕ್ಕಳನ್ನು ಶಾಲೆಗಳಿಗೆ ಸೇರಿಸಲು 12 ಕೋಟಿ ರೂ. ಲಂಚ ನೀಡಿದ್ದಾರೆ.

ಬಡವರಿಗೆ ಸರ್ಕಾರಿ ಆಸ್ಪತ್ರೆ ಹೊರತುಪಡಿಸಿದರೆ ಬೇರೆ ದಾರಿಯಿಲ್ಲ. ಇಲ್ಲಂತೂ ಸನ್ನಿವೇಶ ಮತ್ತಷ್ಟು ನಿರಾಶಾದಾಯಕವಾಗಿದೆ. ಬಡತನ ರೇಖೆಗಿಂತ ಕೆಳಗಿನ ಸುಮಾರು 40 ಲಕ್ಷ ಮಂದಿ ಆಸ್ಪತ್ರೆಯಲ್ಲಿ ಪ್ರವೇಶ ಪಡೆಯುವುದಕ್ಕಾಗಿಯೇ ಲಂಚ ನೀಡಬೇಕಾಗಿದೆ. ಅಷ್ಟೇ ಅಲ್ಲ. ಬೆಡ್, ಪ್ರಯೋಗಾಲಯ ಪರೀಕ್ಷೆ, ಹೊರರೋಗಿಗಳ ವಿಭಾಗದ ಚೀಟಿ ಪಡೆಯಲು ಸಹ ಲಂಚ ನೀಡಬೇಕಾಗಿದೆ.

ಲಂಚ ನೀಡಲು ನಿರಾಕರಿಸಿದ್ದಕ್ಕಾಗಿ ಅಥವಾ ಅದನ್ನು ಭರಿಸುವ ಶಕ್ತಿಯಿಲ್ಲದ ಕಾರಣ ಸುಮಾರು ಹತ್ತು ಲಕ್ಷ ಮಂದಿ ಆಸ್ಪತ್ರೆ ಸೇವೆ ಪಡೆಯುವಲ್ಲಿ ಸೋತಿದ್ದಾರೆ.ತಮಗಾಗಿ ಮೀಸಲಿರುವ ಸಾರ್ವಜನಿಕ ವಿತರಣಾ ವ್ಯವಸ್ಥೆಯಡಿ ಪಡಿತರ ಪಡೆಯಲು ಅಥವಾ ಪಡಿತರ ಪೂರೈಕೆದಾರರನ್ನು ಸಂಪರ್ಕಿಸಲು 53.6 ಲಕ್ಷ ಬಡತನ ರೇಖೆಗಿಂತ ಕೆಳಗಿನ ಜನರು ಲಂಚ ನೀಡಬೇಕಾಗಿದೆ.

ಪಡಿತರ ಚೀಟಿ ಪಡೆಯಲು ಸಹ ಅಧಿಕಾರಿಗಳಿಗೆ ಲಂಚ ನೀಡಿದ್ದೇವೆ ಎಂದು ಬಹುತೇಕ ಜನರು ಹೇಳಿದ್ದಾರೆ. ಅಷ್ಟೇ ಅಲ್ಲ, ವಿದ್ಯುತ್ ಸಂಪರ್ಕ ಪಡೆಯಲು ಅಥವಾ ಮೀಟರ್ ದುರಸ್ತಿಪಡಿಸಲು ಸಹ ಲಂಚ ನೀಡಬೇಕಾಗಿದೆ ಎಂದು ಜನರು ತಿಳಿಸಿದ್ದಾರೆ.

ಇದು ಪ್ರಜಾವಾಣಿಯಲ್ಲಿ ಕಂಡ ಸುದ್ದಿ

ಮೀಟರ್ ಅಳವಡಿಸದಿದ್ದರೆ ಉಚಿತ ಪೂರೈಕೆ ಇಲ್ಲ- ಮುಖ್ಯಮಂತ್ರಿ ಪಂಪ್‌ಸೆಟ್‌ಗಳಿಗೆ ಉಚಿತ ವಿದ್ಯುತ್

ಬೆಂಗಳೂರು : ರೈತರ ಹತ್ತು ಅಶ್ವಶಕ್ತಿವರೆಗಿನ ನೀರಾವರಿ ಪಂಪ್‌ಸೆಟ್‌ಗಳಿಗೆ ಉಚಿತ ವಿದ್ಯುತ್ ನೀಡುವ ಯೋಜನೆಯನ್ನು ಶುಕ್ರವಾರದಿಂದಲೆ ಜಾರಿಗೊಳಿಸಲು ಹಾಗೂ ಬಾಕಿ ಉಳಿಸಿಕೊಂಡಿರುವ ಮೊತ್ತವನ್ನು ಕಂತುಗಳಲ್ಲಿ ವಸೂಲಿ ಮಾಡಲು ಸಚಿವ ಸಂಪುಟ ಸಭೆಯಲ್ಲಿ ನಿರ್ಧರಿಸಲಾಗಿದೆ.

ಗುರುವಾರ ನಡೆದ ಸಂಪುಟ ಸಭೆಯಲ್ಲಿ ರೈತರು ಹಲವು ವರ್ಷಗಳಿಂದ ಬಾಕಿ ಉಳಿಸಿಕೊಂಡಿರುವ ನೀರಾವರಿ ಪಂಪ್‌ಸೆಟ್‌ಗಳ 2350 ಕೋಟಿ ರೂಪಾಯಿ ಬಿಲ್ ಮೊತ್ತವನ್ನು ಹಂತಹಂತವಾಗಿ ಕಂತುಗಳಲ್ಲಿ ವಸೂಲಿ ಮಾಡಲು ಹಾಗೂ ಮೀಟರ್‌ಅನ್ನು ಕಡ್ಡಾಯವಾಗಿ ಅಳವಡಿಸಲು ತೀರ್ಮಾನಿಸಲಾಗಿದೆ. ಯಾವ ಯಾವ ಜಿಲ್ಲೆಗಳಿಂದ ಎಷ್ಟು ಹಣ ಬಾಕಿ ಇದೆ ಎಂಬ ಬಗ್ಗೆ ಮಾಹಿತಿ ತರಿಸಿಕೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ. ಎರಡು ವರ್ಷಗಳ ಒಳಗಾಗಿ ಎಲ್ಲ ನೀರಾವರಿ ಪಂಪ್‌ಸೆಟ್‌ಗಳಿಗೆ ಮೀಟರ್ ಹಾಕಬೇಕು ಎಂದು ಸಭೆಯಲ್ಲಿ ನಿರ್ಧರಿಸಲಾಯಿತು ಎಂದು ಉನ್ನತ ಮೂಲಗಳು ತಿಳಿಸಿವೆ. ಇದಕ್ಕೂ ಮುನ್ನ ವಿಧಾನ ಪರಿಷತ್‌ನಲ್ಲಿ ಬಜೆಟ್ ಮೇಲಿನ ಚರ್ಚೆಗೆ ಉತ್ತರಿಸುವಾಗ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಮೀಟರ್ ಅಳವಡಿಸಿದ ರೈತರಿಗೆ ಮಾತ್ರವೇ ಉಚಿತ ವಿದ್ಯುತ್ ನೀಡಲಾಗುತ್ತದೆ ಎಂದು ತಿಳಿಸಿದರು.

ಚುಚ್ಚುಮದ್ದು

ವಿಸ್ತರಿಸಿ

- ಕೇಂದ್ರ ಸರ್ಕಾರದ ರೈತರ ಸಾಲ ಮನ್ನಾ ಯೋಜನೆಯು ದೇಶದಲ್ಲಿ ಸದ್ದಿಲ್ಲದ ಕ್ರಾಂತಿಯನ್ನು ಉಂಟು ಮಾಡಿದೆ.

  -ಪಿ.ಚಿದಂಬರಂ

- ಖಾಸಗಿ ಸಾಲಬಾಧೆಯಿಂದ ನರಳುವವರಿಗೂ ನಿಮ್ಮ ಕ್ರಾಂತಿಯನ್ನು ಸ್ವಲ್ಪ ವಿಸ್ತರಿಸ್ತೀಪ್ಪ.

★

ಮಧ್ಯವರ್ತಿ ಮಾತು

- 'ರೈತರೇ, ಯಾವುದೇ ಮಧ್ಯವರ್ತಿಗಳ ಮಾತನ್ನು ಕೇಳಬೇಡಿ. ಮೀಟರ್‌ಹಾಕದಿದ್ದರೆ ಉಚಿತ ವಿದ್ಯುತ್ ಕೊಡುವುದಿಲ್ಲ, ಕೂಡಲೇ ಮೀಟರ್ ಅಳವಡಿಸಿಕೊಳ್ಳಿ'

  -ಬಿ.ಎಸ್.ಯಡಿಯೂರಪ್ಪ

- ಹೌದು ರೈತರೇ, ಮಧ್ಯವರ್ತಿಗಳ (ರೈತ ಸಂಘಗಳು, ಹೋರಾಟಗಾರರ) ಮಾತು ಕೇಳಬೇಡಿ. ಐಎಂಎಫ್, ವಿಶ್ವಬ್ಯಾಂಕ್ ಆದೇಶ ಪಾಲಿಸಿ, ವಿದ್ಯುತ್ ಕ್ಷೇತ್ರದ ಖಾಸಗೀಕರಣಕ್ಕೆ ಅಡ್ಡಿ ಮಾಡಬೇಡಿ, ದಾರಿ ಬಿಡಿ.

ಜನಶಕ್ತಿ ಕಂಬನಿ

ದುಡಿಯುವ ವರ್ಗದ ವಿಮೋಚನೆಯ ಹೋರಾಟದಲ್ಲಿ, ದೇಶದ ಐಕ್ಯತೆಗಾಗಿ ಬದುಕಿನುದ್ದಕ್ಕೂ ಶ್ರಮಿಸಿದ ಸಂಗಾತಿ ಹರ್‌ಕಿಶನ್‌ಸಿಂಗ್ ಸುರ್ಜಿತ್ ಅಗಲಿಕೆಯ ಸಂದರ್ಭದಲ್ಲಿ ಜನಶಕ್ತಿ ಕನ್ನಡ ವಾರಪತ್ರಿಕೆ, ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸುತ್ತದೆ.

- ಸಂ

ವಿಶ್ವದ ಕ್ರೀಡಾ ಹಬ್ಬ ಒಲಂಪಿಕ್ಸ್‌ಗೆ ಭರದ ಸಿದ್ಧತೆ... ಬೀಜಿಂಗ್ ಒಲಂಪಿಕ್ಸ್‌ಗೆ ದಿನಗಣನೆ ಆರಂಭ - ಕ್ರೀಡಾ ಜಾತ್ರೆಗೆ ಸರ್ವ ಸನ್ನದ್ಧ - ವಿಸ್ಮಯ ಸೃಷ್ಟಿಸಲಿರುವ ಚೀನಾ

Beijing 2008







ನಮ್ಮೂರಿಗೆ ಬಂದಿರಾ, ನಿಮಗಿದೋ ಆತ್ಮೀಯ ಸ್ವಾಗತ

ಒಲಂಪಿಕ್ಸ್ Count down ಗಡಿಯಾರ





ಕ್ರೀಡಾಳುಗಳ ಸೇವೆಗೆ ಸಿದ್ಧರಾಗಿರುವ ಸ್ವಯಂಸೇವಕರು

ಸಾಂಸ□ತಿಕ ಕಾರ್ಯಕ್ರಮಕ್ಕೆ ಸಿದ್ಧರಾಗುತ್ತಿರುವ ಚಿಣ್ಣರು...




ತಿಯಾನ್‌ಮನ್ ಚೌಕದಲ್ಲಿ ಸಾಹಸ ಪ್ರದರ್ಶನದ ತಾಲೀಮು





ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ತಯಾರಿ



ಆಟೋಟಕ್ಕೆ ಸಿದ್ಧವಾಗಿರುವ ಕ್ರೀಡಾಂಗಣ(ಹಕ್ಕಿಗೂಡು)ದ ವಿಹಂಗಮ ನೋಟ



ಒಲಂಪಿಕ್ಸ್ ಪ್ರಚಾರ ರಾಯಭಾರಿ ಪ್ರಸಿದ್ಧ ಚಿತ್ರನಟ ಜಾಕೀಚಾನ್ ಜ್ಯೋತಿಯೊಂದಿಗೆ

JANASHAKTHI KANNADA VARA PATRIKE : Printed by G.N.NAGARAJ, No 12. 18th Cross, S.R.Nagar, BANGALORE-560027
Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at: Kriya Prakashana, 12. 18th Cross, S.R.Nagar, BANGALORE - 560027 Karnataka (State) and Published at BANGALORE No 12.18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor: S.Y.GURUSHANTH

ಜನಶಕ್ತಿ

ದುಡಿವ ಜನರ ಪ್ರಾಣಮಿತ್ರ

ಕನ್ನಡ ವಾರಪತ್ರಿಕೆ

ಸಂಪುಟ 2 ಸಂಚಿಕೆ 33

ಆಗಸ್ಟ್ 17, 2008

ರೂ. 5/-

www.janashakthi.org

ಮಂಗಳೂರು :



ನೀರಿನ ಹಕ್ಕು ಕೇಳಿದವರ ತಲೆ ಒಡೆದ ಕೇಡಿಗರು

ವಾಹ್ ವಾಹ್ ಚೀನಾ !





ಆಗಸ್ಟ್ ಮಹಾ ಮುಷ್ಕರಕ್ಕೆ ಸಜ್ಜಾಗುತ್ತಿದೆ ಜನತೆ

ಜಮ್ಮು – ಕಾಶ್ಮೀರದಲ್ಲಿ ದಳ್ಳುರಿ

ಮತ್ತೆ 'ಕೋಕಾ'ದ ಅಪಾಯ



ಇತಿಹಾಸದ ಪುಟಕ್ಕೆ ಕಾಂ. ಸುರ್ಜಿತ್

ವಿಶ್ವದ ಕ್ರೀಡಾ ಹಬ್ಬ ಒಲಂಪಿಕ್ಸ್‌ಗೆ ಭರದ ಸಿದ್ಧತೆ... ಬೀಜಿಂಗ್ ಒಲಂಪಿಕ್ಸ್‌ಗೆ ದಿನಗಣನೆ ಆರಂಭ - ಕ್ರೀಡಾ ಜಾತ್ರೆಗೆ ಸರ್ವ ಸನ್ನದ್ಧ - ವಿಸ್ಮಯ ಸೃಷ್ಟಿಸಲಿರುವ ಚೀನಾ

Beijing 2008







ನಮ್ಮೂರಿಗೆ ಬಂದಿರಾ, ನಿಮಗಿದೋ ಆತ್ಮೀಯ ಸ್ವಾಗತ

ಒಲಂಪಿಕ್ಸ್ Count down ಗಡಿಯಾರ






ಕ್ರೀಡಾಳುಗಳ ಸೇವೆಗೆ ಸಿದ್ಧರಾಗಿರುವ ಸ್ವಯಂಸೇವಕರು

ಸಾಂಸ□ತಿಕ ಕಾರ್ಯಕ್ರಮಕ್ಕೆ ಸಿದ್ಧರಾಗುತ್ತಿರುವ ಚಿಣ್ಣರು...



ತಿಯಾನ್‌ಮನ್ ಚೌಕದಲ್ಲಿ ಸಾಹಸ ಪ್ರದರ್ಶನದ ತಾಲೀಮು





ಆಟೋಟಕ್ಕೆ ಸಿದ್ಧವಾಗಿರುವ ಕ್ರೀಡಾಂಗಣ(ಹಕ್ಕಿಗೂಡು)ದ ವಿಹಂಗಮ ನೋಟ



ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ತಯಾರಿ



ಒಲಂಪಿಕ್ಸ್ ಪ್ರಚಾರ ರಾಯಭಾರಿ ಪ್ರಸಿದ್ಧ ಚಿತ್ರನಟ ಜಾಕೀಚಾನ್ ಜ್ಯೋತಿಯೊಂದಿಗೆ

JANASHAKTHI KANNADA VARA PATRIKE : Printed by G.N.NAGARAJ, No 12. 18th Cross, S.R.Nagar, BANGALORE-560027
Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana, 12. 18th Cross, S.R.Nagar, BANGALORE - 560 027 Karnataka (State) and Published at BANGALORE No 12.18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor : S.Y.GURUSHANTH